ಮಗು ಸಾಧಾರಣಿಯವರೆಗೆ ಹೊಂದಿದ ಆಯಾಸ ಅಶಕ್ತಿಯಾಗುತ್ತದೆ. ಒಂದು ಮಗುವಿನ ನಿಶಕ್ತಿಯಾಗುವುದರಿಂದ ಮುಂದಾಗುತ್ತದೆ. ಈ ಕಾರಣದಿಂದಲೇ ಅಥವಾ ಬೇರೆ ಕಾರಣಗಳಿಂದಲೂ ಮಕ್ಕಳೇ ಸಾಧಾರಣ ಮಗುವು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಲು. ಇದರ ಸೇವನೆಯಿಂದ ಮುಟ್ಟು-ಮೈಯು ನೇಮದಂತೆ ಸುರುವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂತಾನವನ್ನು ತಡೆಗಟ್ಟುವ ಚೂರ್ಣವಾಗಿದ್ದು ಇದರಲ್ಲಿ ಗರ್ಭಪಾತದ ಭಯವಾಗುವುದು. ಪಥ್ಯಾದಿ ಪಥ್ಯವಿರಬೇಕಾಗಿಯೂ ಇಲ್ಲ. ಯಾವುದೇ ಕಾರಣದಿಂದಲೂ ಮಗು ಬೇಡವೆಂದಿರುವವರು ಒಮ್ಮೆ ಸರ್ವಶ್ರೇಷ್ಠ: ಇದು ಬಿ. ಪಿ. ವೈದ್ಯ ಎಲ್. ಸಿ. ಪಿ. ಎಸ್. ಕೇವಲ ಪುರುಷರು, ಸ್ತ್ರೀಯರು ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಪಾತವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಪಥ್ಯವು. ಕ್ರಯ: ರೂ. ೪-೦-೦. ಪೋಸ್ಟ್ ಆಗಿ ೪-೪-೦.

ಪ್ರಿಲಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (ಸ. M. ಪಿ.

ಗಿಲ್ಲದಿನೇ ಇನವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುರಾ, ಸಾಲಮಿಶ್ರಿ, ಕಲ್ಮದ, ಮಾಶ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವನ್ನೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಡ್ಡುವುದು, ಮೆಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು.ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ವಿಶ್ರಣ ದಶಮೂಲ

ಭಾಣಂತಿಯರಿಗೆ ಅತ್ಯುತ್ತಮವಾದ ಶಕ್ತವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1—8—0.

ಎಂ. ಗುಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್
ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: 1. ಡಾಕ್ಟರ್ ಬಿ. ಎಚ್. ವಿದ್ಯನಾಥ ಶೆಣೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಸುರ್ಜಿಂಟ್. ತೀರ್ಥಳ್ಳಿ.

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:-

The Kerala Tea Syndicate
PONNANI—(S. Malabar)

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

ಡೋಂಗರೆ'ಸ್ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾಗಿರುವ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುಬುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಜೀರ್ಣಶಕ್ತಿಗೆ ಸಹಾಯ ಮಾಡುತ್ತದೆ.

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣವಡಿಸುತ್ತದೆ.

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ.

ಸಿಗುವ ಸ್ಥಳ:—

ಷಾ ಮತ್ತು ಕಂಪನಿ
—ಗವರ್ನರ್‌ಮೆಂಟ್ ಕಾಂಟ್ರಾಕ್ಟರ್ಸ್, ಮಂಗಳೂರು



ಈ ಸಂಚಿಕೆಗೆ ಒಂದಾಣೆ.] ಶ್ರೀಮದ್ಭಾಷಾ ಪ್ರಭುತ್ವಂಗಳಿಂದ ಈ ಪತ್ರಿಕೆಯಲ್ಲಿ ಸ್ಥಳಾವಕಾಶವಿಲ್ಲದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ನಿತ್ಯೇನೈವಾರ್ಥಸ್ಯಾಹರ್ಮುಹುರ್ನ ದೇವಾ । ನ ಭೇಜುರೇ ಧೀಮವಿಮೇಣ ಧೀತಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಸ್ಥಿತಾರ್ಥಾ ವಿರಮಂತಿ ಧೀರಾ ॥ ೧ ॥

ದೊರೆಯಲನುಮರಕ್ಕಗಳು ಸಾ । ಗರವ ಮಥಿಸಲು ಸುರರಿಗದರಂ । ಹರುಷವಾಯಿತೆ ಮತ್ತೆ ವಿಷ್ಣವ ಸುಧೆಯ ಬಿರುತಿರಲು ।
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಸ್ಥಿತಾರ್ಥವನು ॥ ೧ ॥

ಮಂಗಳೂರು ಈ ೨೨ನೇ ಒಕ್ಟೋಬರ ೧೯೩೭. (22–10–'37) ಸಂಚಿಕೆ ೧೨

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,460	15,14,855	1,16,58,706
1930	59,97,500	9,58,387	28,00,970	2,06,68,328
1933	94,16,500	16,12,692	50,04,871	3,07,98,434
1936	1,36,00,180	26,76,274	82,59,451	5,14,38,205

The Company offers all the up-to-date schemes of Assurances Family Safe Guard Policy a special feature.

Application for agencies will be received from honest and respectable gentlemen.

Organisers appointed with pay and allowance.

Gentlemen with organising ability and who can guarantee Business need apply

KOCHIKAR BROTHERS,

Madras Branch Secretaries,

Post Box 337, Mount Road, MADRAS

Phone No. 8245

Apply to any of the following Offices:-

Ottapalam	Central Station Road, Trivandrum	Visveshwarapuram Circle, Bangalore City.	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No 4

ಅಮೃತಾಂಜನ

ತಲೆನೋವು, ತಲೆಸುತ್ತು, ಜ್ವರ, ಚಳಿಗೆ, ಭುಜ, ಪಕ್ಕ ನೋವುಗಳಿಗೂ ಎದೆನೋವು, ಶ್ವಾಸ ಗಳು, ಬಾಯಿಹುಳ್ಳುವುದು, ಹೊಟ್ಟೆ ನೋವು ಮುಂತಾದ ಬೇನೆ, ವಕ್ಕಳಾಕ, ಮೈಮಿ ಮೊದಲಾದ ಎಲ್ಲಾ ರೋಗಗಳಿಗೂ ಅತ್ಯದ್ಭುತ.

ಕ್ಷಿ, ಕಜಿಲೆ, ಹುಣ್ಣಕ್ಕಿ, ಹುಳುಕ್ಕಿ, ಸಿಕ್ಕ ಅವಿದ್ದವ, ತೆಕ್ಕುಜ್ಜು, ವೈಷ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಅತ್ಯಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು ಕಲಿಕತ್ತ.

ಮಂಗಳೂರಲ್ಲಿ ಈ ಔಷಧಿಯು ದೊರೆಯುತ್ತದೆ.

ರಾಮಾಚಾರಿಗೂ ಹೀಗೆ ಗುರುಗಳಿಕ್ಕು ಬರಿದಿದ್ದಾಗ, ಅವರಕ್ಕಿ ತುಸುಕ್ಷವಾದುದು ಧಾನ್ಯವೆಂದು!

ತುಕಾರಾಮ.

ತುಕಾರಾಮನು ದೇಹೂ ಎಂಬ ಊರಲ್ಲಿ ಜಗದ ಬೆಳಕನ್ನು ಕಂಡ. ಅವನಿಗೆ ಹದಿಮೂರನೆಯ ವಯಸ್ಸಿನಲ್ಲೇ ವಿವಾಹವಾಯಿತು. ಆದರೆ ಅತಿಯು ಯಾವಾಗಲೂ ರೋಗಿಯೇ ಆಗಿದ್ದುದರಿಂದ ಅವನು ಇನ್ನೊಬ್ಬಳನ್ನು ವಿವಾಹವಾದನು. ಅವನ ತಂದೆಯು ತೀರಿದಾಗ ತುಕಾರಾಮನಿಗೆ ಭರೇ ಹದಿನೇಳು ವರ್ಷ ವಯಸ್ಸು. ನಂತರ ನಾಲ್ಕು ವರ್ಷ ಜೀವನವು ಸುಸೂತ್ರವಾಗಿ ಸಾಗಿತು. ಅಷ್ಟರಲ್ಲಿ ಅವನ ಹಿರಿಯಣ್ಣನ ಹೆಂಡತಿಯು ತೀರಿಹೋದುದರಿಂದ ಅವನು ತೀರ್ಥಯಾತ್ರಾಟನೆಗೆ ಹೊರಟ. ಈಗ ಸಂಸಾರ ನಿರ್ವಹಣದ ಭಾರವೆಲ್ಲವೂ ತುಕಾರಾಮನ ಮೇಲೆಯೇ ಬಿದ್ದಿತು. ಅವನು ತನ್ನ ಜೀವನವನ್ನು ಬರೇ ಒಂದು ಜೀವಸಿನಂಗದಿಯಿಂದ ಸಾಗಿಸಬೇಕಾಗಿದ್ದಿತು. ಈ ವ್ಯಾಪಾರದಲ್ಲಿ ಅವನಿಗೆ ಬಹಳ ಸಾಲವಾಯಿತು. ಅವನ ದ್ವಿತೀಯ ಪತ್ನಿಯು ಯಾವಾಗಲೂ ಜಗಳಗಂಟಿಯೇ ಆಗಿದ್ದಳು. ಇದರಿಂದ ಅವನಿಗೆ ಸಂಸಾರದಲ್ಲಿ ಶಾಂತಿಯೇ ಸಿಗದಾಯಿತು. ಕೊನೆಗೆ ಅವನು ಸಂಸಾರವನ್ನು ತ್ಯಜಿಸಿ, ಪಾಂಡುರಂಗನ ಭಜನೆಗೆ ತೊಡಗಿದ. ಅವನು ಪ್ರಾತಃಕಾಲದಿಂದ ಸಾಯಂಕಾಲದ ಕನಕ ಪಾಂಡುರಂಗನ ಗುಡಿಯಲ್ಲಿ ಕುಳಿತು, ದೇವರ ಪೂಜೆಯನ್ನೂ ಅಭಂಗಗಳನ್ನೂ ರಚಿಸಿ, ಭಜನೆಯನ್ನೂ ಮಾಡುತ್ತಿದ್ದ. ಹಲವು ವೇಳೆ ಅವನು ಊರ ಸಮೀಪದಲ್ಲಿರುವ ಗುಡ್ಡಕ್ಕೆ ಹೋಗಿ, ಜ್ಞಾನೇಶ್ವರಿಯನ್ನು ಓದುತ್ತಿದ್ದ. ಸಾಯಂಕಾಲದ ಹೊತ್ತು ಪಾಂಡುರಂಗನ ದೇಗುಲಕ್ಕೆ ತೆರಳಿ, ಹರಿಕೀರ್ತನೆಯನ್ನು ಮಾಡಲಾರಂಭಿಸಿದ. ಕೊನೆಗೆ ಅವನು ತನ್ನ ಸಾಧನೆಯಲ್ಲಿ ಯಶಸ್ವಿಯಾದ. ಪಾಂಡುರಂಗನನ್ನು ಸ್ತುತಿಸುವಾಗ ಅವನ ಬಾಯಿಯಿಂದ ಅಭಂಗಗಳೇ ಹೊರಬರಲಾರಂಭಿಸಿದವು. ಆ ಅಭಂಗಗಳು ಎಷ್ಟು ಭಾವಪೂರ್ಣವಾಗಿದ್ದುದೆಂದರೆ ಆಲಿಸುವವರು ಕೂಡ ಆಕ್ಷಣ ಆ ಸ್ವರ್ಗ ಸಾಮ್ರಾಜ್ಯದ ಸುಖವನ್ನೇ ಅನುಭವಿಸುತ್ತಿದ್ದರು. ಕೊನೆಗೊಮ್ಮೆ ಅವನ ವೈರಿಗಳು ಅವನು ಬರೆದ ಅಭಂಗಗಳನ್ನು ಇಂದ್ರಾಣಿಯಲ್ಲಿ ಬಿಸುಟರು. ಅದರಿಂದ ಶೋಕಗ್ರಸ್ತನಾದ ತುಕಾರಾಮನು ಇಂದ್ರಾಣಿಯ ತೀರದಲ್ಲಿ ಹದಿಮೂರು ದಿನ ಉಪವಾಸ ವ್ರತವನ್ನು ಮಾಡಿದ. ಕೊನೆಗೆ ಹದಿಮೂರನೇ ದಿನ ಪಾಂಡುರಂಗನು ಅವನ ಭಕ್ತಿಗೆ ಸಂತುಷ್ಟನಾಗಿ ಆ ಅಭಂಗಗಳನ್ನು ತಂದಿತ್ತು, ತನ್ನ ನಿಜರೂಪವನ್ನು ತೋರಿಸಿದನು.

ತುಕಾರಾಮನು ನಂತರ ಹದಿನೈದು ವರ್ಷ ಕಾಲ ತನ್ನ ಅಭಂಗಗಳನ್ನು ಹಾಡಿ ಬೋಧಿಸಿ, ಕೊನೆಗೊಂದು ದಿನ ಪಾಂಡುರಂಗನಿಂದ ಕಳುಹಿಸಲ್ಪಟ್ಟ ಪುಷ್ಪಕವಿಮಾನದಲ್ಲಿ ಕುಳಿತು, ಪಾಂಡುರಂಗನ ಪಾದಾಂಬುಜವನ್ನು ಸೇರಿದ.

ಚೀನದಿಂದ ಓಡಿಬಂದ ಭಾರತೀಯರು

ಷಾಂಗ್ಹಾಯಿಂದ ಸ್ವದೇಶಕ್ಕೆ ಹೊರಟ ಭಾರತೀಯರ ಎರಡನೇ ತಂಡವು ಅಕ್ಟೋಬರ್ ೩೧ ರ ವಾರದಲ್ಲಿ ಕಲ್ಕತ್ತೆಯನ್ನು ತಲಪಲಿರುವುದು. ಇನ್ನೂ ಸ್ವಲ್ಪ ಮಂದಿ ಬರಲಿರುವರು.

ತುರ್ತು ಪ್ರಯಾಣಕ್ಕೆ ಸಿದ್ಧರಾಗಲು ಚೀನದಲ್ಲಿನ ಸ್ನೇಹಿತರಿಗೆ ಅವರು ಮುಂಚಿತವಾಗಿ ತಿಳಿಸಿದ್ದರೆಂದು ಕಾಣುತ್ತದೆ. ಅವರಲ್ಲಿ ಹೆಚ್ಚಿನವರು ಹೆಣ್ಣು ಮಕ್ಕಳು. ಇಂದಿಯೂ ಇನ್ನೂ ಇಂದಿಯಾವಕಾಶಕ್ಕೆ ಶಕ್ತರೇ ಎಂದು ಒಬ್ಬ ಪ್ರೇಕ್ಷಕರು ಬರೆದಿದ್ದಾರೆ. ಅಮೇರಿಕದಲ್ಲಾದರೆ, ಕೋಟ್ಯಾಧೀಶ ರೋಳೆಲ್ಲರನ ಪ್ರತಿಮೆಗೆ ಎರಿಗಾಯೇ ಮಹಾತ್ಮಾಗಾಂಧಿಜಿಯವರ ಪ್ರತಿಮೆಯನ್ನು ಇಟ್ಟಿದ್ದಾರೆ. ಸರ್. ಸಿ. ವಿ. ರಾಮನ್‌ರನ್ನೂ ಅಲ್ಲೇ ಪ್ರತಿಷ್ಠಿಸಿದ್ದಾರೆ. ಹೀಗೆ ಜಗತ್ತು ಇವರನ್ನಾದರೂ ಅಮೇರಿಕದಲ್ಲಿ ಸನ್ಮಾನಿಸುವಾಗ ಫ್ರಾನ್ಸಿನಲ್ಲಿ ಇದೇ ದೇಶದ ಮಾತೇ ಇಲ್ಲ! ಅಷ್ಟು ಮೆಚ್ಚು!

೦ ೦ ೦ ೦ ೦

ಬಿಕಾನೀರ ಮಹಾರಾಜರು ಬ್ರಿಟಿಷರನ್ನು ಎಷ್ಟು ಸಲ ಲಂಡನಿನಲ್ಲಿ ಅನುಮಂತ್ರಿಸಿಲ್ಲ. ದಿನಕ್ಕೆ ೫೬೫ ಪವನು ಖರ್ಚುಮಾಡಿ ಈ ಚಾ ಕೂಟಗಳಾಗುತ್ತಿದ್ದವು. ಒಂದೇ ಒಂದು ಬಿಲ್ಲನ್ನಾದರೂ ನೋಡಿದೆ, ಕೇಳಿದಷ್ಟು ಹಣ ನಗದಾಗಿ ಸುರಿದಿದ್ದರು! ಮಹಾರಾಜರೆಂದರೆ ಹೀಗಿದ್ದಾರೆಂದು ಇಂಗ್ಲೆಂಡಿನಲ್ಲಿ ಇನ್ನಾದರೂ ತಿಳಿಯಬೇಡವೆ?

೦ ೦ ೦ ೦

ಮೈಸೂರು ಮಹಾರಾಜರಷ್ಟು ಹೆಚ್ಚಿನ ಮೋಟಾರು ಕಾರುಗಳನ್ನು ಯಾವ ರಾಜರೂ ಇಟ್ಟುಕೊಂಡಿಲ್ಲವೆನ್ನುತ್ತಾರೆ. ಈ ಮಾತಿನಲ್ಲಿ ಅಡಗಿರುವ ಯಾಕಿನ್ನೂ ಅನುಸರಿಸಿಲ್ಲವೊ ೬೨ ಮೋಟರು ಕಾರುಗಳಿವೆ, ಸುಮಾರು ಲಕ್ಷ ರೂಪ್ಯಾಗಳ ಮೂಲಧನವಿದು.

೦ ೦ ೦ ೦ ೦

ವಾರ್ಧಾದಲ್ಲಾಗುವ ವಿದ್ಯಾಭ್ಯಾಸವಿಚಾರಗಳು ಮುಂದೆ ಹೆಚ್ಚಿನ ಪ್ರಚಾರಕ್ಕೆ ಬರುವುವು. ಈಗಷ್ಟಾ ವಿದ್ಯಾಭ್ಯಾಸ ಕ್ರಮವೆನ್ನು ಕದ್ದ, ಇಂಗ್ಲಿಷಿನ ಮಹತ್ವವನ್ನಳಿಸಿ, ಕೈಗೆಲಸವನ್ನು ರೂಢಿಗೆ ತರಬೇಕೆಂದು ಸೂಚಿಸಿಗಾಂಧಿಜಿಯವರ ಅಭಿಪ್ರಾಯ.

೦ ೦ ೦ ೦

ಪ್ರತಿಯೊಂದು ಮಗುವಿಗೆ ಏನಾದರೊಂದು ಕೈಗೆಲಸ ಕಲಿಸಬೇಕೆಂಬ ಅದರಿಂದ ಮುಂದೆ ಸಂಪಾದನೆಯೊಗ್ಗಂತಾಗಬೇಕು ಎಂಬೂ ಅವರ ಅಭಿಪ್ರಾಯ. ಮೇಲ್ತರಗತಿಗಳಲ್ಲಿ ವಿದ್ಯಾಭ್ಯಾಸವನ್ನು ಯುನಿವರ್ಸಿಟಿಗಳೂ (ಇವು ಹಜ್ಜಾಗಬೇಕು) ಔಸಗ ಸಂಸ್ಥೆಗಳೂ ನೋಡಿಕೊಳ್ಳುವಂತಾಗಬೇಕು. ವಿಶೇಷ ಶಿಕ್ಷಣವಾಗಬೇಕಾಗಿರುವಲ್ಲಿ, ಸರಕಾರವು ಅದಕ್ಕಾಗಿ ಶಾಲೆಗಳನ್ನಡಬೇಕು ಎಂದೂ ಅವರ ಸೂಚನೆ.

೦ ೦ ೦ ೦

ಸರಕಾರವು ಜಪಾನು ಕಟ್ಟಡ ಸಾಹಿತ್ಯಗಳನ್ನು ಒಡಗಿಸಿಕೊಡುವುದೇ ಮಾತ್ರವಲ್ಲದೆ, ಎಲಿಮೆಂಟರಿ ಶಾಲೆಗಳಿಗೆ ಮತ್ತೇನನ್ನೂ ಕೂಡ ಬಾರದು. ಆ ತರಗತಿಗಳ ಶಿಕ್ಷಣದಿಂದಲೇ ಶಾಲಾ ಖರ್ಚು ಹುಟ್ಟುವಂತಾಗಬೇಕು ಎಂದು ಗಾಂಧಿಜಿಯವರು ಹೇಳಿರುವುದನ್ನು ಸಾವಿರಗಟ್ಟಲೆಯ ಸಂಖ್ಯೆಯವರೇ ಬಹಳವಾಗಿ ವಿರೋಧಿಸುತ್ತಿದ್ದಾರೆ.

x x x x

ಅಸ್ಸಾಮಿನಲ್ಲಿ ಕೊಂಗ್ರೆಸ್ಸ್ ಅಧಿಕಾರ ನಿರ್ವಹಿಸುವಂತಾದರೆ, ಸುಲಭವಾಗಿ ಮಂತ್ರಿಮಂಡಲ ರಚಿಸಬಹುದು. ಸಿಂಧ-ಬಂಗಾಳಗಳಲ್ಲಿ ಈಗಣ ಮಂತ್ರಿಮಂಡಲಗಳು ಬಲಹೀನವಾಗಿವೆ. ಪಂಜಾಬಿನಲ್ಲಿ ದಬ್ಬಾಳಿಕೆಯು ಇನ್ನೂ ಮುಗಿದಲ್ಲ. ಈ ವಿಷಯಗಳೆಲ್ಲವನ್ನು ಅಖಿಲ ಭಾರತ ಕೊಂಗ್ರೆಸ್ ಕಾರ್ಯಕಾರೀ ಸಭೆಯು ಆಲೋಚಿಸುವುದು.

'ಓವಲ್‌ಟೆನ್ನು' ಪುಷ್ಟವಾದ ದೇಹವನ್ನೂ ಚಟುವಟಿಕೆಯುಳ್ಳ ಮನಸ್ಸನ್ನೂ ಉಂಟು ಮಾಡುತ್ತದೆ

ಮಲಗುವ ವೇಳೆಯಲ್ಲಿಯೂ, ಊಟದ ಸಮಯದಲ್ಲೂ ಓವಲ್‌ಟಿನ್ನನ್ನು ನಿಮ್ಮ ಮಕ್ಕಳ ದಿನನಿತ್ಯದ ಪಾನೀಯವನ್ನಾಗಿ ಮಾಡಿದರೆ ಗಟ್ಟಿ ಮತ್ತು ಆರೋಗ್ಯವುಳ್ಳ ದೇಹವನ್ನೂ, ನರಗಳನ್ನೂ ಮತ್ತು ಚುರುಕಾದ ಮಾನಸಿಕ ಶಕ್ತಿಯನ್ನೂ ಬೆಳೆಸಲಿಕ್ಕೆ ಬೇಕಾಗುವ ಪೌಷ್ಟಿಕ ಪದಾರ್ಥಗಳು ಅದರಿಂದ ದೊರೆಯುತ್ತದೆಂದು ಖಂಡಿತವಾದ ಮಾತು.

ಶ್ರೀಷ್ಮವಾದ ನಳ್ಳ ಬಾರ್ಲಿ ಸತ್ವದಿಂದಲೂ, ಹಸಿಯಾದ ದನದ ಕೆನೆಹಾಲಿನಿಂದಲೂ ಶಾಸ್ತ್ರೀಯವಾಗಿ ತಯಾರಾಗಿರುವ ಲ್ಪಟ್ಟಿದ್ದರಿಂದ 'ಓವಲ್ಟಿನ್' ಕಮ್ಮಿ ವೆಚ್ಚದಲ್ಲಿ ಹೆಚ್ಚಿನ ಆರೋಗ್ಯ ಪುಷ್ಟಿಯನ್ನು ಕೊಡುತ್ತದೆ. ಜೀವ ಕೊಂಡುಕೊಳ್ಳಬಹುದಾದ ಆಹಾರಗಳಲ್ಲೆಲ್ಲಾ ಇದು ಸರ್ವಶ್ರೀಷ್ಠವಾದ ಏಕಮಾತ್ರ ಆಹಾರವಾಗಿರುತ್ತದೆ.

ಶ್ರೀಷ್ಠತೆಯಲ್ಲಿಯೂ ಬೆಲೆಯಲ್ಲಿಯೂ ಒವಲ್ಟಿನ್ ಏಕಮಾತ್ರವಾಗಿ ನಿಲ್ಲುತ್ತದೆ. ಆದರೆ ಮನೆಯಲ್ಲಿ ಉಪಯೋಗಿಸುವ ಸಕ್ಕರೆಯಂತೆಹ ಅಗ್ಗವಾದ ವಸ್ತುಗಳು ಒವಲ್ಟಿನ್‌ನಲ್ಲಿಲ್ಲ. ನಿಮ್ಮ ಮಕ್ಕಳ ಆರೋಗ್ಯಹಿತಕ್ಕಾಗಿ ಒವಲ್ಟಿನ್ನನ್ನೇ ಉಪಯೋಗಿಸಿರಿ. ನಕಲಿಗಳಿಗೆ ಮೋಸಹೋಗದಿರಿ.

OVALTINE

'ಓವಲ್‌ಟಿನ್' ಮೆದುಳು, ನರ, ಮತ್ತು ದೇಹವನ್ನು ಸೃಷ್ಟಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರ್‌ಗಳಲ್ಲಿಯೂ ಬಹಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ

ನಿಜಂಟ್ಸ್:— ಜೇಮ್ಸ್ ಕ್ಯಾಟ್ ಲಿಮಿಟೆಡ್, ಕಲ್ಕತ್ತಾ, ಕರಾಚಿ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ.

ಎನೆಂಬ್ಲಿಯಲ್ಲಿ (ವಂಸ್ಟ) ಸರಕಾರದ ವಿರುದ್ಧವಾಗಿ ಎರಡು ನಿರ್ಣಯಗಳು ಮಂಡಾರಾದುವು. ಪುನಃ ಪುನಃವಾಗಿ ಇಂಗ್ಲೆಂಡಿನಿಂದಲೇ ವಿಚಕ್ಷಣರನ್ನು ಇಲ್ಲಿಗೆ ತಂದು, ಭಾರತೀಯರಲ್ಲಿ ಯಾರೂ ಅಂಥಹ ಹುದ್ದೆಗಳನ್ನು ವಹಿಸಲು ಯೋಗ್ಯರಲ್ಲವೆಂದು ತೋರಿಸುವ ಅವಲಕ್ಷಣವು ಇನ್ನು ಸಾಕಾಯವಾಗಬೇಡೆಂದೇ ಈ ನಿರ್ಣಯಗಳ ಅರ್ಥ.

x x x x

ರಾಷ್ಟ್ರೀಯ ಭಾವಜಾಗೃತಿಗಳನ್ನು ಕುರಿತಾಗಿ ಸರಕಾರವು ಎದುರಾಡಿ; ಈಗ ಇಷ್ಟು ಜೋರಾಗಿ ಕೊಂಗ್ರೆಸ್ಸಿಗೆ ವಿರುದ್ಧಯನ್ನು ಕಟ್ಟಿಕೊಂಡಿರುವುದೋ ಎಂದು ಮೈ ಝುರುಝುಡಿಸಲ್ಲಿ ಭತ್ತಿಯುಳ್ಳವರೂ ಆಕ್ಷರ್ಷಪ ವಂತಾಗಿದೆ. ದೇವಾನ್ ಸಾಹೇಬರು ಉದ್ದೊಂದು ಭಾಷಣವಾಡಿ, ಕೊಂಗ್ರೆಸ್ಸಿಗೂ ಮುದ ಸರಕಾರಕ್ಕೂ ಇರುವ ಸಂಬಂಧವಿರೋಗಳನ್ನು ವಿವರಿಸಿದ್ದಾರೆ. ಇದರಿಂದ ಸರಿಸಕ್ಕೆ ಅವಕಾಶವುಂಟೇ? ನೋಡಬೇಕು.

ಡಾ. ಎಂ. ವಿಶ್ವೇಶ್ವರಯ್ಯನವರ

ಪ್ರಾಂತಿಕ ಸರಕಾರಗಳಿಗೆ ಶಿವರ್ಪಿಡು ಆರ್ಥಿಕ ಯೋಜನೆ.

ಮಹಾತ್ಮಾಜೀಯವರ ಗಡಿನಾಡಿನ ಪ್ರವಾಸ.

ಕಾಂಗ್ರೆಸ್ ನಗರದ ಶಂಕುಸ್ಥಾಪನೆ

ಡಾ. ಎಂ. ವಿಶ್ವೇಶ್ವರಯ್ಯನವರು, ಆರ್ಥಿಕ ಅಭಿವೃದ್ಧಿ, ಆರ್ಥಿಕ ಕಾರ್ಯಕ್ರಮಾದಿಗಳನ್ನೊಳಗೊಂಡ ಯೋಜನೆಯ ಕುರಿತು, ಒಂದು ಲೇಖನವನ್ನು ಬರೆದಿರುತ್ತಾರೆ. ಪ್ರಾಂತ್ಯ ಸರಕಾರಗಳಿಗೆ ಪಂಚ ವಾರ್ಷಿಕ ಯೋಜನೆಯನ್ನೂ, ಕೇಂದ್ರ ಸರಕಾರಕ್ಕೆ ೧೦ ವರ್ಷಗಳ ಕಾರ್ಯಕ್ರಮದ ಸೂಚನೆಯೊಂದನ್ನೂ ಮಾಡಿರುವರು.

ಈ ಲೇಖನವು ೧೦ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಅದರಲ್ಲಿ ವಿಷಯ ಆವೇಕ್ಷ, ಅಭಿವೃದ್ಧಿಯ ಅತಂಕಗಳು ಮತ್ತು ಅನುಕೂಲಗಳು, ಗ್ರಾಮಾಭಿವೃದ್ಧಿಯ ಕಾರ್ಯಕ್ರಮಗಳು, ಪ್ರಜೆಯ ಪರಸ್ಪರ ಹೊಂದಿಕೆ, ಮೇಲಾಡಳಿತ ಮುಂತಾದ ಪ್ರಕರಣಗಳನ್ನೂ ಕೂಲಂಕುಶವಾಗಿ ವಿವರಿಸಿ ಸಲಹೆಗಳನ್ನು ಕೊಟ್ಟಿರುವರು. ಶ್ರೀ ವಿಶ್ವೇಶ್ವರಯ್ಯನವರ ಈ ಯೋಜನೆಯು ಕಡೆಗೆ ಸರಕಾರದವರಿಗೆ ಗಮನ ಕೊಟ್ಟು ಅದರ ಯೋಗ್ಯತೆಯ ಕುರಿತು ತೀವ್ರವಾಗಿ ಆಲೋಚಿಸಬಹುದಾಗಿದೆ.

ಮಹಾತ್ಮಾಜೀಯವರು ಗಡಿನಾಡಿನ ಸಂಚಾರವನ್ನು ಕೈಗೊಳ್ಳುವರೆಂಬ ವಾರ್ತೆಯು ಬಂದಿದೆ. ಅಲ್ಲಿ ಸುಮಾರು ೩ ವಿಂಗಳ ಅವಧಿ ವರೆಗೆ ಅವರ ಸಂಚಾರ ಕಾರ್ಯಕ್ರಮವು ಇಂಬಹುದಾಗಿ ಊಹಿಸಲಾಗಿದೆ.

ಹರಿಪುರದಲ್ಲಿ ಜರಗಲಿಕ್ಕಿರುವ ಅ. ಭಾ. ಕಾಂಗ್ರೆಸ್ ಅಧಿವೇಶನದ ಬಗ್ಗೆ ಕಯಾರಿಸಲ್ಪಟ್ಟಿರುವ ಕಾಂಗ್ರೆಸ್ ನಗರದ ಶಂಖುಸ್ಥಾಪನೆಯನ್ನು ಗಳನೇ ತಾರೀಕಿನ ದಿನ ಸರದಾರ್ ವಲ್ಲಭ್ಭಾ ಪಟೇಲರು ನೆರವೇರಿಸಿಹರು. ಈ ಮಹೋತ್ಸವದ ಸಂದರ್ಭದಲ್ಲಿ ಮಹಾತ್ಮರೂ, ರಾಷ್ಟ್ರಪತಿ ನೆಹರೂರವರೂ ಸಂದೇಶಗಳನ್ನು ಕಳುಹಿಸಿದ್ದರು. ಶಂಕುಸ್ಥಾಪನೆಯ ಸಮಾರಂಭವನ್ನು ನೋಡಲು ಸುತ್ತಮುತ್ತಲಿನ ಗ್ರಾಮಗಳಿಂದ ಸಾಧಾರಣ ೨೦೦೦ ಜನರು ನೆರೆದಿದ್ದರು.

ಹರಿಪುರ ಕಾಂಗ್ರೆಸ್ ಸ್ವಾಗತಕಮಿಟಿಯ ಸಭೆಯಲ್ಲಿ ಇತ್ತು ರಚಿಸಲ್ಪಡುವ ಕಾಂಗ್ರೆಸ್ ನಗರಕ್ಕೆ ವೈ. ವಾ. ವಿಠಲ್‌ಭಾಯಿ ಪಟೇಲರ ನರ ಸ್ಮಾರಕವಾಗಿ, ವಿಠಲ್ ನಗರವೆಂದು ಹೆಸರಿಡಬೇಕಾಗಿ ನಿರ್ಣಯವಾಗಿದೆ.

ಮೈಸೂರಿನಲ್ಲಿ ಕಾಂಗ್ರೆಸ್ ಕಾರ್ಯಕಲಾಪಗಳು

ಶ್ರೀಯುತರುಗಳಾದ ಸಿದ್ಧಲಿಂಗಯ್ಯ, ಸೀತಾರಾಮು ಶಾಸ್ತ್ರಿ ಮತ್ತು ಟಿ. ರಾಮಚಂದ್ರ ರಾವು ಇವರ ದಸ್ತಗಿರಿ ವಿಷಯವಾಗಿ ಎನೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ ಇವರ ಪ್ರಶ್ನೆಗಳಿಗುತ್ತರವಾಗಿ ಕರ್ನಾಟಕ ಪ್ರಾಂತ್ಯದ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಹುಕ್ಕೇರಿಕರರು ತಾವು ಇತ್ತೀಚೆಗೆ ದಿವಾನರ ಭೇಟಿ ಮಾಡಿದಲ್ಲಿ ಕಾಂಗ್ರೆಸ್ಸಿನ ವಿಷಯದಲ್ಲಿ ದಿವಾನರ ಧೋರಣೆಯೇ ಸಾರ್ವತ್ರಿಕರುವುದೆಂದೂ, ಕಾಂಗ್ರೆಸ್ಸಿನ ನ್ಯಾಯವಾದ ಕಾರ್ಯಕಲಾಪಗಳಿಗೆ ಇನ್ನು ಮೈಸೂರಿನ ಸರಕಾರದಿಂದ ಏನೊಂದು ಅಡ್ಡಿ ಬರಬಾರದೆಂದೂ, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಬೆಂಗಳೂರಿನ ಪ್ರವಾಸದಲ್ಲಿರುವ ಸಮಯದಲ್ಲಿ ಅವರ ಮೇಲೆ ಹಾಕಲಿಕ್ಕಿರುವ ತಡೆಯ ನೋಟಿಸನ್ನು ಜಾರಿಗೆ ತರಲಿಲ್ಲವೆಂದೂ ಹೇಳಿದರು.

ಶ್ರೀಯುತರು ಮೈಸೂರಿನ ದಿವಾನರೊಡನೆಯೂ ಕಾಂಗ್ರೆಸ್ ಅಧ್ಯಕ್ಷರೊಡನೆಯೂ ನಡೆಸಿದ ಸಂಭಾಷಣೆಯ ವಿವರವನ್ನು ಬೆಳೆಸುತ್ತಿರುವರು. ಮುಂದಿನ ವಾರ ಮೈಸೂರು ಎಸೆಂಬ್ಲಿ ಸಭೆ ಜರಗಲಿಕ್ಕಿರುವ ಸಮಯದಲ್ಲಿ ಶ್ರೀ. ಹುಕ್ಕೇರಿಕರರು ಮೈಸೂರಿಗೆ ತೆರಳಿ ಎಸೆಂಬ್ಲಿಯ ಸದಸ್ಯರೊಡನೆ ಈ ವಿಷಯವನ್ನು ಚರ್ಚಿಸಲಿರುವರಂತೆ.

ಚರಕಕ್ಕೆ ಶರಣು

ಬಿ. ಎನ್. ಆರ್. ಶೆಟ್ಟಿಯವರು ಕೆಲಸಗಾರರು ಪ್ರತಿ ಶನಿವಾರವೂ ಚರಕದಲ್ಲಿ ನೂಲುವುದನ್ನು ಅಭ್ಯಾಸಿಸುವರಂತೆ. ಇದರಿಂದ ಅವರು ಸ್ವದೇಶವನ್ನು ಹಿಡಿಯುವ ಕಾರಣದಲ್ಲಿ ಅನ್ನಕ್ಕೆ ದಾರಿಯಾಗುವುದೆಂಬ ಅವರ ಭಾವನೆ. ಅಲ್ಲಿ ಸಮೀಪದ ಕೆಲಸಗಾರ ಕೃಷ್ಣನನ್ನು ಶೆಟ್ಟಿಯವರ ಅಧಿಕಾರಿಗಳು ಇನ್ನು ಹಿಂಗೆಯಲ್ಲಿಲ್ಲವಾದುದರಿಂದ ಶೆಟ್ಟಿಯವರ ಕೆಲಸಗಾರರಲ್ಲಿ ಅಶಾಂತಿಯು ಬೆಳೆಯುತ್ತಿದೆ ಎಂದು 'ಇಂಡಿಪೆಂಡೆಂಟ್' ಪತ್ರಿಕೆಯು ಅಂಬೋಣ.

ಮಾತಿನಲ್ಲಿ 'ಹೌದಪ್ಪಾ' ಕಾರ್ಯದಲ್ಲಿ 'ಅಲ್ಲಪ್ಪಾ'

ಹಿಂದೂಗಳನ್ನು ಸೈನಿಕ ಶಿಕ್ಷಣದಲ್ಲಿ ತರಬೇತುಗೊಳಿಸಿ ಹಿಂದೂದೇಶದ ರಕ್ಷಣೆಯ ಭಾರವನ್ನು ಹಿಂದೀಯರಿಗೆ ವಹಿಸಿಕೊಡುವ ಮಾತಿನಲ್ಲಿ ಸರಕಾರವು 'ಹೌದಪ್ಪಾ' ಎಂದೊಪ್ಪಿಕೊಂಡು ಕಾರ್ಯದಲ್ಲಿ ಮಾತ್ರ 'ಅಲ್ಲಪ್ಪಾ' ಎಂದು ಹೇಳುವಂತೆ ವರ್ತಿಸಿ ಹಿಂದೂದೇಶದ ರಕ್ಷಣಾಕಾರ್ಯದಲ್ಲಿ ಹಿಂದೀಯರು ಸೈನ್ಯ ಮತ್ತು ಹಡಗುವಡೆಗಾಗಿ ಬ್ರಿಟಿಷರಿಗೆ ಕರಣು ಹೋಗುವಂತೆ ಮಾಡುವ ಯೋಜನೆಯಲ್ಲಿದೆ ಎಂದು ಹಿತವಾದ ಪತ್ರಿಕೆಯ ಅಂಬೋಣ.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½%per annum. Savings Bank Deposits at 4½% per annum.

FIXED DEPOSITS:

For 2 Years 6% 1 Year 5% For 6 months 4% 3 months 3½%

Auction chit Funds ranging from Rs. 100/ toRs. 5000/ run regularly on systematic lines. Unique Banking facilities to Businessmen and interested Public.

Apply for paticulars— **K. R. GURU,** *Managing Director*

ಜಗದ್ವಿಖ್ಯಾತ ಜಗಜಟ್ಟಿಗಳ ಆಗಮನ! ಜಗಜಟ್ಟಿ 'ಗಾಮಾ'ರನ್ನು ಎದುರಿಸಲು ಮಹತ್ವಾಕಾಂಕ್ಷೆ!

ಮುಂಬಾಯಿಯ ಫೊರಿನ್ ಲ್ಯಾನ್ಸ್ ಮೈದಾನದಲ್ಲಿ ಜಗಜಟ್ಟಿಯೊಂದಿಂದು ಸದ್ಯದಲ್ಲಿ ನಿರ್ಣಯಿಸಲ್ಪಡುವುದು.

ಜಗತ್ತಿನ ನಾನಾ ದೇಶಗಳಿಂದ ಅಂದರೆ, ಇಂಗ್ಲೆಂಡು, ಅಮೆರಿಕಾ, ಮೊರಕ್ಕೊ ಇತ್ಯಾದಿ ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಪ್ರಖ್ಯಾತಿಹೊಂದಿದ ಸಾಧಾರಣ ೩೦ ಮಂದಿ ಜಟ್ಟಿಗಳ ಪಂಗಡವು ಮುಂಬಾಯಿಗೆ ಬಂದು ಇಳಿದಿದೆ. ಇವರು ಹಿಂದೂಸ್ಥಾನದ ಹೆಸರುವಾಸಿಯಾದ ಪ್ರತಿ ಯೋರ್ವ ಜಟ್ಟಿಯೊಡನೆ ಪಂದ್ಯಾಟವನ್ನು ಆಡಬಂದಿರುವೆವೆಂದು ಹೇಳುವರಾದರೂ, ನಿಜವಾಗಿ ಇವರ ಉದ್ದೇಶವು, ಕುಸ್ತಿ ಪಂದ್ಯಾಟದಲ್ಲಿ ಅಧ್ವಿತೀಯರೂ, ಜಗಜ್ಜಟ್ಟಿ ಎಂಬ ಬಿರುದಾಂಕಿತರೂ ನಮ್ಮ ಸಾರ್ವಭೌಮರಾಗಿದ್ದ ಎಟನೇ ಎಡ್ವರ್ಡರಿಂದ 'ದಿ ವರ್ಲ್ಡ್ ಚಾಂಪಿಯನ್' ಬೆಲ್ಟನ್ನು ಬಹುಮಾನವಾಗಿ ಪಡೆದವರೂ, ಪಾಶ್ಚಾತ್ಯ ದೇಶಗಳಲ್ಲಿ ಜಗಜಟ್ಟಿ ಎಂಬೆಸಿಕೊಂಡಿದ್ದ ಜೆಬಿಸ್ಕೋ ಎಂಬವರನ್ನು ಕ್ಷಣಾರ್ಧದಲ್ಲಿ ಸೋಲಿಸಿ, ಹಿಂದೂಸ್ಥಾನದ ಕೀರ್ತಿಯನ್ನು ನೆಲೆಗಾಣಿದವರೂ ಆದ ನನ್ನು ಭೇಸುವರಾಕ್ಷಮಿ ಗಾಮಾನಾರವರನ್ನು ಸೋಲಿಸಿ ಜಗಜಟ್ಟಿ ಬಿರುದನ್ನು ಹಿಂದೂಸ್ಥಾನದಿಂದ ಹಿಂತೆಗೆದುಕೊಂಡು ಹೋಗುವ ಮಹತ್ವಾಕಾಂಕ್ಷೆಯಿಂದ ಎಮ್ಮೆಯ ಸಾವಿರ ಪೌಂಡುಗಳಿಂದ, ನನ್ಮಲ್ಲಿಗೆ ಬಂದಿಳಿದಿರುವ ತಂಡವಿದು. ಆದರೆ ಜಗತ್ತಿನ ಜಾನಾ ಭಾಗಗಳಿಂದ ಜಟ್ಟಿಗಳ ಸಂಗಡವು ನಮ್ಮ ಹಿಂದೂಸ್ಥಾನಕ್ಕೆ ಒಂದು ಇಲ್ಲಿ ಪಂದ್ಯಾಟಗಳನ್ನು ನಡೆಸುವುದು ನಮ್ಮ ಹಿಂದೂಸ್ಥಾನದ ಇತಿಹಾಸದಲ್ಲಿ ಇದೇ ಮೊದಲನೇ ಬಾರಿ ಎಂದರೆ ಅತಿಶಯೋಕ್ತಿಯಾಗಲಾರದು.

೧. ಗಾಮಾನ್ ಎಸ್. ಮೆಮೆಟ್ಟಾ ದಿ ಟ್ಲೆಕ್ ಪೆಂತರ್ ಆಫ್ ಮೊರೊಕ್ಕೊ ಎಂಬ ತರುಣ ಜಟ್ಟಿಗಳು ೩೨ ವರ್ಷ ವ್ಯಾಯಾಧನ ಫಿಮ್ಮೆ ೬ ಅಡಿ ೧ ಇಂಚು ಉದ್ದವೂ, ೨೪೦ ರಾತ್ಲು ಭಾರವೂ ಇರುವರು. ಇವರ ಭೀಮ ಕಾಯವು ನೋಟಕರ ಮನಸ್ಸನ್ನು ಆಕರ್ಷಿಸದಿರಲಾರದು.

೨. ಚಾರ್ಲ್ಸ್ ರಿಗೋಲೊಜ್ ಎಂಬ ೨೯ ವರ್ಷ ವ್ಯಾಯದವರಿದ್ದು ೫ ಅಡಿ ೧೧ ಇಂಚು ಉದ್ದವೂ, ೨೩೨ ರಾತ್ಲು ಭಾರವೂ ಇರುವರು. ಇವರು ಫ್ರಾನ್ಸ್ ದೇಶದವರು.

೩. ಜೆಸ್ ಬಿಡಾ ಬೀ ಎಂಬ ತುರ್ಕಿ ದೇಶದ ಜಟ್ಟಿಯು ೨೮ ವರ್ಷ ವ್ಯಾಯದವರು, ೫ ಅಡಿ ೧೧ ಇಂಚು ಉದ್ದವೂ, ೨೪೨ ರಾತ್ಲು ಭಾರವೂ ಇರುವರು.

೪. ವಿಲಿಯಂ ಡಾಯಿಯಾ ಎಂಬ ಹೆಂಗೇರಿ ದೇಶದ ಜಟ್ಟಿಯು ಇದೇ ೨೬ ವರ್ಷ ವ್ಯಾಯ

ಜಗಜಟ್ಟಿ ಗಾಮಾರವರ ಶಿಷ್ಯಂದಿರು—ಎಡದಿಂದ ಒಲಕ್ಕೆ — ನುತ್ತು ಇನೇಯವರೇ ಗಾಮಾರವರ ತಮ್ಮಂದಿರಾದ ಹಸಿಮದಾ ಮತ್ತು ಇಮಾಮ್ ಭಕ್ಷರವರು.

ಹಿಂದೂಸ್ಥಾನದ ಜನರು ಗಾಮಾ ಎಂಬಿಗೆ ಸರಸವಾಡಿ ಜಟ್ಟಿಗಳಲ್ಲಿಯೂ ಇವರೆಂದು ತಿಳಿದಿಲ್ಲವು. ಇವರು ತಮ್ಮ ವ್ಯಾಯಾಮಕ್ಕೆ ಬಳಪಟ್ಟಿದವರು. ಇದಕ್ಕೆ ಒಂದು ಕಾರಣವೂ ಇದೆ. ಯಾವ ಜಟ್ಟಿಯಾದರೂ, ತನ್ನ ತಮ್ಮಂದಿರಾದ ಹಸಿಮದಾ ಮತ್ತು ಇಮಾಮ್ ಭಕ್ಷ ಎಂಬ ಜಟ್ಟಿಗಳನ್ನು ಸೋಲಿಸಿದ ಪಸಿಷ ತನ್ನೆಡನೆ ಪಂದ್ಯಾಟವನ್ನು ನಡಿಸಕೂಡದೆಂಬ ಇವರ ಶರ್ತವೇ ಇವರನ್ನು ಇಂತಹ ಉಚ್ಚ ಶ್ರೇಣಿಯಲ್ಲಿರಿಸಿದೆ ಅಲ್ಲದೆ ಇವರ ಶಕ್ತಿ ಮತ್ತು ಯುಕ್ತಿ ಸಾಮರ್ಥ್ಯದಿಂದಲ್ಲ. ಇವರ ತಮ್ಮಂದಿರು ಇವರಿಂದಲೂ ಶಕ್ತಿಸಾಮರ್ಥ್ಯವಿರುವರು. ಇದರಿಂದ ಯಾವ ಜಟ್ಟಿಯನ್ನಾದರೂ ಇವರ ತಮ್ಮಂದಿರೇ ಸೋಲಿಸಿ, ಗಾಮಾರವರ ಶಕ್ತಿಸಾಮರ್ಥ್ಯವೆಷ್ಟಿದೆಯೆಂಬುದನ್ನು ನೋಡಲವಕಾಶ ಕೊಡುವುದಿಲ್ಲ. ಈ ರೀತಿ ಗಾಮಾರವರು ಪ್ರತಿಬಂಧಿಸುವುದು ನ್ಯಾಯ ಮಧ್ಯಸ್ಥಿಯಿಂದ ನ್ಯಾಯವೆನಿಸಲಾರದು."

ಇವರ ಅಭಿಪ್ರಾಯವು ಏನೇ ಇರಲೀ? ದೇಶ? ಜಗಜಟ್ಟಿ ಗಾಮಾರವರು ವಾಶ್ಚಾತ್ಯ ದೇಶಗಳಿಗೆ ಹೋಗಿ, ಅಲ್ಲಿ ಜಗ ಜಗಜಟ್ಟಿ ಎನಿಸಿಕೊಂಡಿದ್ದವರನ್ನು ಸೋಲಿಸಿ, ಜಗಜಟ್ಟಿ ಎಂಬ ಬಿರುದನ್ನು ವಡೆದು ಹಿಂದೂಸ್ಥಾನಕ್ಕೆ ತಂದ ಗೌರವವು ಚಿರಕಾಲ ದಾಳಲೆಂದು ಹಾರೈಸುವೆವು.

ಇದೇ ಬರುವ ನವಂಬರ್ ತಾ. ೩೦ರಿಂದ ಮುಂಬಾಯಿಯ ಮೆರಿನ್ ಲ್ಯಾನ್ಸ್ ಮೈದಾನದಲ್ಲಿ ಇವರ ಪಂದ್ಯಾಟಗಳು ಸಾಧಾರಣ ೨

Books for sale!

SHARADA DIARY 1938

ARE ISSUED IN THE SIZES

Big size! **Small size!!** **Pigmy size!!!**

ಶಾರದಾ ಪೊಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ.

Interleaved big size DIARIES useful for Banks & Lawyers

ARE AVAILABLE AT 1-2-0 PER COPY

Sharada Press, Mangalore, S. Kanara.

ಸದಾ ಉಪಯೋಗಿಸಿರಿ

ಲೋಧ್ರ ಲಲನೆಯರ ಸೌಖ್ಯಾರೋಗ್ಯಗಳಿಗೆ

ಕೇಸರಿ ಕುಟೀರಂ, ರಾಯಪೇಟೆ, ಮದರಾಸು.

ಮಂಗಳೂರು ವ್ಯವಹರ್ತರು :- ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

HOUNSA

ಹಂಸಾ ಸ್ನೋ ಪೌಡ್ರು
ಬ್ಲೆಂಡಿಂಗ್ ಪೌಡರ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲ್ಡನ್ ಬಜಾರ್, ಮಂಗಳೂರು.

Use the soaps

KNOWN ALL OVER

WISICO'S,

MINAR

&

TAJAMAHAL 'Red'

Bar Soaps.

POPULAR IN THE MARKET

Sole Distributer:-

P. G. KAMATH,

Kashmir House,

Marnamikatta, MANGALORE.

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ಯ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸುಖೋಪಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 30 ತೊಲೆಗಳ ಡಬ್ಬಿಗೂ 1-4-0(ಏ ಪಿ.ಡಾರ್ಡು ವ್ಯತೈಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P. O. Peridepi (ನೆಲ್ಲೂರು ಜಿ.)

'Dil Roz' (Regd)

'Dil Roz' is a sure cure for Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxiliary-Abscess.

There is no need of dressing the wounds, nor are baths prohibited.

Price Rs. 2.
Postage extra.

TAHIR DIN,
Anarkali, LAHORE.

ಆರೋಗ್ಯಕ್ಕೆ
ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಆದರಿಂದ ಸೌಖ್ಯ, ಆನಂದ
ಇವುಗಳು ಇರಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಒಲಕ್ಕೆ
ವೀರ್ಯವೃದ್ಧಿಗೆ,
ಮಿಂಡ ಳು ಗಟ್ಟಿಯಾಗುವುದಕೆ
ಶಾಂತಿಗ,
ಜೀವ ಸತ್ವಗಳಿಗ,
ನವಯೌವನಕ್ಕೆ,
ರಾಜಮಾರ್ಗವೆಂದರೆ

ಜೀವಾಮೃತ

ಆಯುರ್ವೇದಾಶ್ರಮಂ,
ಗಣಪ, ಗೋವಿಂದನಾಯಕ್ ವೀದಿ,
ಜ ಟಿ ಮದ್ರಾಸು
ದ ಕ ಜಿಲ್ಲಾ ವಿಜಯಂತರ.

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಬಹುದು,
"ವಾಯುಮುಕ್ತಾ"

೯ ಔಷಧವು ದೇಹದಿಯ ಮೂಲಕೇಗಂದ ತಯಾರಿಸಲ್ಪಡುತ್ತದೆ ಈಗೆ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ ಅನಾರೋಗ್ಯದಲ್ಲಿರುವ ಆಥವಾ ಗರ್ಭಿಣಿಯರಾಗಿರುವ ಸ್ತ್ರೀಯರ ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯಬಹುದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಇದಲ್ಲದೆ ಕೂಗು, ಹೊರಳಾಟ, ಬಲಹೀನತೆ, ಕಲತಿಳಿಗುವಿಕೆ, ಶೀತ, ಎದೆಯಿದ ಅಪಸ್ಮಾರ, ಹುಚ್ಚುತನ ಮೊದಲಾದ ವೇಗಬಿಗಳು 24 ಕಾಲಗಳಲ್ಲಿ ನಿಲ್ಲುವುವು. ಸ್ತ್ರೀ ಅಲ್ಲದಿರುವಿಕೆ, ಅಪಸ್ಮಾರ, ಒಮ್ಮಿಲೆ 10 ನಿಮಿಷಗಳಲ್ಲಿ ಮಾಯವಾಗುತ್ತದೆ.ಮತ್ತು ರೋಗಿಯು ಶಾಂತಿಯನ್ನು ಶ್ರಮಾಪನ್ನೂ ಪಡೆಯುತ್ತಾನೆ 10 ದಿವಸಗ ಔಷಧಿಗೆ ರೂ. 2-0-0 ಮತ್ತು 30 ದಿವಸಗ ಔಷಧಿಗೆ ರೂ. 5, ಪೋಸ್ಟೇಜು ಆಧಿಕವಿದಾ

C. L. Namawala,

ಐದು ವರ್ಷಗಳಲ್ಲಿ ಸಾಕ್ಷರತೆಯ ಪ್ರಚಾರ

(ಲೇಖಕಃ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)



ಭಾರತದಲ್ಲಿ ಅನ್ಯಾನ್ಯ ಪ್ರಾಂತ್ಯಗಳಲ್ಲಿ ಕೆಲವು ಮಟ್ಟಿಗಾದರೂ ಪ್ರಜಾಸಮುದಾಯಕ್ಕೆ ಜವಾಬುದಾರವಾದ ಪ್ರಾಂತೀಯ ಸರಕಾರಗಳ ಸ್ಥಾಪನೆಯಾದ ಬಳಿಕ, ಈಗ್ಗೆ ಕೆಲವು ತಿಂಗಳುಗಳಿಂದ ಸರಕಾರದ ಮತ್ತು ಪ್ರತಿಯೊಬ್ಬ ದೇಶಭಕ್ತನ ಮುಖ್ಯ ವ್ಯಾಪಾರವೈಶ್ಯವು ಸಾಕ್ಷರತೆಯ ಪ್ರಚಾರದ ಕಡೆಗೆ ಹರಿದಿರುತ್ತದೆ. ಒಂದು ರಾಷ್ಟ್ರದ ಪ್ರಗತಿಗೆ ಸಾಕ್ಷರತೆಯು ಪ್ರಜಾಧಾರಶಿಲೆಯಾಗಿರುವುದೆಂಬುದರಿಂದ, ಇದಕ್ಕಾಗಿ ಗಾಗರಿಯುವುದು ಸಹಜವೂ ಸ್ವಾಭಾವಿಕವೂ ಆಗಿರುತ್ತದೆ. ನಮ್ಮ ದೇಶದಲ್ಲಿರುವಷ್ಟು ಸಂಖ್ಯೆಯಲ್ಲಿ ನಿರಕ್ಷರತೆಯು ಪ್ರಾಯಶಃ ಪ್ರಪಂಚದ ಬೇರೆ ಯಾವ ನಾಗರಿಕ ದೇಶದಲ್ಲಿಯೂ ಇರುವ ಸಂಭವವಿಲ್ಲ. ಈ ದೇಶದಲ್ಲಿ ಸ್ಥೂಲವಾಗಿ 100ರಲ್ಲಿ 8ಮಂದಿ ಮಾತ್ರ ಅಂತೆ ಮಾತ್ರ ಓದುಬರಹ ಜ್ಞಾನವನ್ನು ಪಡೆದವರು ಇದ್ದಾರೆ. ಇವರು ಹೆಜ್ಜಾಗಿ ವಾಸಿಸುವುದು ಪೇಟೆ ಪಟ್ಟಣಗಳಲ್ಲಿಯೇ. ಭಾರತದಲ್ಲಿ ಪ್ರಧಾನವಾಗಿರುವ ಹಳ್ಳಿಗಳಲ್ಲಿ ವಾಸಿಸುತ್ತಿರುವ ಗ್ರಾಮಿಗರೂ ಜನರು-ದೇಶದ ಬೆನ್ನೆಲುಬಿನಂತೆ ಇರುವವರು— ಎಲ್ಲರೂ ನಿರಕ್ಷರಾಗಿರುವರು. ಅದಕಾರಣ, ನಿಜವಾದ ಅರ್ಥದಲ್ಲಿ ದೇಶಕ್ಕೆ ದೇಶವೇ ನಿರಕ್ಷರವಾಗಿದೆ ಎಂದರೆ ಸಲ್ಲುವದು. ನಿರಕ್ಷರರು ಯಾವಾಗಲೂ ಮೂಢತನ, ಮೂರ್ಖತನ, ಅಜ್ಞಾನ, ಛಾರುಕ್ಯಗಳಿಗೆ ಆಶ್ರಯವಾಗಿರುತ್ತಾರೆ. ಆದ ಕಾರಣ ದೇಶದಿಂದ ನಿರಕ್ಷರತೆಯ ಭೂತದ ನಿರ್ಮೂಲನೆಯಾಗುವ ತನಕ ದೇಶೋನ್ನತಿಯನ್ನು ಕನಸು ಮನಸ್ಸುಗಳಲ್ಲಿ ಕೂಡ ಎಣಿಸ ಕೂಡದಲ್ಲ.

ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಬೇಕೆನ್ನುವದು ಇದೇ ಕಾರಣದಿಂದ ಆದರೆ ಮಕ್ಕಳ ಶಿಕ್ಷಣದ ವ್ಯವಸ್ಥೆಯಾದ ಮಾತ್ರದಿಂದ ಸಾಕ್ಷರತೆಯ ಸಮಸ್ಯೆಯನ್ನು ಸಂಪೂರ್ಣ ತೃಪ್ತಿಕರವಾಗಿ ಬಿಡಿಸಿದಂತಾಗುವದಿಲ್ಲ. ಪ್ರಾಥಮಿಕ ಶಾಲೆಗಳಿಗೆ ಹೋಗುವ ಮಕ್ಕಳ ಸಾಧಾರಣ ವಿಂಡು 12 ವರ್ಷ ದೊಳಗಿನವರು. ಅವರಿಗೆ ಕಲಿಸಲೂ ವ್ಯಾಯ ಮಿರಿದ ನಿಕ್ಷರರ ಸಂಖ್ಯೆ ದೇಶದಲ್ಲಿ ಕೋಟಿಗಟ್ಟಲೆಯಷ್ಟು ಇರುತ್ತದೆ. ಇವರನ್ನೂ ಕೂಡ ಸಾಕ್ಷರನ್ನಾಗಿ ಮಾಡುವದು ಥಾದ್ದು ಕರ್ತವ್ಯವಾಗಿದೆ. ಪಾಶ್ಚಾತ್ಯ ದೇಶ ರರು 100ಕ್ಕೆ 91ರಂತೆ ನಮ್ಮ ದೇಶದಲ್ಲಿ ಇರುವರಾಗಿ ಊಹೆ ಇದೆ. ಇವರನ್ನು ಸಾಕ್ಷರರನ್ನಾಗಿ ಮಾಡುವದು ಒಂದು ಸಮಸ್ಯೆಯೇ ಸರಿ ಆದರೆ ಆ ಸಮಸ್ಯೆಯನ್ನು ಬಿಡಿಸಿದ ಹೊತ್ತು ಕಾರ್ಯಸಾಧನೆಯಾಗ ವದಿಲ್ಲವಷ್ಟೆ!

ಇಲ್ಲೊಂದು ವಿಚಾರಣೀಯ ವಿಷಯ ವಿದೆ. ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡಿಸುವದು ಎಷ್ಟು ಕಠಿನತರವೂ ಖರ್ಚಿನದ್ದೂ ಆಗಿರುವದೋ ಅಷ್ಟು ಪ್ರಾಯಸ್ಥರಿಗೆ ಸಾಕ್ಷರತೆಯ ಪ್ರಚಾರವು ಕಠಿನವೂ ಖರ್ಚಿನದ್ದಾಗಿಯೂ ಇರುವದಿಲ್ಲ. ಸ್ಥಳ ಕಾಲ ಪರಿಸ್ಥಿತಿಗಳನ್ನು ಆಲೋಚನೆಗೆ ತೆಗೆದುಕೊಂಡು ಅದಕ್ಕನುಕೂಲವಾಗಿ ಪ್ರಾಯಸ್ಥರಲ್ಲಿ ಸಾಕ್ಷರತೆಯ ಬಗ್ಗೆ ಆಶೆ ಕುತೂಹಲಗಳನ್ನು ಹುಟ್ಟಿಸುವದೊಂದೇ ಪ್ರಧಾನಕಾರ್ಯವಾಗಿರುತ್ತದೆ. ತಾವು ಸಾಕ್ಷರರಾಗಬೇಕೆಂಬ ಆಸೆಯು ನಿರಕ್ಷರ ಪ್ರಾಯಸ್ಥರಲ್ಲಿ ಮೂಡಿದಿಂದಾಗ, ಅವರಿಗನುಕೂಲವಾದ ಸ್ಥಳ, ಕಾಲಗಳಲ್ಲಿ ಅವರಿಗೆ ಬಹಳ ಖರ್ಚು ಆಗದಂತೆಯೂ ಅಕ್ಕಪಕ್ಕ ಸಮುದಲ್ಲಿಯೂ ಅಕ್ಷರ ಜ್ಞಾನವನ್ನು ಅವರಿಗೆ ಕೊಡುವದಾದರೆ, ಅಂಥ ಯೋಜನೆಯೂ ಪೂರ್ಣ ಸಫಲ ಮತ್ತು ಯಶಸ್ವಿಯಾಗುವದೆಂಬುದರಲ್ಲಿ ಯಾವ ಸಂದೇಹವೂ ಬೇಡ.

ಹಳ್ಳಿಗರಿಗೆ ಧರ್ಮ ಎಂದರೆ ಪ್ರಾಣ ತಾನೆ? ಅವರಿಗೆ ಪುರಾಣ ಕತೆಗಳನ್ನು ಕೇಳಲಿಕ್ಕೂ ಹೇಳಲಿಕ್ಕೂ ಆತುರ ಬಹಳ ಇರುತ್ತದೆ. ಅವರ ಇಂಥ ಮನೋವೃತ್ತಿಯ ಸದುಪಯೋಗ ತೆಗೆದುಕೊಂಡು, ನಿರಕ್ಷರ ಪ್ರಾಯಸ್ಥ ಗ್ರಾಮಿಣ ಜನರಲ್ಲಿ ಸಾಕ್ಷರತೆಯ ಬಗ್ಗೆ ಕುತೂಹಲವನ್ನು ಹುಟ್ಟಿಸಬಹುದು. ಇಂಥ ಕುತೂಹಲವನ್ನು ಹುಟ್ಟಿಸುವದಕ್ಕೆ ರೇಡಿಯೋ, ಚಲಚಿತ್ರ, ನಾಯಾತಾಂದ್ರ ಮೊದಲ್ಗಾದ ವೈಜ್ಞಾನಿಕ ಉಪಕರಣಗಳೂ ದೊಡ್ಡ ಸಾಧನಗಳಾಗಿವೆ. ಒಂದು ಗ್ರಾಮದ ಜನರು ತಂತಮ್ಮ ಕೇಂದ್ರಗಳಲ್ಲಿ ಹೀಗೆ ಒಟ್ಟು ಕೂಡುವ ಅಭ್ಯಾಸವುಳ್ಳವರಾದ ಬಳಿಕ ದಿವಸಕ್ಕೆ ಒಂದು, ಒಂದೂವರೆ ತಾಸುಗಳ ನಂಶ್ರವುದಿಂದ, ಹೆಜ್ಜಾದರೆ ಬರೇ ನೂರು ತಿಂಗಳುಗಳಲ್ಲಿ ಪ್ರಾಯಸ್ಥ ನಿರಕ್ಷರರನ್ನು ಸಾಕ್ಷರರನ್ನಾಗಿ ಮಾಡಬಹುದು. ಅವರನ್ನು ಸಾಕ್ಷರರನ್ನಾಗಿ ಮಾಡುವ ಉದ್ದೇಶ ಸುಲಭ ಶೈಲಿಯ ಪುಸ್ತಕಾದಿಗಳನ್ನು ಓದಲು ಮತ್ತು ಪರಸ್ಪರ ಕಾಗದ ಪತ್ರಗಳನ್ನು ಬರೆಯಲಿಕ್ಕೆ ಬೇಕಾದಷ್ಟು ಯೋಗ್ಯತೆಯನ್ನು ತಂದು ಕೊಡುವದಾಗಿದೆ.

ಮಕ್ಕಳಿಗೆ ೩-೪ ವರ್ಷಗಳಲ್ಲಿ ಬರಬೇಕಾದ ೩ರಷ್ಟು ಜ್ಞಾನವು ಪ್ರಾಯಸ್ಥರಿಗೆ 2-8 ತಿಂಗಳೊಳಗೆ ಬರುವದೆ ಹೇಗೆ ಸಾಧ್ಯ ಎಂದು ಕೇಳಬಹುದು. ಮಕ್ಕಳಿಗೆ ಶಿಕ್ಷಣವನ್ನು ಕೊಡುವಾಗ ಅವರ ಮನೋವಿಕಾಸ, ಬುದ್ಧಿಶಕ್ತಿಗಳ ಕಡೆಗೆ ನಾವು ವಿಶೇಷ ಲಕ್ಷ್ಯವನ್ನು ಕೊಡಬೇಕಾಗುತ್ತದೆ. ಮಕ್ಕಳಿಗೆ ಓದುಬರಹಗಳ ಜೊತೆಗೆ ಭೂಪಟ ವಿಷಯಗಳ ಜ್ಞಾನವನ್ನು ಕೂಡ ಬೇಕಾಗುತ್ತದೆ. ಆದಕಾರಣ ಅವರ ಶಿಕ್ಷಣದ ಮಟ್ಟಿಗೆ ಒಂದು ನಿರ್ದಿಷ್ಟವಾದ ಶಿಕ್ಷಣ ಕ್ರಮವನ್ನು ಅನುಸರಿಸಬೇಕಾಗುತ್ತದೆ. ಆದಕಾರಣ ಮಕ್ಕಳ ಶಿಕ್ಷಣಕ್ಕೆ ಸಮಯವು ಬೇಕಾಗುವದು ಸಹಜ. ನಿಸ್ಸಾಯಸ್ಥರ ಶಿಕ್ಷಣದ ದೃಷ್ಟಿಗೆ ಇಂಥ ಅಪಯುಕ್ತ ಅಥವಾ ಅನುಪಯುಕ್ತ ಯಾವ ತೊಡಕೂ ಇರುವದಿಲ್ಲ. ಒಂದು ಪರಿಮಿತಿಯ ತನಕ ಅವರ ಮನೋವಿಕಾಸವು ಮೊದಲೇ ಜಾಗೃತವಾಗಿದೆ. ಬಹುಮಂದಿ ವಯಸ್ಕರಿಗೆ ಇರಬೇಕಾದ ಆಸಕ್ತಿಗಳ ಜ್ಞಾನವು ಕೂಡ ಅವರಿಗೆ ಇರುವದು. ಆದ್ದರಿಂದ ಅವರ ಶಿಕ್ಷಣವು ಸಹ ತ್ತಾದ ಕ್ರಮವನ್ನು ಅನುಸರಿಸಲ್ಪಟ್ಟರೆ ಬೇರೆ ಅಕ್ಷರ ಜ್ಞಾನವನ್ನು ಕೊಡುವದಕ್ಕಾಗಿ ಸುಲಭವೂ ಅನುಯುಕ್ತವೂ ಎಂದು ತೋರುವ ಯಾವ ಕ್ರಮವನ್ನಾದರೂ ಅನುಸರಿಸಬಹುದು.

ಅಂಥ ಒಂದು ಕ್ರಮವು ಇಲ್ಲಿದೆ. ಒಂದು ಕ್ಕೊಂದು ಸಂಬಂಧವಿಲ್ಲದ ಅಕ್ಷರಗಳನ್ನು ಬಿಡಿ ಬಿಡಿಯಾಗಿ ಕಲಿಸಲಿಕ್ಕೂ ಕಲಿಯಲಿಕ್ಕೂ ಬೇಸರವಾಗ ವದು. ಅನುಭವಜನ್ಯವಾದ ವಿಷಯವಾಗಿದೆ. ಅನೇ ಅಕ್ಷರಗಳಿಂದ ಕೂಡಿದ ವಾಕ್ಯಗಳನ್ನು ಕೊಟ್ಟು, ಅವುಗಳೊಳಗಿನ ಶಬ್ದಗಳನ್ನೂ ಅಕ್ಷರಗಳನ್ನೂ ಬೇರೆಬೇರೆಯಾಗಿ ಕಲಿಸುವದು ಪರಿಣಾಮಕಾರಿಯಾಗಿದೆ. ಆದ್ದರಿಂದ ಮೊತ್ತಮೊದಲು 'ಅ'ಕಾರಾಂತ ಕೆಲವು ಅಕ್ಷರಗಳ ವಾಕ್ಯಗಳನ್ನು ಮಾಡಿ ಒಂದೊಂದು ದಿನ ಒಂಗೆರಡರಂತೆ ಕಲಿಸುತ್ತ ಹೋಗುವ. ವಿಶೇಷವಾಗಿ ಉಪಯೋಗದಲ್ಲಿಲ್ಲದ ಜ, ಞ, ಮತ್ತು ಕ್ಷ, ಜ್ಞಗಳನ್ನು ಬಿಟ್ಟು ಅಕ್ಷರಮಾಲೆಯ ಎಲ್ಲ 'ಅ'ಕಾರಾಂತ ಅಕ್ಷರಗಳಿಂದೊಡಗೂಡಿದ ಕೆಲವು ವಾಕ್ಯಗಳನ್ನು ಕುದಾಹರಣೆಗಾಗಿ ಕೆಳಗೆ ಕೊಟ್ಟಿದೆ. ಕೆಳಗಿನ ಯಾವ ವಾಕ್ಯದಲ್ಲಿಯಾದರೂ ೮ಕ್ಕಿಂತ ಹೆಚ್ಚು ಹೊಸ ಅಕ್ಷರಗಳಿರುವುದಿಲ್ಲ. ಪ್ರತಿಯೊಂದು ವಾಕ್ಯದಲ್ಲಿಯೂ ಹಿಂದಿನ ವಾಕ್ಯಗಳೊಳಗಿನ ಕೆಲವು ಅಕ್ಷರಗಳ ಪುನರಾವರ್ತನೆಯೂ ಆಗಿದೆ.

ವಾಕ್ಯಗಳು	ಅಕ್ಷರಗಳು
ಅ ರ ಸ ನ ಮಗ	6
ತ ನ ಯ ನ ಜ ನ ನ ದ ಫಲ	6
ಕ ಣ ನೆ ಚ ಹ್ಮ ಕ ದ ಫೆ ನ	6
ರಮಣನ ಹ ದ್ದ ಳ ದ ಸರ	
ಮ ತ ದ ಖರದ ಫಲ	6
ಶಕ್ತಿದ ಯ ಟಿ ಪ ಟಿಗಮನ	
ಭ ರತನ ಬ ಲದ ಕ ಥನ	6
ಡ ಮರ ದ ಢ ಣ ಢ ಣ ರವ	
ಚರಕದ ಧ ನದ ಬ ಲ	8

ಒಂದೊಂದು ದಿನ ಅಥವಾ ಅಕ್ಷರಗಳ ವಾಕ್ಯ ಅಥವಾ ವಾಕ್ಯಗಳನ್ನು ಕಲಿಯುದರೊಂದು ವಾರದಲ್ಲಿ ಈ ಕಾರ್ಯ ತೀರುತ್ತದೆ. ವಾಕ್ಯಗಳನ್ನು ಒಂದೊಂದಾಗಿ ಕಲಿಸುತ್ತ ಹೋದ ಹಾಗೆ ಕಲಿತ ವಾಕ್ಯಗಳ ಅಕ್ಷರಗಳಿಂದಾಗುವ ಬೇರೆ ಬೇರೆ ಶಬ್ದಗಳನ್ನೂ ವಾಕ್ಯಗಳನ್ನೂ ಮಾಡಿಸಿ ಬರೆಸಿ ಓದಿಸುವದರಿಂದ ಅಭ್ಯಾಸವು ಜೀವ್ಯಾನಿ ನಡೆಯುತ್ತದೆ. ಉದಾಃ ಅರಸನ ಮಗ, ಮಗನ ಸರ, ಸರಸನ ಗಮನ ಅಗಸನಗಮನ ತನಯನ ಜೀವನದ ಫಲ, ಜನರ ಗದುನದ ಕರ, ದನದ ನಯನದ ಸರ, ಇತ್ಯಾದಿ.

ಇದೇ ಕ್ರಮವನ್ನನುಸರಿಸಿ ಎರಡನೆ ಮೂರನೆ ವಾರಗಳಲ್ಲಿ ಕ್ರಮವಾಗಿ ಆ, ಇ, ಈ, ಉ, ಊ, ಋ ಏ, ಒ, ಓ, ಔ ಸ್ವರಾಂತ ಅಕ್ಷರಗಳನ್ನು ಕಲಿಸಬೇಕು. ಉದಾ —

ಆ ಆ ಕಾ ಲ ದ ಫಲ

ನಂ ರಾ ಮಣನ ಮಗ ರಾನ

ಇ ಇ ವ ನ ಕಷಾಯ ಕಹಿ

ಒ ನ ಯ ಹಿತದ ವಾಣಿ

ಮೂರನೆ ವಾರದಲ್ಲಿ ಮೇಲೆ ಹೇಳಿದ ಬಿಟ್ಟ ಅಕ್ಷರಗಳು ಮತ್ತು ಒತ್ತಕ್ಷರಗಳ ವಿಚಾರವನ್ನು ಕೊಡಬಹುದು. ಹಿಂದಿನ ತೆ ಇಲ್ಲಿಯೂ ವಾಕ್ಯಗಳು ಮೂಲಕವೇ ಅಕ್ಷರ ಜ್ಞಾನವನ್ನು ಕೊಡುದು ಹಿತಕರವಾಗಿದೆ. ಕ್ + ಕ = ಕ್ಕ, ಬ್ + ಬ = ಬ್ಬ, ಸ್ + ನೇ = ಸ್ನೇ, ಗ್ + ರ = ಗ್ರ ಇತ್ಯಾದಿ ಅಗುವ ಕವನ್ನು ಹೇಳಿಕೊಡುತ್ತಾ ಬೇರೆ ಬೇರೆ ದಿನಗಳ ಅಭ್ಯಾಸಗಳಲ್ಲಿ ಇವೇ ಮೊದಲಾದ ವಾಕ್ಯಗಳನ್ನು ಉಪಯೋಗಿಸಬಹುದು — ಅಕ್ಕನ ಮಗ ಸುಬ್ಬ, ರಾಮನ ಸ್ನೇಹ ಒಳ್ಳೆದ, ಮುಸಿಯ ಅಗ್ರಹ ಕಟದ ಇತ್ಯಾದಿ. ಮುಂದೆ ರ್ + ಚಿ = ರ್ಚಿ, ರ್ + ಮ = ರ್ಮ, ಅರ್ಕ ಒತ್ತಿನ ಕ್ರಮವನ್ನು ಹೇಳಿ— ರಾಮನು ಕುರ್ಚಿಯ ಮೇಲೆ ಕೂತಿದ್ದಾನೆ, ಅವನ ಕರ್ಮ ಅವನ ಬೆನ್ನು ಬಿಡಲಿಲ್ಲ ಮುಂತಾದ ವಾಕ್ಯಗಳ ಮೂಲಕ ಅಭ್ಯಾಸ ನಾಡಿಸಬೇಕು. ಆ ಮೇಲೆ ಜ, ಞ, ನ, ಣ, ಮ ಇವುಗಳಿಗೆ ಬೇರೆ ಅಕ್ಷರಗಳಒತ್ತುಗಳು ಬರುವ ಸಂದರ್ಭದಲ್ಲಿ ಈ ಅಕ್ಷರಗಳ ಸ್ಥಾನದಲ್ಲಿ ಸೊನ್ನೆ (೦) ಬರೆದು ಒತ್ತಕ್ಷರವನ್ನು ಪೂರ್ಣಾಕ್ಷರವಾಗಿ ಬರೆಯುವ ಕ್ರಮವುಂಟೆಂದೂ ತಿಳಿಸುವದು. ಉದಾಃ ಬೆನ್ನ ಅಕ್ಕಿ = ಬೆನ್ದ ಅಕ್ಕಿ, ಬೆಂಡ ಅಕ್ಕಿ, ಹೀಗೆ ಒಂದು ತಿಂಗಳಲ್ಲಿ ಎಲ್ಲ ಅಕ್ಷರ ಜ್ಞಾನವೆ ಪ್ರಾಯಸ್ಥರಿಗೆ ಆಗುವದು.

ಇನ್ನೊಂದು ತಿಂಗಳಲ್ಲಿ ಸುಲಭ ಶೈಲಿಯಲ್ಲಿ ಬರೆದು ದೊಡ್ಡ ಅಕ್ಷರಗಳಿಂದ ಧಾರಾಳವಾದ ರಾಮಾಯಣ, ಭಾರತ, ಭಾಗವತ, ಬ್ಯಾಬಲ ಮೊದಲಾದ ಧಾರ್ಮಿಕ ಮತ್ತು ಭಿನ್ನ ಹಾಸಿಕ ಗ್ರಂಥಗಳೊಳಗಿನ ರಸವತ್ತಾದ ಸಣ್ಣ ಸಣ್ಣ ನೀತಿ ಕಥೆಗಳನ್ನೂ, ಪತ್ರ ಪತ್ರಿಕೆಗಳನ್ನೂ ಓದಲಿಕ್ಕೆ ಕೊಟ್ಟು ವಾಚನಾಧಿರುಚಿಯನ್ನೂ, ಪತ್ರವ್ಯವಹಾರ, ಲೆಕ್ಕಪತ್ರ ಕ್ರಮವನ್ನು ತಿಳಿಸಿ ಬರೆಯುವ ಅಧಿರುಚಿಯನ್ನೂ ಪ್ರಾಯಸ್ಥರಲ್ಲಿ ಹುಟ್ಟಿಸಬೇಕು. ವಾಚನ ಲೇಖನಾಧಿರುಚಿಯು ಹೀಗೆ ಸಾಕ್ಷರರಾದವರಲ್ಲಿ ಹುಟ್ಟಿತೆಂದರೆ ಮತ್ತೆ ನಮ್ಮಂಥವರ ಕೆಲಸವು ಸದ್ಯಕ್ಕೆ ಮುಗಿದಂತಾಗುತ್ತದೆ. ಆಗಾಗ ಅವರನ್ನು ಕಂಡು ಮಾತನಾಡಿಸಿ, ಸ್ವಲ್ಪ ಮಟ್ಟಿಗೆ ಸಹಾಯಮಾಡುವ ಹಿತ್ಛೇವರಿದ್ದರೆ ಸರಿ, ತಮ್ಮ ವಿಚಾರವನ್ನು ಅವರು ತಾವಾಗಿಯೇ ಮಾಡಿಕೊಳ್ಳುವರು.

ಹೀಗೆ ಸಾಕ್ಷರತೆಯ ಪ್ರಚಾರವನ್ನು ಮಾಡಲಿಕ್ಕೆ ಬಹಳ ಖರ್ಚು ತಗಲುವ ಸಾಹಿತ್ಯೋಪಕರಣಗಳ ಆವಶ್ಯಕತೆ ಇರುವದಿಲ್ಲ. ಪೋಸರ ಸೆಕೆಂಡರಿಗೆ ಕಡಿಮೆಯಾಗದ ಶಿಕ್ಷಣವನ್ನು ಪಡೆದ ಯಾರೊಬ್ಬ ಕುಶಲಮತಿಯಾದರೂ ಈ ಕಾರ್ಯವನ್ನು ಸ್ವಲ್ಪ ಭೂತ್ರ ಅನುಭವದಿಂದ ಪ್ರಯಾಸವಿಲ್ಲದೆ ಕೈಕೊಳ್ಳಬಹುದು. ಶಿಕ್ಷಕರ ರಿಯದ್ಯೋಗಿಗಳು, ಸೆಕೆಂಡರಿ ಕಾಲೇಜು ವಿದ್ಯಾರ್ಥಿಗಳೂ ಇವರ ಸಹಾಯ ಸಹಕಾರಗಳು ದೊರೆತರೆ ಗ್ರಾಮ ಶಾಲೆಗಳ ಉಪಾಧ್ಯಾಯರು ೨ ವರ್ಷಗಳಲ್ಲಿ ದೇಶಕ್ಕೆ ದೇಶವನ್ನೇ ಸಾಕ್ಷರವಾಗಿ ಮಾಡಲಿಕ್ಕೆ ಸಾಧ್ಯ ಉಂಟು. ಹೇಗೆಂದರೆ —

1000 ಜನಸಂಖ್ಯೆಯುಳ್ಳ ಒಂದೊಂದು ಗ್ರಾಮ ಕೇಂದ್ರದಲ್ಲಿ ಶಾಲೆಗೆ ಹೋಗುವ ಪ್ರಾಯದ ಸುಮಾರು 100 ಮುಂದ ಶಾಲೆಗೆ ಹೋಗುವ ಪ್ರಾಯದ ಮಕ್ಕಳು ಇರಬಹುದು. ಅವರಿಗೆ ಒಂದು ಪ್ರಾಥಮಿಕ ಶಾಲೆ ಮತ್ತು ಅದರಲ್ಲಿ ಕೆಲಸ ಮಾಡುವ ನೂವರು ಉಪಾಧ್ಯಾಯರು ಒಂದೊಂದು ಕೇಂದದಲ್ಲಿ ಇದ್ದೇ ಇರುತ್ತಾರೆ. ಇವರ ಕೈಕೆಳಗೆ ಮಕ್ಕಳು 5 ವರ್ಷಗಳೊಳಗೆ ಪ್ರಾಥಮಿಕ ಶಿಕ್ಷಣವನ್ನು ಪಡೆದೇ ಪಡೆಯುವರು. ಇಳಿದವರು 900 ಮುಂದಿ ಇನರಲ್ಲಿ ದೊದಲೇ ಅಕ್ಷರ ಜ್ಞಾನವನ್ನು ಪಡೆದಿಂಥವರು, ಸ್ಪದ್ಧರು ಮತ್ತು ವಿಕಲಾಂಗಿಗಳನ್ನು ಬಿಟ್ಟರೆ ಹೆಚ್ಚೆ ಕಡಿಮೆ 800 ಮುಂದ ಪ್ರಾಯಸ್ಥರು ಆ ಕೇಂದದಲ್ಲಿ ಅಕ್ಷರ ಜ್ಞಾನವನ್ನು ಪಡೆಯುತ್ತಿರುವರು. ಒಬ್ಬೊಬ್ಬ ಕೆಲಸಗಾರನ 3 ತಿಂಗಳ ಒದ ಅವಧಿಯಲ್ಲಿ ಕನಿಷ್ಠ ಪಕ್ಷ 15 ಜನರನ್ನು ಸಾಕ್ಷರರನ್ನಾಗಿ ಮಾಡಲಿಕ್ಕೆ ಸರ್ಧಿಸಿದ್ದಾನೆ ಒಂದ ವರ್ಷದಲ್ಲಿ ಒಬ್ಬನು 15 × 4 = 60 ಂ ವರ್ಷಗಳಲ್ಲಿ 60 × 5 = 300 ಜನರನ್ನು ಸಾಕ್ಷರರನ್ನಾಗಿ ನೂಡುವನು. ಗಾನ ಶಾಲೆಯ ಬರೇ ನೂವರು ೧೦೦ ಉಪಾಧ್ಯಾಯರ ತಮ್ಮ ಕೇಂದ್ರದ ಎಲರನ್ನು 800 × 3 = 900) ಸಾಕ್ಷರರನ್ನಾಗಿ ಮಾಡಲಿಕ್ಕೆ ಸರ್ಧರಿದ್ದಾರೆ. ಆದರೆ ರಜೆ, ಅಸ್ವಸ್ಥ ಕೌರ್ಯ ಬಾಹ್ಯ ಮೊದಲಾದ ಕಾರಣಗಳಿಂದಾಗಿ ಅದು ಅವಂದ ಪೂರ್ಣ ಸಂಧ್ಯವಾಗಲಿಕ್ಕಿಲ್ಲ. ಪರಕ ಒಬ್ಬೊಬ್ಬ ಉಪಾಧ್ಯಾಯರಿಗೆ ವಿದ್ಯಾರ್ಥಿ, ಸರಿದ್ಯೋಗಿಯುದ್ಧ ಒಬ್ಬೊಬ್ಬ ಸಹಾಯಕನು ದೊರೆತರೆ ಈ ಕಾರ್ಯವು ಸಭಸಾಧ್ಯವಾಗ ವದು, ವನಾತ್ಯನಲ್ಲ ವಿದ್ಯಾರ್ಥಿ ನಿರುದ್ಯೋಗಿಗಳಿಗೂ ಬಿಡು ಸಮಯದ ಒಂದು ಉದ್ಯೋಗವು ದೊರೆತಂತೆ, ವಿದ್ಯಾರ್ಥನೆ, ಜೀವಿಕಾಜಾನೆಗೆ ಕೊಂಚ ಸಹಾಯವೂ ಆಗುವದು.

ಈಗುಳಿದಿರುವದು ಆರ್ಥಿಕ ಪ್ರಶ್ನೆ. ಇದರ ಕೂಡ ಬೆಸಲಿಸಾಧ್ಯವಾದಷ್ಟು ತೊಡಕಾಗಿರುವದೆಂದು ನನಗೆ ತೋರುವದಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಸಾರ್ವಜನಿಕವಾಗಿ ಮಾಡಲಿಕ್ಕಾಗುತ್ತದೆಂದು ಮಹಾತ್ಮಾಜಿಯವರು, ಸಾರಿದ್ದಾರೆ. ಅದಕ್ಕಾಗಿ ಅಲ್ಲಲ್ಲಿ ಪ್ರಯತ್ನಗಳೂ ನಡೆಯುತ್ತಿವೆ. ಇದು ಸಾಧ್ಯವೆಂದಾದರೆ, ಮತ್ತೆ ಆರ್ಥಿಕ ದೃಷ್ಟಿಯಿಂದ ಕೂಡ ೨ ವರ್ಷಗಳೊಳಗೆ ಸಾಕ್ಷರತೆಯ ಪ್ರಚಾರ ಮಾಡುವದೂ ಸಾಧ್ಯವೆಂದಾಗುತ್ತದೆ. ಹಾಗಲ್ಲವಾದರೆ ಸರಕಾರವೂ ಅರ್ಥಶಾಸ್ತ್ರಿಗಳೂ ಒಟ್ಟು ಕೂಡಿ ಈ

(ಉಳಿದ ಭಾಗವು ಮುಂದಿನ ಸಂಚಿಕೆಯಲ್ಲಿ)

ವಿದ್ಯಾರ್ಥಿಗಳಿಗೆ ಅಭಿವಿಜ್ಞಾಪನೆ.

ಸ್ನೇಹಿತರೆ, ಭವಿಷ್ಯದಲ್ಲಿ ನೀವು ಯಾವ ಕ್ಷೇತ್ರಗಳಲ್ಲಿ ಅನುಭವಿಗಳಾಗಿ ಕೆಲಸ ಮಾಡಬೇಕಾಗಿದೆ? ನಿಮ್ಮ ಕಾರ್ಯಕ್ಷೇತ್ರ ಯಾವುದು? ಹೇಗಿರಬೇಕು? ಸ್ವರೂಪ ಹೇಗಿರುತ್ತದೆ? ಸ್ವಾತಂತ್ರ್ಯ ಹೇಗಿರುತ್ತದೆ? ಸಂಸ್ಥಾನ ಹೇಗಿರುತ್ತದೆ? ಸ್ವರಾಜ್ಯ ಹೇಗಿರುತ್ತದೆ? ಸಾಮ್ರಾಜ್ಯ ಹೇಗಿರುತ್ತದೆ? ಸಂಸ್ಥಾನ

ಖಾದಿಯ ಉಜ್ವಲ ಭವಿಷ್ಯ

(ಅನುವಾದಕ: ಲಕ್ಷ್ಮೀಪತಿ)

ಇನ್ನೆಗೆ ಕೆಲವು ರಾಜಸ್ಥಿತಿಕ ಅಧಿಕಾರ ಳು ಸ್ವಾತಂತ್ರ್ಯಾದೊಡನೆ ಮತ್ತು ಕಾಂಗ್ರೆಸ ರ್ಯಕರ್ತರು ಮಂತ್ರಿಮಂಡಲಗಳನ್ನು ಅನಂತರ, ಖಾದಿ ಪ್ರಚಾರ ಮತ್ತು ರಚನಾತ್ಮಕ ಸಾಧನೆಗಳ ಅವಶ್ಯಕತೆಯು ವರಿಲ್ಲವೆಂದು ಪ್ರಾಯಶಃ ಕೆಲವು ತಿಳಿಕೊಳ್ಳಬಹುದು ಆದರೆ ಸತ್ಯವು ವಿಪರೀತವಾಗಿದೆ. ತನ್ನ ರಚನಾತ್ಮಕ ರ್ಯಕ್ರಮವನ್ನು ಸಫಲ ಮಾಡುವ ಉದ್ದೇ ಂದಲೇ ಮುಖ್ಯವಾಗಿ ಕಾಂಗ್ರೆಸು ವ್ಯವಸ್ಥಾ ಕ ಮಂಡಲಗಳನ್ನು ಸೇರಿರುತ್ತದೆ. ಮತ್ತು ಲ್ಲಿಯ ವರೆಗೆ ಸಾಧ್ಯವಿದೆಯೋ ಅಲ್ಲಿಯ ನಕ, ಸದ್ಯ ಉಪಲಬ್ಧವಿರುವ ಸಾಧನಗಳ ಸಹಾಯದಿಂದ ರಚನಾತ್ಮಕ ಕಾರ್ಯಕ್ರಮದ ಫಲತೆಗಾಗಿ ವ್ಯಯಿಸುವದು ಈ ಸಂಬಂಧ ಾಗಿ ಕಾಂಗ್ರೆಸಿನ ಪ್ರಮುಖ ನುಖಂಡರಾದ ಾಕ್ಟರ ಪಟ್ಟಾಭಿ ಸೀತಾರಾಮಯ್ಯನವರು ನ್ನೊಮ್ಮೊಂದು ಲೇಖನದಲ್ಲಿ ಕೆಲವು ಮಹತ್ವ ಪೂರ್ಣ ವಿಚಾರಗಳನ್ನು ನ್ಪಷ್ಟಪಡಿಸಿದ್ದಾರೆ. ಇನ್ನು ಮುಂದೆ ಖಾದಿ ಪ್ರಚಾರ ಕಾರ್ಯವನ್ನು ತ್ರಾಂತೀಯ ಸರಕಾರಗಳ ಔದ್ಯೋಗಿಕ ಇಲಾ ಖೆಯಮೂಲಕ ನಾಡಬೇಕೆಂಬುದು ಅವರ ಭಿಪ್ರಾಯವಾಗಿರುತ್ತದೆ. ಮುಂದೆ ಅವರು ರಿದಿರುವದೇನೆಂದರೆ–:

. ಹಿಂದುಸ್ತಾನದಲ್ಲಿ 85000 ಲಕ್ಷದಿಂದ 0000 ಲಕ್ಷ ಗಜಗಳ ವಸ್ತ್ರದ ಆವಶ್ಯಕತೆಯು ರುತ್ತದೆ. ಇದರ ಅಧಿಕಾಂಶವನ್ನು ಹಿಂದು ಸ್ತಾನದ ಮಿಲ್ಲುಗಳು ತಯಾರಿಸುತ್ತವೆ. ಇದ ರೂ ಕೂಡ ಸುಮಾರು 9ಕೋಟಿ 50ಲಕ್ಷ ರೂ ತಾಯಿಗಳ ವಸ್ತ್ರವು ವಿಲಾಯತಿಯಿಂದಲೂ ಸುಮಾರಾಗಿ ಅಷ್ಟೇ ಮೌಲ್ಯದ ವಸ್ತ್ರವು ಜಪಾ ನಿನಿಂದಲೂ ಪ್ರತಿ ವರ್ಷ ನಮ್ಮ ದೇಶಕ್ಕೆ ಬರು ತ್ತದೆ. ಇದರ ಬದಲಾಗಿ ಈ ಎರಡು ದೇಶ ಗಳು ನಮ್ಮ ದೇಶದ ಹತ್ತಿಯನ್ನು ಕೊಂಡುಕೊ ಳ್ಳುತ್ತವೆ. ನಾವು ಹಳ್ಳಿಗಳನೇಕರ ನೂತ ವಲ್ಲ, ನೂಲುವವರ ಯೋಗಕ್ಷೇಮವನ್ನು ತೆಗೆ ದುಕೊಂಡು ಅವರಿಗೆ ಸಹಾಯ ಮಾಡಬೇಕಾ ಗಿದೆ.

ಖಾದಿಯ ಉತ್ಪತ್ತಿ ಕಾರ್ಯವನ್ನುಅಖಿಲ ಭಾರತ ಚರಕಾ ಸಂಘೆ ಮತ್ತು ಅದರ ಶಾಖೆ ಗಳೂ ವಿತರಣಕಾರ್ಯವನ್ನು ಸಹಯೋಗೀ ಸಮಿತಿಗಳೂ ನಾಡಬಹುದು. ಸಹಯೋಗಿ ಸಮಿತಿಗಳು ಉತ್ಪತ್ತಿ ಕಾರ್ಯವನ್ನು ಮಾಡ ಭಾರದೆಂದೇನೂ ನಿಬಂಧಮಿರಬಾರದು. ಇನ್ನುರ ತನಕ ಸರಕಾರವು ಸಹಯೋಗಿ ಸಮಿತಿಗಳ ಕಾರ್ಯನಿರ್ವಾಹಕ ಕಾರ್ಯದಲ್ಲಿ ತೊಂದರೆ ಯನ್ನು ಕೊಡುವದಿತ್ತು ಅದು ಇನ್ನು ಮುಂದೆ ಇಲ್ಲ. ಪ್ರತಿಯೊಂದು ಸಹಯೋಗಿ ಸಮಿತಿಯು ವರ್ಷಾವಧಿ 500 ರೂಪಾಯಿಗಳ ಖರ್ಚಿನ ಮಾ ರುವದಾದರೆ ಇಡೀ ಪ್ರಾಂತ್ಯದಲ್ಲಿ ಬಹಳ ಖಾ ದಿಯು ಮಾರಿ ಹೋಗುವದು. ಈಗಲಾದರೋ ಹಳ್ಳಿಪಳ್ಳಿಗಳಲ್ಲಿಯೂ ಪ್ರಚಾರಕ್ಕೆ ಬೇಕಾದಷ್ಟು ಖಾದಿಯು ಉತ್ಪತ್ತಿಯಾಗುವದಿಲ್ಲ. ಆದರೆ ಈ ಕಾರ್ಯವನ್ನಾರಂಭಿಸಿದ ಬಳಿಕ ಖಾದಿಯ ಉತ್ಪತ್ತಿಯಲ್ಲಿ ವೃದ್ಧಿಯಾಗಿ ಪೇಟೆಪಟ್ಟಣಗ ಳಲ್ಲಿ ಮಾತ್ರವಲ್ಲದೆ ಹಳ್ಳಿಪಳ್ಳಿಗಳಲ್ಲಿ ಕೂಡ ಖಾದಿಯ ಪ್ರಚಾರವಾಗ ತೊಡಗುವದು. ಖಾ ದಿಯ ಈ ವಿತರಣ ಕಾರ್ಯದಲ್ಲಿ ಸರಕಾರವು ಸ್ವಲ್ಪ ಮಟ್ಟಿನ ಆರ್ಥಿಕ ಸಹಾಯವನ್ನೀಯು ವದು ಆವಶ್ಯಕವಾಗಿದೆ ಇದರಿಂದ ಹಳ್ಳಿಗಳಲ್ಲಿನ ನಿರುದ್ಯೋಗವನ್ನು ದೂರ ಮಾಡಲಿಕ್ಕೆ ಸಾಕಾ ದಷ್ಟು ಸಹಾಯವು ದೊರೆಯುವದು.

ಹಳ್ಳಿಗಳಲ್ಲಿ ಖರ್ಚಿನ ಫೇರಗಳಿಗಾಗಿ ಕೆಲವು ಹಣವನ್ನು ಸರಕಾರವು ವಿಂಗಡಿಸಿ ಇಡ ಬೇಕು. ಇಷ್ಟರ ತನಕ ಅಖಿಲ ಭಾರತ ಚರಕ ಸಂಘೆವು ಪೇಟೆಪಟ್ಟಣಗಳಲ್ಲಿ ಖರ್ಚಿನ ಪ್ರಚಾರ ಕ್ಕಾಗಿ ಸೇವೆಡಾ ಒ ರೆಂತೆ ಮತ್ತು ಹಳ್ಳಿಪಳ್ಳಿಗ ಳಲ್ಲಿ ಖರ್ಚಿನ ಪ್ರಚಾರಕ್ಕಾಗಿ ಸೇವಕಾ ಳಿರಂತೆ ಕವಿತನು ಕೊಡುತ್ತಿತ್ತು. ಆದರೆ ಧನಾಭಾವ ದಿಂದ ಇದನ್ನು ಈಗ ನಿಲ್ಲಿಸಿದೆ. ಇದರ ವರಿ ಣಾಮದಿಂದ ಹಳ್ಳಿಗಳಲ್ಲಿ ಖರ್ಚಿನ ಪ್ರಚಾರವು ಬಹಳ ಕಡಿಮೆಯಾಗಿದೆ.

ಖಾದಿ ಪ್ರಚಾರವನ್ನು ಬೆಳೆಸುವ ಮೂರ ನೆ ಉಪಾಯವೆಂದರೆ ಖರ್ಚಿನ ಉತ್ಪತ್ತಿಯ ಬೇರೆ ಬೇರೆ ಉಪಕರಣಗಳನ್ನು ಭಿನ್ನಭಿನ್ನ ಸ್ಥಾನಗ ಳಲ್ಲಿ ಹಂಚುವದಾಗಿದೆ. ಒಳ್ಳೆ ರೀತಿಯ ಚರ ಕಗಳ ಪ್ರಚಾರವಾಗಬೇಕು. ಅಖಿಲಭಾರತ ಚರಕ ಸಂಘೆವು ಅನೇಕ ಪರಿಶೋಧನೆಗಳನ್ನು ನಡಿಸಿ ಅಂಥ ಚರಕಗಳನ್ನು ತಯ್ಯಾರು ಮಾಡಿ ದೆ. ಶಾಖ್ಯೆಯ ಕಳಲಿಗೆಗಳನ್ನು ಮಾಡಿದೆ. ಸರಕಾರವು ಇವುಗಳನ್ನು ಕೊಂಡುಕೊಂಡು ಅವಶ್ಯ ಕತಾನುಸಾರ ಮೌಲ್ಯ ತೆಗೆದುಕೊಂಡು ಅಥವಾ ತೆಗೆದುಕೊಳ್ಳದೇನೇ ಅವುಗಳನ್ನು ಹಂಚಬಹುದು.

ಮತ್ತೊಂದು ಉಪಾಯವಿದೆ. ಎಲ್ಲೆಲ್ಲಿ ಹತ್ತಿ ಬೆಳೆಯುವದೋ, ಅಲ್ಲೆಲ್ಲಿಂದ ಸರಕಾರವು ವರ್ಷಾವಧಿ ಬೇಕಾಗುವಷ್ಟು ಹತ್ತಿಯನ್ನು ಕೊಂಡುಕೊಳ್ಳಲಿ. ಬೆಳೆಕಾವಿನ ಸಮಯ ಹತ್ತಿಯನ್ನು ಕೊಂಡುಕೊಳ್ಳಲಿಕ್ಕೆ ಚರಕಾಸಂಘೆ ದ ಹತ್ತಿರ ಹಣದ ಅಭಾವವಿರುತ್ತದೆ. ಮತ್ತು ಅನಂತರ ಹತ್ತಿಗೆ ಕೃಮ ಕೊಟ್ಟು ಕೊಂಡುಕೊಳ್ಳು ವದು ಇರಲಿಕ್ಕೆ ಸಾಧ್ಯವಾಗುತ್ತಿತ್ತು. ಪ್ರಾಂತೀ ಯ ಸರಕಾರಗಳು ಈವಿನ ಸಮಯ ಹತ್ತಿ ಕೊಂಡು ಬೇರೆ ಬೇರೆ ಸರಕಾರಿ ಇಲಾಖೆಗಳಿಗೆ ಅವಶ್ಯವುಳ್ಳವರಿಗೆ ಹಂಚಿದರೆ ಚರಕ ಸಂಘೆದ ಈ ವ್ಯವಸಾಯದಿಂದ ದೂರವಾಗುತ್ತದೆ.

ಕುಂದಕವನ್ನುಂಟುಮಾಡುವ ಮನೋವ್ಯಾಕುಲಗಳನ್ನು



ಭಾರತೀಯ ಚಾ ಪಾನಮಾಡಿ ತೊರೆಯಿರಿ

"ಚಾ ಪಾನವು ಮಿತಿಮೀರಿದ ಆಯಾಸವನ್ನುಂಟುಮಾಡುವ ಪಂಚ ಕಾರಣಗಳನ್ನು ಹೋಗಲಾಡಿಸುವುದು" ಎಂದು ಒಂದು ಹೇಳಿಕೆ ಇದೆ. ಇದು ಒಂದು ಜುಂಬದ ಹೇಳಿಕೆಯಲ್ಲ. ಬಹಳ ಸಹಜವಾದುದು. ಎಷ್ಟಾ ಚಾ ಪಾನಕರುಗಳ ಅನುಭವ.

ಸೌಂದರ್ಯವಾದ ಮತ್ತು ಉತ್ಕೃಷ್ಟವಾದ ವಸ್ತುವನ್ನು ನೋಡಿದೊಡನೆ ಉಂಟಾಗುವ ಬ್ರಹ್ಮಾನಂದವನ್ನು ಮೊಟ್ಟಮೊದಲು ಚಾ ರುಚಿಸಿದವರಿಗೆ ಭಾರತೀಯ ಚಾ ಉಂಟುಮಾಡುವುದು. "ಸಹಸ್ರ ಗುಣಗೊಳಗೂಡಿರುವ" ಈ ಪಾನವಿಲ್ಲದೆ ಜೀವಿಸುವುದು ಬಹು ಬೇಜಾರು.

ಚಾ ತಯಾರಿಸುವ ವಿಧಾನ

ನಿರ್ಮಲವಾದ ನೀರನ್ನು ಕಾಸಿ ಕುತಿಯಾದ ಒಂದು ಪಾತ್ರೆಯನ್ನು ಬೆಚ್ಚಗೆ ಮಾಡಿ ಅದರಲ್ಲಿ ತಲಾ ಒಂದು ಚಮಚ ಕೊಪರಗೊಂದು ಚಿಮುಟ ಉತ್ಕೃಷ್ಟವಾದ ಭಾರತೀಯ ಚಾ ಸೊಪ್ಪನ್ನು ಹಾಕಿ ನೀರು ಬಿನ್ನಾಗಿ ಕುದಿದ ಮೇಲೆ ಅದರ ಮೇಲೆ ಸುರಿಯಿರಿ. ನಮ್ಮ ಸಿಹಿ ಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ ಹಾಲು ಸಕ್ಕರೆ ಬೆರೆಸಿ ಸೇವಿಸಿರಿ.

ಹಿಂದೂದೇಶದ ಆನಂದ, ಹೆಮ್ಮೆ–ಭಾರತೀಯ ಚಾ

I. K. 43

ಶಾಲಿವಾಹನ ಶಕ ೧೮೫೭ನೆಯ ಧಾತು ಸಂವತ್ಸರದ ಆಶ್ವೀಜ ಬ। ೪ ಶನಿವಾರದಿಂದ, ಆಶ್ವೀಜ ಬ। ೧೦ ಶುಕ್ರವಾರದ ವರೆಗಿನ ಪಂಚಾಂಗ.(೧೯೩೫ನೇಯ ತುಲಾ ಪೊಂತೆಲ್)

ತಾರೀಖು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯೋದಯ	ವಿಶೇಷ
23	ಶನಿ	೪	೩೮	ರೋಹಿಣಿ	೭೯	೬	೨೨
24	ರವಿ	೫	೨೮	ಮೃಗಶಿರ	೨೫	೬	
25	ಸೋ	೬	೨೩	ಆರ್ದ್ರೆ	೨೨	೬	
26	ಕುಜ	೭	೧೭	ಪುನರ್ವಸು	೧೭	೧೦	
27	ಬುಧ	೮	೧೩	ಪುಷ್ಯ	೧೫	೧೦	
28	ಗುರು	೯	೮೩	ಆಶ್ಲೇಷ	೧೩	೧೩	
29	ಶುಕ್ರ	೧೦	೬	ಮಘೆ	೦೨	೧೩	

ಜಲಾಂತರ್ಗಾಮಿ ನಾವೆಗಳ ಪ್ರಾಮುಖ್ಯ

ಜಲನೀ ರಣರಂಗವಾದಲ್ಲಿ ಇವುಗಳ ಪ್ರಾಮುಖ್ಯತೆಗೆ ದ್ವಿತೀಯವಿಲ್ಲ

ಸಮುದ್ರ ಕಳ್ಳರಿಗೆ ಸುಲಿಗೆ ಮಾಡಲು ಸುಲಭ ಸಾಧನಗಳಾಗಿವೆ

ಇಂತಹ ಸಮುದ್ರ ಕಳ್ಳರನ್ನು ಹಿಡಿಯಲು ಸಾಧ್ಯವಿಲ್ಲವೇಕೆ? ಮೆಡಿಟರೇನಿಯನ್ ಸಾಗರದಲ್ಲಿ ಹಲವಾರು ಜರ್ಮನುಗಳು ಸೂರೆಯಾದವು ಆಟ್ಲಾಂಟಿಕ್ ಮಹಾ ಸಾಗರದಲ್ಲಿ ಜಲಗರ್ಭವನ್ನು ಹೊಕ್ಕ ಹಡಗುಗಳಿಗೆ ಲೆಕ್ಕವಿಲ್ಲ. ಇವುಗಳೆಲ್ಲದರ ಬಳಗುಟ್ಟೇನು? ಈ ಜಲಾಂತರ್ಗಾಮಿ ನಾವೆಗಳ ಹುಟ್ಟಿಲ್ಲಿ?

ಮೆಡಿಟರೇನಿಯನ್ ಸಾಗರದಲ್ಲಿ ದೊಡ್ಡ ದೊಡ್ಡ ಹಡಗುಗಳನ್ನು ಮುಳುಗಿಸಿ, ಅವುಗಳನ್ನು ಸೂರೆಮಾಡುವ ಈ ಜಲಾಂತರ್ಗಾಮಿ ನಾವೆಗಳ ಕಳ್ಳರ ಕೂಟದ ಅಸಮಸಾಹಸ ವಿಂದು ಪ್ರತಿಯೊಂದು ವರ್ತಮಾನ ಪತ್ರದ ಮನೆ ಮಾತಾಗಿದೆ. ಸರಕಾರಗಳನೇಕ ಈ ಕಳ್ಳರನ್ನು ಅರಸುತ್ತಿವೆ; ಆದರೆ ಇಂದಿನ ತನಕ ಅದು ಸೀಂನ ಮೇಲೆ ಆಚರಿಸಿದ ಹೋದುವಾಗಿದೆ.

ಈ ಕಳ್ಳರ ಅಸಮಸಾಹಸವೊಂದು ಆಶ್ಚರ್ಯವಲ್ಲ. ಯಾಕೆಂದರೆ ಈ ಜಲಾಂತರ್ಗಾಮಿ ನಾವೆಗಳನ್ನು ಹೊಳ್ಳು ಪ್ರತಿಯೊಬ್ಬನ ಜೀವವು ಸಾಹಸಗಳ ನಡುವೆ ಜೋಲಿ ಹೊಡೆಯುತ್ತಿದೆ; ಆ ಜೀವವು ದರ್ಜಿಯ ಕೈಗಳಲ್ಲಿನ ಹರಿತಕತ್ತರಿಯ ನಡುವೆ ಸಿಕ್ಕಿದ ವಸ್ತ್ರದ ತುಂಡಿನಂತಿದೆ.

ಕಳೆದೆಲ್ಲಾ ರಿತಮಾನಗಳಲ್ಲಿ ಯಾವ ರೀತಿಯಲ್ಲಿ ವಿಜ್ಞಾನವು ಅಂತರ್ಗತವಾದ ವಿಶಾಲ ವಾಯು ಸಾಮ್ರಾಜ್ಯದ ಮೇಲೆ ತನ್ನ ಅಧಿಕಾರವನ್ನು ತೋರಲು ಪದಾರ್ಪಣ ಮಾಡಿತ್ತೋ, ಅಂದಿನಿಂದಲೇ ಅದು ಜಲಗರ್ಭದ ಮೇಲೂ ಒಳಗೂ ತನ್ನ ಸಾಹಸಮಯ ಕಪ್ಪಸಾಧ್ಯ ಅಧಿಕಾರವನ್ನು ತೋರಲು ಹವಣಿಸಿಯದೆ; ಎಷ್ಟೋ ಜೀವಿಗಳನ್ನು ಒಲಿಯುತ್ತಿದೆ.

ಈ ಜಲಾಂತರ್ಗಾಮಿ ನಾವೆಗಳ ಇತಿಹಾಸದ ಹುಟ್ಟು ನಮ್ಮನ್ನು ಸಾಧಾರಣ ನಾಲ್ಕು ಶತಮಾನಗಳ ಹಿಂದೊಯ್ಯುತ್ತದೆ. ಆದರೆ ಆಗ ಈ ನಾವೆಗಳು ಸಾಧಿಸುತ್ತಿರುವ ಕಾರ್ಯಗಳು ಬರೀ ಮನುಷ್ಯನಿಂದ ಸಾಧ್ಯವಾಗುತ್ತಿದ್ದವು ವಿಜ್ಞಾನವು ಆಗ ಕೈ ಹಾಕಿರಲಿಲ್ಲ. ನೀರಲ್ಲಿ ಮುಳುಗುವುದರಲ್ಲಿ ನಿಷ್ಣಾತರಾಗಿದ್ದ ಹಲವು ಮಾನೀಯ ಜಲಾಂತರ್ಗಾಮಿ ನಾವೆಗಳು ತಮ್ಮ ಶ್ವಾಸಕೋಶಗಳ ಶಕ್ತಿಯನ್ನು ಸುಲಕ್ಷಿಸಿ, ಇಂದು ಈ ವೈಜ್ಞಾನಿಕ ಯುಗದಲ್ಲಿ ವೈಜ್ಞಾನಿಕ ಜಲಾಂತರ್ಗಾಮಿ ನಾವೆಗಳು ಮಾಡುವ ಕಾರ್ಯವನ್ನು ಸಾಧಿಸುತ್ತಿದ್ದವು. ಇದಕ್ಕೆ ನಿದರ್ಶನಗಳೆಗಳಿಷ್ಟಿಲ್ಲ?

ಸಾಧಾರಣ ನಾಲ್ಕು ಶತಮಾನಗಳ ಹಿಂದೆ ಗ್ರೀಕರು ಪರ್ಷಿಯನರೊಡನೆ ಹೋರಾಡುತ್ತಿದ್ದರು. ಆ ಸಮಯದಲ್ಲಿ ಪರ್ಷಿಯನರಲ್ಲಿ ಸ್ಕಿಲ್ಲಿಯಾಸ್ ಎಂಬೊಬ್ಬ ಮಹಾತಯನು ಈ ಜಲಾಂತರ್ಗಾಮಿ ವಿದ್ಯೆಯಲ್ಲಿ ನಿಷ್ಣಾತನಿದ್ದನು. ಹಲವು ಕಾರಣಗಳಿಂದ ಅವನು ಪರ್ಷಿಯನರನ್ನುಬಿಟ್ಟು ಗ್ರೀಕರ ಕಡೆ ಸೇರಿದನು. ಮತ್ತು ತನ್ನ ಜೀವನವನ್ನು ಕೂಡ ಲೆಕ್ಕಿಸಿದೆ ಈ ಭಯಂಕರ ಕಾರ್ಯಕ್ಕಿಳಿದನು.

ಅತನಿಗೊಬ್ಬ ಮಗಳಿದ್ದಳು. ಆಕೆಯು ಪರ್ಷಿಯನರು ಕೈದಿಸ್ ಎಂದು ಅತನು ಆಕೆಗೆ ಜಲಗರ್ಭದಲ್ಲೇ ಹಲವು ಗಂಟೆಗಳ ಕಾಲ ಜೀವಿಸಲ್ಲು ಉಪಾಯವನ್ನು—ಸಾಹಸವನ್ನು ಕಲ್ಪಿಸಿದ್ದನು.—ಒಂದು ರಾತ್ರಿ ಸ್ಕಿಲ್ಲಿಯಾಸನು ಆಕೆಯಿಂದಿಗೆ ಸಮುದ್ರದಲ್ಲೀಜ್ಞ, ಪರ್ಷಿಯನರು ಯುದ್ಧನಾವೆಗಳಲ್ಲಿಗೆ ಸಾಗಿದನು. ಪರ್ಷಿಯನರು (ಎಂಕರ್) Anchor ಹಾಕಿ, ಸ್ವಸ್ಥವಾಗಿ ಕುಳಿತಿದ್ದರು. ಸ್ಕಿಲ್ಲಿಯಾಸನೂ ಕೈದಿಸ್ ಅದರ ಹಗ್ಗಗಳನ್ನೆಲ್ಲಾ ಕುಂದರಿಸಿದರು. ಜೀವಕ್ಕೆ ಕೂಡ ಅಪಾಯವೊದಗಬಹುದಾದ ಸಂದರ್ಭದಲ್ಲೂ ತಮ್ಮ ಸಾಹಸದಿಂದ ವಿಜಯಿಯಾದರು. ಮರುದಿನ ಬೆಳಿಗ್ಗೆ ಪರ್ಷಿಯನರು ಎದ್ದುನೋಡುವಾಗ ಅವರ ಹಡಗುಗಳು ಗಾಳಿಯ ರಭಸಕ್ಕೆ ದಡ ಸೇರಿ, ಕಲ್ಲಿಗೆ ಬಡೆದು, ಪುಡಿಯಾಗಲಾರಂಭಿಸಿದ್ದವು!!!

ಇದು ಜಲಾಂತರ್ಗಾಮಿನಾವೆಯ ಪ್ರಥಮ ಸಾಹಸ!

1620ನೇ ಇಸವಿಯಲ್ಲಿ ರಚ್ಚಿನೊಬ್ಬನು ಒಂದು ತರಧ ಜಲಾಂತರ್ಗಾಮಿ ನಾವೆಯನ್ನು ರಚಿಸಿದ, ಅದು ಥೇಮ್ಸ ನದಿಯಲ್ಲಿ ಹನ್ನೆರಡು ಅಡಿಗಳ ಆಳದಲ್ಲಿ ಸಾಗುತ್ತಿತ್ತು. ಆಗಿನ ಅಂಗ್ಲಾಳ್ವಿದ ಅರಸನಾಗಿದ್ದ ಮೊದಲನೆಯ ಜೇಮ್ಸನನು ಅದರಲ್ಲೊಮ್ಮೆ ಸವಾರಿ ಮಾಡಿದ್ದ.

ಸ್ಪಥಮದ ಜಲಾಂತರ್ಗಾಮಿ ನಾವೆಯು ಮೊದಲು ಬ್ರಿಟನ್ನರಿದುರೇ ಉಪಯೋಗಿಸಲ್ಪಟ್ಟಿತ್ತು. ಜಾರ್ಜ್ III ಅವನ ಕಾಲದಲ್ಲಿ ನಡೆದ ಅಮೇರಿಕೆಯ ಸ್ವಾತಂತ್ರ್ಯ ಸಮರಕ್ಕಾಗಿ ಇದನ್ನು ಅಮೇರಿಕೆಯವರು ತಯಾರಿಸಿದ್ದರು.

ಅದನ್ನು ತಯಾರಿಸಿದವನು ಬುಶ್‌ನೆಲ್ ಎಂಬೊಬ್ಬನು 1674ನೇ ಇಸವಿಯಲ್ಲಿ!

ಆಗ ಅದರ ರೂಪು ಒಂದು ನೊಟ್ಟೆಯಂತಿತ್ತು ಅದರಲ್ಲಿ ಒಬ್ಬನೇ ಕುಳ್ಳಿರಲಹುದಾಗಿತ್ತು.

ಆ ಸಾಹಸಿ ಬುಶ್‌ನೆಲ್ಲನು ನೀರಿನಡಿಯಂದಲೇ ಬ್ರಿಟಿಷರ ಹಡಗುಗಳೆದ್ದಲ್ಲಿ ಹೋಗಿ, ಗುಂಡು ಮದ್ದನ್ನು ಆ ಹಡಗಿಗೆ ಕಟ್ಟಿ ಬೆಂಕಿ ಕೊಟ್ಟು ಅತನ ಪ್ರಯತ್ನವು ನಿಷ್ಫಲವಾಯಿತು. ಯಾಕೆಂದರೆ ಆ ಗುಂಡು ಮದ್ದು ಬೆಂಕಿ ತಾಗುವುದರ ವೆಡಲೇ ಒದ್ದೆಯಾಗಿ ಹೋಗಿತ್ತು!!!

ನಂತರ 1800ನೇ ಇಸವಿಯಲ್ಲಿ ಅಮೇರಿಕೆಯ ಯುದ್ಧದ ಸಮಯದಲ್ಲಿ ಡೇವಿಡ್ ಎಂಬೊಂದು ಜಲಾಂತರ್ಗಾಮಿ ಹಡಗಿನ ನಿರ್ಮಾಣವಾಯಿತು. ಅದು ಸಾಧಾರಣ 60 ಅಡಿ ಉದ್ದವಿತ್ತು. ಅದನ್ನು ಒಯ್ಯಕ್ಕೆ ಯಂತ್ರವನ್ನೇ ನಡೆಸಲು ಎಂಟು ಜನ ಜೀವದ ಹಂಗಿಲ್ಲದವರು ಬೇಕಿದ್ದರು. ಅವರು ತಮ್ಮ ಈ ಹೊಸ ಶೋಧದಿಂದ ವೈರಿಗಳ ಹುಟ್ಟನ್ನೆ ಅಡಗಿಸಿಬಿಡುವ ಧೈರ್ಯದಲ್ಲಿದ್ದರು.

ಆದರೆ . . . . . ?

ಆ ನಾವೆಗೆ ವಾಯುವಿನ ಸಂಗ್ರಹವಿರಲಿಲ್ಲ. ಆದಕ್ಕಾಗಿಯೇ ಆ ನಾವೆಗೆ 'ಚಲಿಸುವ ಭಟ್ಟಿ' ಎಂಬ ಇನ್ನೊಂದು ಹೆಸರಿದ್ದಿತು.

ಆ 'ಡೇವಿಡ್' ನಾವೆಯು ಇದು ಕಡವೆ ರಣರಂಗಕ್ಕಿಳಿಯಕ್ಕು. ಆದರೆ ಇದು ಕಡವೆಯೂ ವಾಯುವಿನೆ ಅಭಾವದಿಂದ ಸೋತು ಹೋಯಿತು. ಐದು ತಡವೆಯೆಂದರೆ—ಒಂದೊಂದು ತಡವೆಗೆ ಎಂಟು ಜನರ ಪ್ರಕಾರ ನಾಲ್ವತ್ತು ಜನರಾದರು. ಈ ನಾಲ್ವತ್ತು ಜನರಲ್ಲಿ ಬರೀ ಐದು ಜನರು ಮಾತ್ರ ಸುರಕ್ಷಿತವಾಗಿ ದಡಸೇರಿದ್ದರು. ಉಳಿದ ಮೂವತ್ತೈದು ಜನರೂ ಸೇದಲು ಗಾಳಿಯಿಲ್ಲದೆ ಮೃತ್ಯುವಿನ ವಶಾಲ ವಾತಾವರಣದಲ್ಲಿ ಲೀನವಾದರು.

ಅರನೇ ಸಲ ತಾ 'ಡೇವಿಡ್' ತನ್ನ ಕಾರ್ಯದಲ್ಲಿ ವಿಜಯಿಯಾಯಿತು. ಬಹಳ [illegible]



ದಿಂದ ಮುಂದೊತ್ತಿ, ಆಂಗಳ್ ಹೌಗೆಟೋನಿಕ್ ಎಂಬ ಹಡಗನ್ನು ಮುಳುಗಿಸಿತು. ಆದರೆ ಅದು ಕೊಂಡಿಗೆ ಡೇವಿಡೂ ಕಾಣೆಯಾಯಿತು.

ಜಲಗರ್ಭವನ್ನು ಹೊಗುವ ದರಲ್ಲಿ ನಿಷ್ಣಾತರಾಗಿದ್ದ ಹಲವರು ಮುಳುಗಿ ಹೋದ ಹೌಗೆ ಟೋನಿಕ್‌ನ ಏನ್ವೇಷಣೆಯಲ್ಲಿ ತೊಡಗಿದರು. ಅರಸುವಾಗ ಈ 'ಡೇವಿಡ್' ಎಂಬ ಜಲಾಂತರ್ಗಾಮಿ ನಾವೆಯೂ ದೊರಕಿತು. ಅದು ಭಯಂಕರ ರಭಸದಿಂದ ಮುಂದೊತ್ತಿ ಹಡಗಿಗೆ 'ಡೇಶ್' ಹೊಡೆದಾಗ ಹೌಸೆಟೋನಿಕ್‌ಗೆ ಒಂದು ತೂತಾಗಿತ್ತು. ಅದೇ ತೂತಿನಲ್ಲಿ ಸಿಕ್ಕಿತ್ತು ಡೇವಿಡ್ ಈ ರೀತಿಯಲ್ಲಿ ಡೇವಿಡ್ ತನ್ನ ಗರ್ಭದಲ್ಲಿ ಎಂಟು ಜನ ನಾವಿಕ ಸಿಬ್ಬಾಜ್ಞಿಕರನ್ನಿರಿಸಿಕೊಂಡು, ಜಲಗರ್ಭದಲ್ಲಿ ತನ್ನ ಲೀಲೆಯನ್ನು ಕೃತಕಾರ್ಯವಾಗಿ ಸಮಾಪ್ತಿಗೊಳಿಸಿತು.

ಡೇವಿಡ್‌ದ ಅಂತ್ಯವು ಹೇಗೂ ಆಗಲಿ. ಅದು ತನ್ನ ಕಾರ್ಯದಲ್ಲಿ ವಿಜಯಿಯಾಗಲಿ, ಯಾ ಸೋತು ಹೋಗಲಿ. ಅದು ಜಗತ್ತಿನ ತನ್ನಲ್ಲೊಂದು ಕುತ್ಹಲಕತೆಯನ್ನು ಆಕರ್ಷಣೆಯನ್ನು ಬೀರಿ, ಮಾಯವಾಗಿತ್ತು. ಅದರ ಆ ಕುತ್ಹಾಹಲಿಂದು ವಿಜ್ಞಾನಿಗಳೆದೆಯಲ್ಲಿ ನೆಲೆಸಿಂದಿದೆ. ಅದುವೇ ಅವರನ್ನು ಇನ್ನೂ ಅಪೂರ್ವ ಶೋಧಗಳೆಡೆ ಸಾಗಿಸುತ್ತಿದೆ.

ಇಂದಿನ ಜಲಾಂತರ್ಗಾಮಿ ನಾವೆಯ ರೀತಿಯ ನಾವೆಯನ್ನು ಮೊದಲಾಗಿ ತಯಾರಿಸಿದವನು ನ್ಯೂಜರ್ಸಿಯಲ್ಲಿನ ಪೇಟರ್‌ಸನ್ನಿನ ಜಾನ್ ಪಿ ಹಾಲ್ಲೆಂದನು, ಅದು ನೀರ ಮೇಲೆ ಪೆಟ್ರೋಲಿನ ಬಲದಿಂದಲೂ ಜಲಗರ್ಭದಲ್ಲಿ ವಿದ್ಯುಚ್ಛಕ್ತಿಯ ಬಲದಿಂದಲೂ ನಡೆಯುತ್ತಿತ್ತು. ಇದು 1890ನೇ ಇಸವಿಯಲ್ಲಿ. ದೂರ ಕುಳಿತು ಈ ಜಲಾಂತರ್ಗಾಮಿ ನಾವೆಗಳ ನಿರ್ಮಾಣವನ್ನೂ ಅವುಗಳ ಶಕ್ತಿಯನ್ನೂ ಪರಿಶೀಲಿಸುತ್ತಿದ್ದ ಬ್ರಿಟಿಷ್ ನೌಕಾದಳದ ನಾಯಕನು 1901ರಲ್ಲಿ ಅಂತಹ ನಾವೆಗಳನ್ನು ಯುದ್ಧಗಳಲ್ಲಿ ಉಪಯೋಗಿಸಬಹುದೆಂದು ಕಂಡುಕೊಂಡು, ತಯಾರಿಸ ತೊಡಗಿದನು. ಈ ನಾವೆಗಳೆಲ್ಲಾ ಬಹಳ ಅವಾಯಕಾರವಾಗಿದ್ದವು. ಜೀವದಾಸೆಯುಳ್ಳವರೇ ಅದರಲ್ಲಿ ಕುಳ್ಳಿರುವ ಸಾಹಸಕ್ಕೆ ಕೈಹಾಕಬೇಕಾಗಿದ್ದಿತು.

ಅದರಲ್ಲಿ ಕುಳ್ಳಿರುವ ಸಾಹಸ ಸೈನ್ಯರಿಗೆ ಒದಗಲು, ಅದರಲ್ಲಿ ಕುಳ್ಳಿರಬೇಕಾದವರನ್ನು ಪೆಟ್ರೋಲಿನ ಹೊಗೆಯಿಂದ ಅಮಲೇರುವಂತೆ ಮಾಡುತ್ತಿದ್ದರು.

ಹಿಂದು ರಾತ್ರೆ ಪೋರ್ಟ್ಸ್‌ಮೌತ್‌ನಲ್ಲಿ ಹಲವು ಜನರು ಮದ್ಯವನ್ನು ಸೇವಿಸಿದಂತೆ ಜೋಲಿ ಹೊಡೆಯುತ್ತಾ ಸಮುದ್ರ ತೀರದಿಂದ ಬರುವುದನ್ನು ಕಂಡ ಪೋಲೀಸಿನವನೊಬ್ಬನು ಅವರನ್ನು ಜೈಲಿನಲ್ಲಿ ಕೂಡ ಹಾಕಿದ್ದನಂತೆ ಮದ್ಯ ಕುಡಿದು, ಗಲಭೆಯೆಬ್ಬಿಸಿದ ಕಾರಣ

ಮಹಾ ಯುದ್ಧದ ಸಮಯದಲ್ಲಿ ಈ ನಾವೆಗಳಿಂದ ಬಹಳ ದೊಡ್ಡ ಯುದ್ಧದ ಹಡಗುಗಳನ್ನು ಕೂಡ ಮುಳುಗಿಸಬಹುದೆಂಬ ಧೋರಣೆಯು ಯಾರ ತಲೆಯಲ್ಲೂ ಹೊಳೆಯಿಲ್ಲ.

ಮಹಾ ಯುದ್ಧದಲ್ಲಿ ಅದರ ವ್ಯತ್ಯಕ್ಷವು ಭವವಾಯಿತು!

ಮಹಾಯುದ್ಧವಾದ ಆರು ವಾರಗಳ ನಂತರ ಜರ್ಮನರ ಜಲಾಂತರ್ಗಾಮಿ ನಾವೆಗಳಿಂದ ಬ್ರಿಟಿಷರ ಅಬೂಕರ್, ಕ್ರೀಸ್, ಹೋಗ್ ಎಂಬ ಮೂರು ಯುದ್ಧ ನಾವೆಗಳು ಜಲಶಾಯಿಯಾದವು. ಮೊದಲೊಂದು ಹಡಗು ಒಡಿದು ಮುಳುಗಲಾರಂಭಿಸಿತು. ಈ ಜಲಾಂತರ್ಗಾಮಿ ನಾವೆಗಳ ಭಯಂಕರ ಕೃತ್ಯದ ಕನಸು ಸಹ ಇಲ್ಲದ ಉಳಿದೆರಡು ಹಡಗುಗಳ ನಾವಿಕರು ಒಡಿದ ಪಡಗಿನಲ್ಲಿನ ಸೈನಿಕರನ್ನು ನಾರು ಮಾಡುವುದರಲ್ಲಿ ನಿಮಗ್ನರಾದರು. ಆಗಲೇ ಅವೆರಡೂ ಹಡಗುಗಳು ಜಲಗರ್ಭವನ್ನು ಸೇರಿದವು.

ಈ ವರ್ತಮಾನವು ಇಂಗ್ಲಾಳ್ವಕ್ಕೆ ಒಂದು ಸಿಡಿಲಿನಂತೆರಗಿತು ಯಾಕೆಂದರೆ 1864ರಲ್ಲಿ ಹೌಸೆಟೋನಿಕ್ ಮುಳುಗಿದ ನಂತರ ಈ ನಾವೆಗಳ ಭೀಕರತೆಯು ಯಾರ ಕಿವಿಗೂ ಕಚ್ಚೆಗೂ ಬಿದ್ದಿರಲಿಲ್ಲ.

ಅದರ ನಂತರ ಹಲವು ಕಾಲ ಈ ಜಲಾಂತರ್ಗಾಮಿ ನಾವೆಗಳ ಭಯವು ಪ್ರತಿಯೊಂದು ಹಡಗಿಗೂ ಇದ್ದಿತು.

ಇದರಿಂದ ಇದೀ ಬ್ರಿಟಿಷ್ ನೌಕಾದಳದಲ್ಲಿ ಒಂದು ಅಸಾಮಾನ್ಯ ಮಾರ್ಪಾಟುಂಟಾಯಿತು. ಅವರು ಸಹ ಈ ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಿದ್ದಾರೆ. ಅವು ಎಂತಹ ಹಡಗನ್ನಾದರೂ ಒಡಿದು, ಮುಳುಗಿಸುವಷ್ಟು ಶಕ್ತಿಯುತಗಳಾಗಿವೆ. ಅಲ್ಲದೆ ಮೇಲಿಹೇಳಿದ ರೀತಿಯಲ್ಲಿ ಜಲಾಂತರ್ಗಾಮಿ ನಾವೆಗಳಿಂದ ಮುಳುಗಿಸಲ್ಪಟ್ಟ ಹಡಗಿನ ಜನರನ್ನುದ್ಧರಿಸಲು ಬೇರೆ ಹಡಗುಗಳ ಅಗತ್ಯವಿಲ್ಲದಂತೆ ಮಾಡಿದ್ದಾರೆ.

ನಂತರ ಬಂದೀತು ಈ ಜಲಾಂತರ್ಗಾಮಿ ನಾವೆಗಳ ಭೀಕರ ಸಾಹಸದ ವರಭಾವಭಿ!

ಕಾನ್ಸ್ ಟಿಂಟಿನೋಪಲಿಗೂ ಡಾರ್ಡಿನೆಲ್ಲಿಗೂ ನಡುವೆ ಮರ್ಮೋರಾ ಎಂಬೊಂದು ಸಮುದ್ರವಿದೆ. ಮೆಡಿಟರೇನಿಯನ್ ಸಾಗರದಿಂದ ಮರ್ಮೋರಾ ಸಾಗರವನ್ನು ಹಡಗುಗಳ ಮೂಲಕ ಸೇರಲು ಬಹಳ ಅಗಲ ಕಿರಿದಾದ ಒಂದೇ ಒಂದು ಹಾದಿಯಿದೆ. 1915ರಲ್ಲಾದ ಯುದ್ಧದಲ್ಲಿ ಡಾರ್ಡಿನೆಲ್ಸ್‌ನಲ್ಲಿದ್ದ ಟರ್ಕಿಯ ಸೈನ್ಯಗಳಿಗೆ ಬೇಕಾದ ಸಾಮಗ್ರಿಗಳು ಈ ಹಾದಿಯಿಂದಲೇ ಹೋಗುತ್ತಿದ್ದವು. ಇದನ್ನು ತಡೆವರಿಸಲು ಈ ಜಲಾಂತರ್ಗಾಮಿ ನೌಕೆಗಳು ಬಹಳ ಸಾಹಸಪಟ್ಟವು.

ಮೂಲ ಸ್ವಭಾವ

ಅತ್ಯಾ—ನಾಯಿ—ಹುರಿ—ಕತ್ತೆ—ಧನ
ಯಿಗಳಲ್ಲಿ ಒಂದು ಕಾಲದಲ್ಲಿ ಕಾಣುವುಗಳಾಗಿತ್ತು
ಗೆ ಸಂಶಯವಾಗಿದೆ. ಆದರೂ ಅದಿನ ಸ್ವಭಾವದಲ್ಲಿ
ಇವುಗಳಿಗೆ ಇಂದಿನಷ್ಟೂ ಇದೆ.

ನ ಸ್ವಭಾವವನ್ನೆಲ್ಲ ಹೇಗೆ ಅಂಟಿಸುಯಿಸು? ಏಕೆ ಅಂದಿದೆ?
ಈ ಪ್ರಾಣಿಗಳಂತೆಯೆ ಮನುಷ್ಯನೂ ತನ್ನ ಮೂಲ
ಸ್ವಭಾವ ಬಿಡಲಾನೆ?

ಕತೆಯ ಬಳಿ ತನ್ನ ದೇಹವನ್ನು ಮುದು
ಡು ಸುಖವಾಗಿ ನಿದ್ದೆಹೋಗುತ್ತಿದ್ದ
ನಾಯಿಯಿಂದ ಹೊರಜಗಲಿಯ ಮೇಲೆ ನಿದ್ದೆ
ಗಲು ಸಿದ್ಧವಾಗುತ್ತಿದ್ದ ಒಂದು ನಾಯಿ
ನನ್ನು ಕಂಡು ಇಂಚಿನ ನೆಲದ ಮೇಲೆ ಮಲಗ
ೀಕಾದರೂ, ಹಲವು ಸಲ ಸುತ್ತು ಸುತ್ತು
ರುಗಿ ಅಸಹಾಸ್ಯಕರವಾಗಿ ನಟಿಸಿ ಈ ನಾಯಿ
ಏಕೆ ಮಲಗುತ್ತಿರಬೇಕೋ ಯಾರು ಬಲ್ಲರು'
ಎಂದು, ಅದನ್ನು ದೂರ ಅದರ ಈ ವಿಕಟ ಅಭಿ
ರುಯಕ್ಕೆ ಬೇಸರಹೊಂದಿದ ತನ್ನ ತಲೆಮನ್ನು
ಣಲ್ಮಗೆಂದ ತಬ್ಬಿಕೊಂಡಿತು

ನಾಯಿಗೆ ಸೂಕ್ಷ್ಮ ಶ್ರವಣಶಕ್ತಿಯಿದೆ
ಲ್ಲ? ಈ ಗೊಣಗನ್ನು ಆ ಸೊಣಗನು
ೀಳಿತು ತಾನೂ ಪವಡಿಸುತ್ತ ಏಮ
ುಚ್ಚು ನಾನೇನು ಮಾಡಬಹುದು?' ಹಾಗೆ
ಎರಡು ಸುತ್ತು ತಿರುಗದೆ ಮಲಗುವೆನಾದರೆ
ನ್ನೆ ಮನಸ್ಸಿಗೆ ಏನೇನೋ ಎನಿಸುವುದಲ್ಲ!
ನಾನು ಬೇಕೆಂದೇಹಾಗೆ ಅಭಿನಯಿಸುತ್ತೇನೆಯೆ?
ೈಶವದಲ್ಲಿ ನಾವು ಮರಿಗಳೆಲ್ಲ ಹೇಗೆ ಸುತ್ತು
ರುಗಿದ ಒಳಕವೇ ಮಲಗ ತ್ತಿರುವಾಗ
ನಾಯಿ 'ಹಿರಿಯರ ಚಾಳಿ ನಿಜ ಎಂದು
ನಮ್ಮ ಒಣಹುಲ್ಲು ಹಾಸುಗೆಯ ಕಡೆಗೆ ನಗು
ೀರುತ್ತ ಹೇಳುತ್ತಿದ್ದಳು 'ಹಾಗೇಕೆ ಹೇಳು
ಯಮ್ಮ?'' ಎಂದು ನಾನು ಕೇಳಿದರೆ,
'ಹಾಸನನ್ನು ಸರಿಗೊಳಿಸುವೆ ಪವಡಿಸುವ ಅಭ್ಯಾ
ವು ನಮ ಗೆಲ್ಲ ಹಿಂದಿಂದಲಾ ಕುಲದೆರಂದೆ
ಯಾಗಿ ಬಂದಿದೆ ಆಗ ನಾವೆಲ್ಲ ಕಾಡಾಡಿಗ
ಾಗಿದ್ದವು ' ಎಂದಿದ್ದಳು ಈ ವಿಕ್ಕಿಗೇನು
ುಹಾ ತಿಳುವೆಳೆಯುದೆ? ನಾವು ಅದರಂತೆ
ಂದು ತುತ್ತು ಅನ್ನಕ್ಕಾಗಿ ಯಾರ್ಯಾರ ಮನೆ
ಯನ್ನು ಕಾಯುತ್ತ ಛಿದ್ದುಕೊಳ್ಳುತಿದ್ದವರ
ಂತಾನವೆ! ಈಗೇನೋ ನಾವು ಮನುಷ್ಯನ
ಸ್ತ ಬಂಧುಗಳು ಸಿಜ ಆಗ? ತೋಳಗ
ಂತೆ ಹಿಂಡುಗಟ್ಟಿ ಕಾಡಲ್ಲೆಲ್ಲ ಕೊಳ್ಳೆಗಾಗಿ
ಂಚಾರನಾಡುತ್ತ, ನಮ್ಮನ್ನು ಹಿಂಸೆಮಾಡಲು
ಕಟ್ಟೆಬರುತ್ತಿದ್ದ ಕಾಡುಮೃಗಗಳನ್ನು ನೆಮ್ಮ
ಂಖ್ಯಾಬಲದಿಂದಲೂ ಒಕ್ಕಟ್ಟಿನಿಂದಲೂ ವಿದ
ಸಿ ದೂರವಿಸಿ, ಪರಸ್ಪರ ವಿಶ್ವಾಸದಿಂದ
ನೆಮ್ಮೊಳಗೆ ಕಟ್ಟುಪಾಡಿನಿಂದ ನಾವು ಜೀವಿಸು
ದ್ದೆವು ಎತ್ತರೆತ್ತರ ಬೆಳೆದ ಹುಲ್ಲುಗಾವಲಲ್ಲಿ,
ಕ್ಷಹೋಪಾಯವನ್ನು ಕಂಡುಕೊಂಡೇ ನಾವು
ನಿದ್ರಾವಾಗಿ ನಿದ್ದೆಮಾಡಬಹುದಾಗಿದ್ದ ಕಾರಣ,
ಹುಲ್ಲನ್ನು ಸುತ್ತಾಡಿ ತುಳಿದು ಹಸನಾದ
ಕಾಸುಗೆಮಾಡಿಕೊಂಡೇ ಮಲಗುತಿದ್ದೆವು
ನಾವು ನಿದ್ದೆಹೋಗುತ್ತಿರುವಾಗಲೂ ಒಕ್ಕಣ್ಣಾಗಿ
ುವೆವೆಂದು ಹೇಳುವುದಕ್ಕೆ ಇದೇ ಕಾರಣವಿ
ಬಹುದು, ಪಕ್ಷಿಯ ಶತ್ರುವು ಸವಿಸಕ್ಕೆ
ರುವ ಸಪ್ಪು ಕೇಳುತ್ತಲೆ, ಎಚ್ಚೆತ್ತು ಸ್ವರಕ್ಷಣೆ
ಮಾಡಿಕೊಳ್ಳಬೇಕಾಗಿದ್ದ ತಲ್ಲವೆ? ಈ ಚಟುವ
ಿಕೆಯ ಅಭ್ಯಾಸವು ಸ್ವಾಭಾವಿಕವಾಗಿ ನಮ್ಮ
ಿತ್ತದಲ್ಲೇ ಇರುವಾಗ, ಈಗ ಎಷ್ಟೋ ಕಲಾಂತ
ಗಳಿಂದಲೂ ನಮ್ಮಸ್ಸಮೆನೆಗಳಲ್ಲಿಟ್ಟುಕೊಂಡು
ಾಕುವ ಯಜಮಾನರಿರುವಾಗಲೂ ನಮ್ಮ
ುಲದ ಲಕ್ಷಣಾಧಿಮಾನವನ್ನು ನಾವು ಬಿಡ
ಬಹುದೆ?'' ಎಂದು ಬೆಕ್ಕಿಗೆ ವಿವರಿಸಿತು

ಬೆಕ್ಕು ತನ್ನ ಬೆಚ್ಚಗಿನ ತಾಣದಿಂದ
ಇದನ್ನೆಲ್ಲ ಕೇಳಿತು. ''ಅದೆಲ್ಲವು ನಿಜವಾಗಿರ
ಬಹುದು ಅದೊಂದು ನೀತು ಹಾಗಿರಲಿ.
ಆಹಾರವನ್ನಾದರೂ ಅನ್ನು ಬೇಗನೆ ಗಬಗಬನೆ
ನುಂಗುವುದೇಕೆ? ಏನು ಬಕಮಾರಿಯೆ? ಭೋ
ಜನದ ಮರ್ಯಾದೆಯನ್ನು ಇನ್ನೂ ಇಷ್ಟು ತಲತಾಂತ
ರಗಳಲ್ಲೂ ಕಲಿತುಕೊಳ್ಳಲಾರದಾಗಿತ್ತೇ? ಆಹಾ
ರವು ಗಂಟಲಲ್ಲಿ ಸಿಲ್ಕಿಕೊಂಡರೆ ತಾನೆ ಮತ್ತೆ
ಬುದ್ಧಿ ತಿಳಿದೀತಲ್ಲವೆ? ಅಡೆ ಅಲ್ಲದೆ,–ಆಹಾರ
ತಿನ್ನುತ್ತಿರುವಾಗ, ನಾನು ಆ ದಾನಿಯಾಗಿ ಸುಳಿ
ದೆನೆಂದರೆ, ಬಗುಳಾಡುತ್ತ ಕೆರಳುವುದೇಕೆ? ನನ
ಗಿಲ್ಲಿ ಆಹಾರವೇನೂ ಕಡಮೆಯಾಗಿದೆಯೆ?
ನಿನ್ನ ಗ್ರಾಸಕ್ಕಿಂತಲೂ ಎಷ್ಟೋ ಸವಿಯಾದ
ಉತ್ತಮ ಭಕ್ಷ್ಯಗಳು ನನಗಿಲ್ಲಿ ತುಂಬಾ ಸಿಗುವು
ದಲ್ಲವೆ? ನಿನ್ನ ತುತ್ತಿನ ಮೇಲೆ ನಾನು ಜೊಲ್ಲು
ಸುರಿಸುತ್ತಿರುವನೆಳೆ? ಇದೋ, ನಾನು ಹಾಲನ್ನು
ಶಾಂತವಾಗಿ ಸನ್ನಾಧಾನವಾಗಿ ಕುಡಿದು ಸಭ್ಯ
ನೆಂದು ತೋರಿಸಿಕೊಳ್ಳುವುದಿಲ್ಲವೆ? ಒಂದು
ಇಲ್ಲಿ ಒಂದು ಹಕ್ಕಿ ದೊರೆತರೆ, ನಾನು ಅವುಗ
ಳೊಡನೆ ಅಡಿ ಆಡಿ ದಣಿದ ಬಳಿಕವೇ ಅವನ್ನು
ಕೊಂದು ತುತ್ತು ತುತ್ತಾಗಿ ಧಾನವಾಗಿ
ಚೂರು ಚೂರಾಗಿಸಿ ಕಚ್ಚಿ ತಿಂದು ನನ್ನ
ಹೊಟ್ಟೆ ತಣ್ಣಿಯುವ ವರೆಗೂ ಆರೋಗ್ಯವು ಕೆಡ
ದ ತೆರದಿ ಹೇಗೆ ಜಾಣ್ಣಿ ತಿಂದೆನೆ ನೋಡ
ಬಂದರೆ? ನೋಡಿ ಕಲಿತುಕೊಳ್ಳಬಾರದೆ?
ಎಂದು ಕೇಳಿತು

ಈಗ ನಾಯಿಗೆ ಛಿಟ್ಟಿಗಿ ತನ್ನ ಕುಲ
ಮರ್ಯಾದೆಯನ್ನೆಲ್ಲ ಈ ಬಗೆಯಾಗಿ ವಿಕ್ಕಿ
ಸಿ ವಿಸ ತ್ತಿದೆಯೆ ದ ಬಗ್ಗೆದು ಬೆಕ್ಕಿನ ತ ಚ್ಚೀ
ಕಾರ ದೃಷ್ಟಿಯಿಂದ,– ಸಭ್ಯನಂತೆ ಎ ಯ್ಯಾಡಿ
ಯ ತೆ? ಯಾವ ಕಾಲದಲ್ಲಿ ತಾನೆ ಬೆಕ್ಕುಗಳು
ಹಿಂಡುಗೂಡಿದ್ದುವಂತೆ? ಕೇಳಿರುವಿಹುದೆ?
ಸಂಖ್ಯಾಬಲದಿಂದಲೇ ಬೆಕ್ಕುಗಳು ಬೇಟೆಯಾಡಿ
ಕೊಳ್ಳೆಯನ್ನು ಕೆಡವಿದ್ದುದು ಬೆ? ಹಾಗೆ ನಾಡಿ
ದ್ದಾದೆ,ಸ್ಪತಿಯೊಂದೂ ವಿಗಡದ ಬೆಕ್ಕೂ ಕೊಳ್ಳೆ
ಯಾವುದೊಂದು ಚೂರನ್ನು ಬೇಗನೆ ಕಚ್ಚಿ
ಕಡಿದು ನಂಗಲು ಪ ಕೃತಪಡುತಿದ್ದಿಕ
ಎಲ್ಲರ ಬಾಯಿಗೆ ಸಾಲದ ಕೊಳ್ಳೆಯನ್ನು ತನ
ಬಾಯಿಗೆ ಇಷ್ಟು ಸೇರಿಸಿಕೊಂಡರೇ ವುಣ್ಣುವೆಂ
ಸುತ್ತ ಹಿಂಡಿನ ನೈಗಳ್ಕೆ ತನ್ನ ಆಸೆ ತನಗೆ,
ನೂರಾರ ಸೇರಿರುವಲ್ಲಿ ಚೂರಿಗೆ ನಾಲ್ಕು
ಬಾಯಿಗಳು ಎರಗಿ ತಿಂದಾಗ, ಒಂದನ್ನೊಂದು
ಗುರ್ರೆಂದು, ಬಾಯಿಕ್ಕಿ, ಹೊಡಗುತಿದ್ದುವು
ನೋಸವೇ ಜೀವನವಾಗಿದ್ದ ಕಾಲವದು
ಅದೆಲ್ಲ ನಿನಗೆ ತಿಳಿಯುವುದೆಲ್ಲಿಂದ?'' ಎಂದಿತು

ಅದಕ್ಕೇನು ಮಾಡೋಣ? ನಾವೆಲ್ಲ
ಹಿಂಟಿಯಾಗಿರುವವರು ಒಬ್ಬನ ದಾನ ಅವ
ನಿಗೆ ಎಂದೇ ನಮ್ಮ ರೀತಿ ನಮ್ಮ ಜಾತಿ
ಯವರದೇ ಆದರೂ ಒಂದು ಕೂಟವೆಂದಲ್ಲ
ಸ್ವತಂತ್ರ್ಯದ ವೆರಸುಸುಖವನ್ನೆ ನಾವು ಪ್ರತಿ
ಯೊಬ್ಬರೂ ಅನುಭವಿಸುತ್ತಿರುವುದು ಬೆಸ
ಲಲ್ಲಿ ಹಾಯಾಗಿ ಕೆಲವರು ಒಂದೊಂದು ವೇಳೆ
ಹಿತ್ತಿಲ ಗೋಡೆಯ ಮೇಲೆ ಒಡ್ಡೋಲಗ ಕೂಡು
ತ್ತಿರಬಹುದು ಬೆಳದಿಂಗಳ ರಾತ್ರಿ ಹಿತ್ತಿಲ ನರ
ಗಳ ನಡುವೆ ಹತ್ತೆಂಟು ಮಂದಿ ಸೇರಿ ತರ್ಕ
ನಮ್ಮ ಜಂಬ ಹಾಡುತ್ತಿರಬಹುದು, ಅಪ್ಪೆ ನನ್ನು
ನೆರವಿ ನಿನ್ನಲ್ಲಿರುವ ಸ್ಪರ್ಧೆಯ ಕಚ್ಚಾಟ,
ಅವಸರದ ಗಡಿಬಿಡಿ, ದಂಗೆಖೋರರ ಅಕ್ಕರ
ಕೂಟಗಳಂತೆ ಹಿಂಡುಕೂಟ–ಇವಾವೂ ನಮಗೆ
ಒಲ್ಲವು '' ಎಂದು ಬೆಕ್ಕು ತನ್ನ ಮೈಚಾಚಿ
ಕೊಂಡು, ''ನಾವು ಎಂದಿನಂದಲೂ ಬೇಟೆಗಾ
ರರು. ಆದರೂ ಒಬ್ಬಂಟಿಗರು ನಮ್ಮ ಕೌಶ
ಲವೇ ನಮಗೆ ಬಲ ಹತ್ತು ಒಂದಾಗಿ ಹಗೆ
ಯನ್ನು ಕೊಂದಿಕ್ಕುವವರೇ ಅಲ್ಲ ಅದು
ಕಾರಣವೇ, ಬ್ರಾಹ್ಮಣ ಸ ಕರ್ಮಜೆಯಂತೆ.
ನಮ್ಮ ನಾಲಿನ ಭೋಜನ ನಮಗೊಬ್ಬೊಬ್ಬರಿಗೆ,
ನಿಧಾನದ ಊಟ, ದಬಕ್ಕನೆ ತುರುಕಿಕೊಳ್ಳುವ
ಅಭ್ಯಾಸದವರಲ್ಲ'' ಎಂದು ಕಣ್ಣು ಮುಚ್ಚಿ
ಕೊಂಡಿತು

ನಾಯಿಯಲ್ಲಿ ಇನ್ನಷ್ಟು ರೋಷವು
ಹೆಚ್ಚಿತು ಅದಿನ್ನು ಮಲಗಿಕೊಳ್ಳಲಾರದೆ,
ಅಲ್ಲಿಂದೆದ್ದು, ಬೆಕ್ಕಿನ ಗಾಳಿಯುಷ್ಟಿಕನಗೆ ಕಷ್ಟ
ವಾಗಲು, ಅಂಗಳಕ್ಕೆ ಇಳಿಯಿತು ಅಲೇ
ಕುರಿಮಂದೆಯನ್ನು ಕಾಯುವ ನಾಯಿ ಬೆಚ್ಚನೆ
ಕಲ್ಲು ಮೇಲೆ ಮಲಗಿದ್ದಿತು ಆ ನಾಯಿಯೂ
ಈ ನಾಯಿಯೂ ಬಹು ದಿನಗಳ ಗೆಳೆಯರು
ಗೆಳೆಯರಲ್ಲಿ ಒಬ್ಬನು ಮತ್ತೊಬ್ಬನಲ್ಲಿ ತನ್ನಮನ
ಸ್ಸಿನ ದುಃಖವನ್ನು ಹೇಳಿಕೊಳ್ಳದಿರುವುದುಂಟೆ?
ನಾಯಿ ನಾಯಿ ಎಂದೆಯಾ ನಾಯಿಗೆ ಬೆಕ್ಕಿನ
ನಿಂದಾವಚನಗಳನ್ನ ವಿನಯಿಸಿತ

ಸುಮ್ಮನೆ ತಲೆ ಕೆಡಿಸಿಕೊಳ್ಳಬಾರದ
ಬೆಕ್ಕು ಎಂದಾದರೂ ನಾಯಿಯನ್ನು ಹೊಗಳಿ
ದ್ದುಂಟೆ? ನಮಗೆ ಎಂದೂ ದಲಾ ಗೆಳೆತನ
ವಿಲ್ಲವಷ್ಟೆ ಹಿಂದೆ ಏಕೆ ಈ ಕುಲಸ್ಪೇರ ಬಂಟಾ
ಗಿದ್ದಿತು ಅದರ ಕಾರಣ ನಂಗಲಿದೆ ತದರೂ
ಅದರ ಪರಿಣಾಮವು ಉಳಿದೇ ಇದೆ

ಇಲಿ ನೋಡಿಬಾರದೆ? ನಾ ಕಾ
ಯುತ್ತ ಎಂದೆಯೆ ಕರಿಗಳನ್ನ ನೆ ದಂ
ಕಚ್ಚುವನೆನೆ? ಆದರೂ ನನಸ್ಸಿ ಕ್ಷತ್ತಲೆ
ಮುಂದಿಯ ಕರಿಗಳೆಲ್ಲ ಸ್ಸುದ್ದಿ ದ ನಾಗು
ವುದೇಕೆ? ನನ್ನ ಪೂರ್ವಜರ ಅವುಗಳ ಪೂರ್ವ
ಜರನ್ನು ಬೆನ್ನಟ್ಟಿ ಬೇಟೆಯಿಸ್ತಿರಬೇಕೆ ಇವ
ಮನುಷ್ಯನ ಕಾಪಾಡಿ ರಂದೆಯಾಗಿ ನಾವು
ಕೊ ದನೇ ಮಾತ್ರಗಳಲ್ಲವೆ ಸನ್ನ ಸಾಕಿ
ಅವುಗಳ ಕಾವಲಿಗಿರಿಸಿದನ ಹೇಗೆ ಸ
ನ್ನ ತಿಳಿದುಕೊಳ್ಳುತ್ತಲೆ, ಕುರಿಗಳೆಲ್ಲ ಸುಕು
ಮುತ್ತಲಿ ದ ಓಡುತ್ತ ಬಂದ ಹಿಂಡುಗಟ್ಟಿ
ರಿಗಳೂ ತಾಯಿಗಳೂ ಮಧ್ಯಕ್ಕೆ ಸೇರಿ
ಹಿಂಡಿನ ಹೊ ಲಯದಲ್ಲಿ ಕೂ ಬ ಗಂಡು
ಗಳ ಸಾ ಗಿ ಸುತ್ತುಗಟ್ಟಿ ತಿದ್ದುವು ಹಗೆಯ
ಬರೇ ಆಂಟುಗಳ ಮೊನೆಯೇ ಅದು
ಕೊನೆಯಾಗುವಂತಿದ್ದಿತು. ಈಗಲೂ ಮುಂದಿನ
ಕುರಿಯನ್ನು ತಾಕ್ಕೆಂದು ಉಳಿದೆಲ್ಲವೂ
ಹಿಂಬಾಲಿಸುತ್ತ ಕುರುಡುಗಟ್ಟಿದಂತೆ ಮುಂದಾ
ನಿನ ಹಿಂದೆ ಹಜ್ಜೆಯಿಡುತ್ತ, ಅದು ತಿರುಗಿದಲ್ಲಿ
ತಿರುಗಿ ಏರಿದಲ್ಲಿ ಏರಿ, ಹಾರಿದಲ್ಲಿ ಹಾರಿ, ಇಳಿ
ದಲ್ಲಿ ಇಳಿದು, ಹಿಂದಿಗೆದಲ್ಲಿ ಹಿಂದಿಗೆದು,
ವಿಶೇಷ ವಿಧೇಯತೆಯಿಂದ ಸರಿಯುತ್ತವೆ
ಹಿಂದೆ ಹಿಂದಿಷ್ಟು ಸೂಚನೆ ಕೊಟ್ಟರೇ ಅವಾಯ
ವಿನ್ನಿಡರಿಂದ ಅವುಗಳ ಇ ತಹ ಕುರುಡು
ವಿಧೇಯತೆಯೇ ಜೀವನಕ ನುವಾಗಿ ಬಂದಿದೆ
ಎಳೆಯ ಮರಿಗಳೂ ಒ ದ ಮುಂದಾಗಿ ವಿಶ್ವಾಸ
ರನ್ನು ಹಿಂಬಾಲಿಸಲು ಕಲಿಸುವಂತೆ ಯಾರೂ
ಕಲಿಸದೆ ಇದ್ದರೂ ನೆಗೆದಾಟವಾಡುತ್ತವೆ. ಮರಿ
ಗಳನ್ನು ನೋಡಬಾರದೆ? ಚುರುಕು ಬುದ್ಧಿ
ಉದ್ದ ಕಾಲ ಗಳು, ಹುಟ್ಟಿದ ನಿಮಿಷದಿಂದಲೂ
ತಾಯಿಯನ್ನು ಹಿಂಬಾಲಿಸಿ, ಒತ್ತಿನಲ್ಲಿ ನಡೆಯು
ಬಲ್ಲವು ಕಾಡಾಡಿಗಳಾಗಿದ್ದಾಗ, ಸತತ
ಸಂಚಾರದೇ ಅವುಗಳ ಜೀವನದ ಕ್ರಮವಾಗಿ
ದ್ದಿತು ಮೇವಿಗಾಗಿ ಹುಲ್ಲನ್ನು ಹುಡುಕುತ್ತ
ಬಯಲಿಂದ ಬಯಲಿಗೆ ತಿರುಗಬೇಕಾಗಿದ್ದಿತು.
ಬಯಲಿನ ಗದಿಯುದ್ದಕ್ಕೂ ಅಲ್ಲಲ್ಲಿ ನಿಂತ ಗಂಡು
ಗಳು ಅಪಾಯದ ಸೂಚನೆಯನ್ನು ತಿಳಿಯು
ತ್ತಲೇ, ಕಾಲೆತ್ತಿ ನೆಲಕ್ಕೆ ಬಡಿದು ಮಂದೆಯ
ನ್ನೆಲ್ಲ ಎಚ್ಚರಿಸುತಿದ್ದುವು. ಇಂದಿಗೂ ಹಾಗೆಯೆ
ನ ಸಾಗುತ್ತವೆಂದು ನೀನೇ ತಿಳಿಯಬಹುದು.

''ಅಲ್ಲೇ ಇರುವ ಕತ್ತೆಯನ್ನು ನೋಡಿ
ಬಾರದೇ ಅದಕ್ಕೆ ಅಷ್ಟುದ್ದದ ಕಿವಿಗಳೇತಕ್ಕೆ?
ಅಷ್ಟು ಕಿರಿದಾದ ಗೊರಸುಗಳೇತಕ್ಕೆ? ಮತ್ತಾ
ಕರಾಳವಾದ ಕಂಠಕ್ಷರವೂ ಏತಕ್ಕೆ? ಈಗತಾನೆ
ಈ ಮೂರೂ ಅದಕ್ಕೆ ನಿರುಪಯುಕ್ತವಾಗಿವೆ.
ಆದರೆ ಆದರ ಪೂರ್ವಜರಿಗೆ ಇದೇ ಮೂರು
ಸಾಧನಸಂಪತ್ತುಗಳಾಗಿದ್ದುವು ಬೆಟ್ಟಗಳಲ್ಲಿ,
ಕಾಡಾಡಿಗಳಾಗಿ ಕಾಡುಕಡ್ಡಿಗಳಿರುತ್ತಿದ್ದುವು.
ಆ ಕಿರಿಗೊರಸಿನ ಕಾಲುಗಳಿಂದ ತಾನೆ ದೃಢ
ನಡಿಗೆಯಿಂದ ಬಂಡೆಬೊರುಗಳ ಮೇಲೆಯೂ
ಸಂಚರಿಸಬರುತ್ತಿದ್ದಿತು ಆ ಕರ್ಕಶಕಂಠದಿಂದ
ಮಾತ್ರ ಹಗೆಯನ್ನು ಯುದ್ಧಕ್ಕೆ ಕರೆವುದೂ, ಗೆಳೆ
ಯರನ್ನು ಆಮಂತ್ರಿಸುವುದೂ, ಕುಟುಂಬದವ
ರನ್ನು ಎಚ್ಚರಿಸುವುದೂ ಸಾಧ್ಯವಾಗುತ್ತಿದ್ದಿತು
ಹಗೆಯು ದೂರದಲ್ಲಿರುವಾಗಲೆ, ಒಂದು ಕಲ್ಲು
ಹರಳು ಸರಿದರೂ ಒಂದು ಕೊಂಬೆಕಡ್ಡಿ ಮುರಿ
ದರೂ ಅವೇ ದೀರ್ಘ ಕರ್ಣಗಳು ಸುಲಭವಾಗಿ
ಸದ್ದನ್ನು ತಿಳಿಸುತ್ತಿದ್ದುವು ಮೈಬಣ್ಣವಂತೂ
ಮುಳ್ಳುಪೊದೆಗಳಲ್ಲಿ ಸುಳಿದು ಆಹಾರ–ತಿನ್ನು–
ವಾಗ, ಅದು ಕಣ್ಣಿಗೆ ನೈಸರ್ಗಿಕವಾಗಿ ಕಾಣದಂತೆ
ಕಂಪಾಡುತ್ತಿದ್ದಿತು ನಾಲಗೆ! ಅದು ತೊಗಲಾ
ಗಿದ್ದುದರಿಂದ ತಾನೆ ಮಿಕ್ಕ ಪಶ ಗಳು ಮುಟ್ಟ
ಲಾರದ ಕಂಟಿಗಳನ್ನು ಇದು ಕಡಿದು ಕೀಡಿ
ಜಗಿಯಲ ಆಗತ್ಯವಿಲ್ಲದ್ದಿತು

''ನನ್ನ ಯಜಮಾನನ ಇಷ್ಟು ದಿನಗ
ಳನ್ನ ಸಾಕುತ್ತಿರುವನಲ್ಲ ಅವುಗಳ ಹಿಂದೆ
ಕಾಡ ನ್ಯಾಣಗಳಾಗಿದ್ದಾಗಲೆ ನಳ್ಳಿ ಎರಡು
ಸಲ ಮಾತ್ರ ಕರುಗಳಿಗೆ ಹಾಲುಣಿಸಿ ಜವನ್ನು
ಪೂದರುಗಳಲ್ಲಿ ಅಡಗಿಸಿಟ್ಟ ತಾವು ತಂ
ಹುಲ್ಲಿನಾಹಾರಕ್ಕಾಗಿ ಒಯ್ದು ದ ಬಯಲಿಗೆ
ದೂರ ಸುಚರಿಸಿ ಸಿದ್ದ ಅಭ್ಯಾಸವನ್ನು ಪಿಂದಿಗೂ
ಪಾಲಿಸುತ್ತ ಬ ದ ದ ನಮ್ಮ ಯಜಮಾನನ
ಪುಣ್ಯವೆನ್ನಬೇಕೆ ಕರು ಎಡೆಯಿಂದೆ ತಾಯಿ
ದನೆ ಇದ್ದು ಹಾಲುಣ್ಣುತ್ತಿದ್ದರೆ ಈಗ ದನವನ್ನ
ಯಾರ ಸಾಕಿತ್ತಿದ್ದರ ? ಸಂಕಿದರೂ ಕು
ಗಳ ಬಾಲ್ಯದ ಪಾಪು ತ್ತಿರಬೇಕಾಗುತ್ತಿತ್ತಲ್ಲ''

ಇದಲ್ಲ ನ್ಯಾಯವೆನ್ನೋಣವೆ? ಆದರ ಪೂರ್ವಜರೂ ಇಂತಹ ಕಾಡಾಟಗಳಿಂ
ದ್ದರೆಂದು ಅದನ್ನು ಕಂಡರೇ ತಿಳಿಯುವುದ
ಹೊಟ್ಟೆಬಿರಿಯುವನ್ನ ಸಹಿಸುವಷ್ಟನ್ನೂ ಕೂಡಲೇ ಯಾವುದೂ ಕಾದು ಚಿಟ್ಟೆಹಕ್ಕಿ ಕೀಟ
ಕ್ಕಾಗಿ ಗಳಿಗೆಗಳಿಗೆಗಳ ಅವಧಿಗೂ ಕಳ್ಳಹೆಜ್ಜೆ
ಗಳಿಸಿಟ್ಟು ಸುಸುಳುತ್ತ ಆದೇಕೆ ಪಾತಕಿಯೆಂ
ತಿರುಗುತ್ತಿರಬೇಕೆ ? ಇದೇ ಅದರ ಸಂಜೀವನಾ
ಹಾರವೆ? ಮರಿಗಳಂತೂ ನ ರುಳಿಗಳು, ಒಣ
ಎಲೆಗಾಗಿ ಅವು ತಾಸಿನ ತಾಸ್ ನೆಗೆದು ಬೀಳು
ವುದೇನ ಒಣಎಲೆಯ ಲ್ಲೇನ ಸವಿ, ಎನು
ಪುಷ್ಟಿ,–ಅದಕ್ಕೆ ಜೀವನವಿದೆಯೆ? ಇದ್ದೆ ಚರ್ಮ
ನಮಗೆ ಶುದ್ಧ ಹುಚ್ಚೆಂದ ತೋರ ತ್ತಿಲ್ಲವ
ಆದರೆ ಮೂಲಸ್ವಭಾವವು ಎಚ್ಚಾಗಿ ಪ
ತಿಯೊಂದು ತಲಮನವಲಸನ್ನು ಒಡೆದ
ಮೂಡುತ್ತಿರುವಾಗ ಈಗ ತಾನೆ ಸುಭ್ಯನಾಗಿ
ಸಾಧುವಾಗಿ ಶ್ರೀವಂತಿಕೆಯ ಅಬ್ಬರದಿಂದ
ಇತರರು ತಡೆಯಲಾರದ ಮೂಲಸ್ವಭಾವದ
ಕುರುಹುಗಳನ್ನು ಕೆಂಡು ಅದು ಹಿಯ್ಯಾಳಿಸು
ತ್ತದೆ ಅಸ್ಪೇ ಜಾಣತನವೆ' ಮಲಗುವ ಮೊ
ದಲು ನಮ್ಮ ಸುತ್ತಾಟ ಕೇಳ್ವುವ ಮೊದಲು
ಅದರ ಕುಣಿದಾಟ,–ಎರಡೂ ಒಂದೇ ಅದೇನೇ
ಈಗ ಇರಲಿ, ನೂಲಸ್ವಭಾವವನ್ನು ಬಚ್ಚಿಡ
ಬಲ್ಲವರಾರು?''

ಹೀಗೆಂದು ಮಂದೆಯ ನಾಯಿ ಮನೆ
ಕಾವಲಿನ ಬಂಧುವಿಗೆಂದಿತು

ವಿವಿಧ ಸಮಾಚಾರಗಳು ೧೦
ಇಂದಿನ ಜೀವನದಲ್ಲಿ ಹೃದಯತ್ರಾಗಗಳು ೧೬
ಮಂಗಳೂರು ಸಮಾಚಾರ ೧೬
ತಾಲೂಕುಗಳಿಂದ ೨

ಸ್ವದೇಶಾಭಿಮಾನಿ.

ಸಂ.೨೨ನೆ ಶುಕ್ರವಾರ ಆಕ್ಟೋಬರ್ ೧೯೦೯

ಐಕ್ಯ

ಹಿಂದೂ ಮಹಾಸಭೆಯೂ ಮುಸ್ಲಿಮ ರೀಗ್ ಸಭೆಯೂ ಈ ವಾರ ಸೇರಿದುವು ಪರಿಕಾಮದಲ್ಲಿ ಎರಡೂ ಸಭೆಗಳು ಒಂದನ್ನೊಂದು ರಂಶಯ ದೃಷ್ಟಿಯಿಂದಲೇ ಕಂಡುವೆಂದೂ, ಎಹುತಃ ಇವೆರಡು ಮಹಾ ಸಮಾಜಗಳ ವರಿ ನತ್ತುಗಳ ಸಮಾಜಗಳೆರಡನ್ನೂ ಇನ್ನೂ ದೂರ ವಾಗಿ ಪರಸ್ಪರ ದೂರುತ್ತ ಇರುವಂತೆಯೆ ನಿರ್ಣಯಗಳನ್ನು ಮಾಡಿಕೊಂಡುವೆಂದೂ ತೋರುತ್ತದೆ ಈ ಸಂದರ್ಭದಲ್ಲಿ ಎರಡೂ ವರಿಷದಗಳಲ್ಲಿ ತೋರಿಬಂದ ಕೇವಲ ಸ್ವಜ ನಾಜ ವರವಾದ ಸ್ವಾರ್ಥವು ಭಾರತ ವರು ಸಕ್ಕೆ ಎಂತಹ ಹಿತವನ್ನೂ ಎಂದೂ ಮಾಡಲಾರ ದಂತಾಗಿದೆ ಎಂದು ಮಾತ್ರ ಖಂಡಿತವಾಗಿ ಹೇಳ ಬರುವಂತಾಗಿದೆ

ಶ್ರೀ ಸಯ್ಯದ್ ಹುಸ್ಸೇನರೆಂಬವರು, ಎಷ್ಟೋ ವರುಷಗಳಿಂದ ಪರದೇಶಗಳಲ್ಲಿ ಇರು ತ್ತಿದ್ದವರು ಪುನಃ ಸ್ವದೇಶಕ್ಕೆ ಬರುತ್ತಲೇ ನೂರಿರುವ ಭಾಷಣದಲ್ಲಿ ಹಿಂದೂ ಮುಸ್ಲಿಮ ವ ಎಂಬ ಭೇದಗಳೆಲ್ಲ ವಿನಂತಿಸಿಕೊಂಡೆ.—ಹಿಂದೂ ಮುಸ್ಲಿ ರೊಳಗೆ ನೈಜವಾದ ಐಕ್ಯವಿದ್ದರೆ ಮಾತ್ರ ಭಾರತ ವರ್ಷದಲ್ಲಿ ಸ್ವರಾಜ್ಯವು ಸ್ಥಾಪನೆ ಹೊಂದು ವುದು ಜನರೆಲ್ಲರೂ ಜಾತಿಬೇಧವಿಲ್ಲದೆ ದೇಶ ಭಕ್ತಿಯಿಂದ ತುಂಬಿರುವರು ಹೀಗಿರುವಾಗ ಹಿಂದೂ ಮುಸ್ಲಿಮರೊಳಗೆ ಅಧಿಸ್ಯಾಮ ಭೇದ ಗಳಾವುವೂ ಇದ್ದಲ್ಲಿ ಮುಖಂಡರು ಸೇರಿ ಅವನ್ನು ಇತ್ಯರ್ಥಿಸಿಕೊಳ್ಳಲಾರದಷ್ಟೇನೂ ಗಡು ಸಾಗಿ ಆ ಭೇದಗಳಿಲ್ಲ ನುನಸ್ಸಿದ್ದು ಗೌರವ ಕಾಪಾಡಿಕೊಳ್ಳುವ ವಿವೇಕವಿದ್ದರೆ ಜವಾಬು ದಾರಿಯನ್ನು ಅರಿತವರಾರೂ ಐಕ್ಯಸಾಧನೆಗಾಗಿ ಪ್ರಯತ್ನ ಮಾಡಬಹುದಾಗಿದೆ' ಎಂದರು

ಹೀಗಿದ್ದರೂ, ಇಂತಹ ಪ್ರಯತ್ನಗಳೆಲ್ಲ ಇದು ವರೆಗೆ ವ್ಯರ್ಥವಾದುವೇಕೆ? ಲಕ್ನೌದಲ್ಲಿ ತಹಾನಾಮೆ ನಾಲ್ಕೇ ದಿನ ಖುಲಿಯಿತೇಕೆ? ಕೊಂಗ್ರೆಸಿನಿಂದ ತಡೆದ ಎಷ್ಟೊ ಪ್ರಯತ್ನಗಳು ಕೃತಾರ್ಥವಾಗಲಾರದೆ ಇರುವುದೇಕೆ? ಇತ್ತಂ ಡಗಳಲ್ಲಿ ಹೇಗೂ ಒಪ್ಪಂದವಾಗುವ ಮುಹೂ ರ್ತದಲ್ಲಿ ಅವಲಕ್ಷಣವನ್ನು ಸಾರುತ್ತಿರುವವರ ಯಾರಿರಬಹುದು? ಇವೆರಡು ಮಹಾ ಸಮ ಜಗಳಿಗೆ ಐಕ್ಯದಿಂದ ಯಾರಿಗೆ ನಷ್ಟವಿದೆ? ಜಾತಿ ತಕ್ಕಂತೆ ಪ್ರಾತಿನಿಧ್ಯ, ಎಂಬಾರ್ಡು ಇತ್ಯಾದಿಗ ಳಿಂದ ಜಾತಿನಾಯಕರೆಂಬವರನ್ನು ಸೃಷ್ಟಿಸಿ, ಸ್ವೇಚ್ಛನಾಯಕರನ್ನು ಬದಿಗೊತ್ತುವ ಹಂಚಿಕೆ ಯಾರದು? ಇದೆಲ್ಲ ಹಂಚಿಕೆ ಇರುವ ವರೆಗೆ ದೇಶದ ಜನತೆಯೆಲ್ಲ ಒಂದಾದೀತೆ? ಲೋಭ ಮುಕ್ಷಗಳು ನಲಿದಾಡುತ್ತಿರುವಲ್ಲಿ ಐಕ್ಯವು ಕೇಗೆ ಉಂಟಾಗೆಬಹುದು? ಇವೆರಡು ಮಹಾ ತೋಷಗಳು ನಿರ್ಮೂಲವಾಗುವಂತೆ ಇತ್ತಂಡ ದ ನಾಯಕರು ಸಾಧಿಸಬಾರದೇಕೆ? ತಮ್ಮ ತಮ್ಮ ಜಾತಿಗಳಲ್ಲಿ ಅದಿವರಮಾಡಿಕೊಳ್ಳುವ ನೆವ ದಿಂದ ಜಾತಿಯ ಒಳ್ಳೆಯತನಕ್ಕೆ ಮೋಸ ಮಾಡುವ ಪ್ರವೃತ್ತಿಯನ್ನು ಅವರು ಬಿಡಬೇಕಾಗಿದೆ ಮೋ ದಿನಲು ಪ್ರೇಕ್ಷಕರಿಯೆ ಎಲ್ಲಿಂದ ಬರುತ್ತದೆ! ಹೀಗೆ ಸ್ವಜಾತಿಯವರ ಕೈಯಲ್ಲಿ ಸಮಾಜಗಳು ಅಧಿಕಾರಿಯತ್ವವನ್ನು ಒಪ್ಪಿಸಿರುವುದೇಕೆ? ಎಂಬ ಪ್ರಶ್ನೆಗಳು ಈ ಪರಿಷತ್ತುಗಳ ಅಧಿವೇಶನಗ ಳನ್ನು ಕುರಿತು ವಿಚಾರಿಸುವವರ ಮನಸ್ಸಿನಲ್ಲಿ ಏಳೆಯದಿರವು.

ಹೀಗೆ ಐಕ್ಯವಾಗಲು ಪ್ರಯತ್ನಗಳನ್ನು ಮುಖಂಡರು ಮಾಡಲೆಂದು ತಿಸಿಯುವುದು ತಪ್ಪೆಂದು ತೋರುವ ಕಾರಣ, ಜನತೆಯೇ ಈ ಪ್ರಯತ್ನಗಳನ್ನು ಮಾಡುವುದುತ್ತಮ ಎನಿಸು ತ್ತದೆ. ಯಾವನೊಬ್ಬನು ಮಹಾಮುಖಂಡ ನಾಗಿ ಮಹಾಧಿಕಾರಿಯಾದರೆ, ಜನತೆಗೇನೂ ಲಾಭವೂ ನಷ್ಟವೂ ಇಲ್ಲ, ಜನಸಾಮಾನ್ಯರು ತಮ್ಮ ದೈನ್ಯತೆ ತೊಲಗಿದರೆ ಸಾಕೆನ್ನುವರೇ ಹೊರತು, ತಮ್ಮವನಾದ ಯಾವನೊಬ್ಬ ಸ್ವಜಾತಿಯ ವನೇ ಮಹಾಧಿಕಾರಿಯಾಗಬೇಕೆಂದು ಹಾರಯಿಸುವುದಿಲ್ಲ.

ಇದಕ್ಕಾಗಿಯೆ ಕೊಂಗ್ರೆಸಿನ ಮುಂದಾ ಳುಗಳು, ಆ ಅಥವಾ ಈ ಮುಖಂಡರನ್ನು ಹಿಲಿಸಿಕೊಂಡು ಮುಂದೆಯುತ್ತ ಐಕ್ಯವನ್ನು ಸಾಧಿಸುವುದು ಸಾಧ್ಯವೇ ಅಲ್ಲ ಎಂಬ ದನ್ನು ತಿಳಿದು ಇನ್ನು ಜನತೆಗೇ ಕೊಂಗ್ರೆಸಿನ ಸಂದೇಶವನ್ನು ಸಾರುವ ಕಾರ್ಯಕ್ರಮವನ್ನು ಕೈಕೊಂಡಿರುವರು ಸಾಂವತ್ಸಿಕ ಮತ್ತು ರಾಜಕೀಯ ಪ್ರಗತಿಯು ಹಿಂದು ಅಥವಾ ಮುಸ್ಲಿಮರಿಗೆಂದು ಪ್ರತ್ಯೇಕ ವಾಗಿಲ್ಲ, ಸರ್ವರಿಗೂ ಬೇಕಾದುದು ಮೂಢ ರಂತೆ ವರ್ತಿಸಿದರೆ ಇಬ್ಬರಿಗೂ ಮೋಸ, ಒಟ್ಟು ಗೂಡಿದರೆ ಇಬ್ಬರಿಗೂ ಎಲ್ಲರಿಗೂ ಪ್ರಯೋಜನ ವಿದೆ

ಇದರಿಂದ, ಇದು ವರೆಗೆ ಹಿಂದುಗಳನ್ನಾ ಗಲಿ ಮುಸ್ಲಿಮರನ್ನಾಗಲಿ ನಾನಾ ಸ್ವಾರ್ಥ ಪ್ರಯತ್ನಗಳಿಂದ ಒಲಿಸಿಕೊಳ್ಳುವುದಕ್ಕೆ ಎಂತಹ ಉಪಾಯಗಳನ್ನು ಮಾಡಿದ್ದರೋ ಅವನ್ನೆ ಪ್ರ ಯೋಗಿಸಿ ತಮ್ಮ ಪ್ರಾಧಾನ್ಯವನ್ನು ಇನ್ನೂ ಊ ರ್ಜಿತವಿರಿಸಬೇಕೆಂದು ಅಂತಹ ಮುಖಂಡರೆಲ್ಲ ವರು ಈಗ ಪರಿಷತ್ತುಗಳಲ್ಲಿ ಪ್ರಯತ್ನಿಸುತ್ತಾರೆ ಅವರಾಗಲಿ 'ಧರ್ಮ'ದ ಹೆಸರಿಕ್ಕುವುದು, ತಮ್ಮ ಜಾತಿಯವರ ಜಯ-ಕ್ಯಾಗಿಯೆ ಹೊರತು, ಇಡೀ ಜನಾಂಗದ ಜಯ ಕ್ಯಾಗಿ ಅಲ್ಲ. ಅವರೂ ಇ ನರೂ ತಮ್ಮೊಡು ಮಹಾ ಸಮಾಜಗಳ ನಡುವೆ ದೊಡ್ಡದೊಂದು ಅಡ್ಡಗೋಡೆಯನ್ನು ಕಟ್ಟುವುದ ಕ್ಕಾಗಿಯೇ ಈ ಮಹಾ ಪ್ರಯತ್ನ ಮಾಡುವರು ಇವರ ಪ್ರಯತ್ನಗಳು ಸಫಲವಾದರೆ, ಇವರಿಗೆ ಮಾತ್ರ ಪದವಿಯೋ ಗೌರವವೋ ಸ್ಥಾನಮಾನ ಗಳೋ ದೊರೆವುವು ಹೊರತು, ಇವರದೇ ಆಗಿ ರುವ ಸಮಾಜಕ್ಕಾಗಲಿ ಇಡೀ ಜನಾಂಗಕ್ಕಾ ಗಲಿ ದೊರೆವಂತಿಲ್ಲ

ಆದರೂ, ಒಂದೇ ಸಲ, ಈ ಬಗೆಯ ಸಾಮಾಜಿಕ ಅಂದೋಲನವು ಮುಂಬಾಯಿ ವ ಪ್ರಾಂತ, ಯುಕ್ತಪ್ರಾಂತ್ಯ, ಬಂಗಾಳ ಮುಂ ತಾದ ಪ್ರಾಂತ್ಯಗಳಲ್ಲಿ ಪ್ರಾರಂಭವಾಗಿರುವು ದನ್ನು ಕಂಡರೆ, ಈ ಚಳವಳದ ಹಿಂದೆ ಯಾವು ದೊಂದೇ ವ್ಯಕ್ತಿಯ ಸ್ವೇರಣೆಯುಂಟೆಂದೇ ಭಾವಿ ಸಬೇಕಾಗುತ್ತದೆ ಇಂತಹ ಚಳವಳ ತಡೆವಂತೆ ಸಂಧಾನ ಪ್ರಸ್ತಾವವೆತ್ತುವುದೂ, ಈ ವ್ಯಕ್ತಿಯ ಅಹಂಕಾರವನ್ನು ಇನ್ನೂ ಹೆಚ್ಚಿಸುವುದಕ್ಕೆ ಕಾರ ಣವಾದೀತ ಹೊರತು ಇತರ ಯಾವ ವರಿಣಾ ಮವನ್ನೂ ಉಂಟುಮಾಡಲಾರದು.

ಈ ಬಗೆಯ ಸ್ವಾರ್ಥ ಸಾಧನೆಗಳಿಗೂ ರಾಷ್ಟ್ರೀಯ ಭಾವನೆಗಳಿಗೂ ಎಂತಹ ಸಂಬಂ ಧವೂ ಇರಲಾರದು, ಜನತೆ ತಾನೇ ಐಕ್ಯಸಾಧ ಕವಾಗಬೇಕು.

ಪ್ರಜಾ ಸ್ವತಂತ್ರ್ಯದ ವಿಚಾರ

ಲಂಡನಿನಲ್ಲೊಂದು ಸಭೆಯಲ್ಲಿ ಎಷ್ಟೋ ಮಂದಿ ಪ್ರಖ್ಯಾತರೇ ಸೇರಿ ಈ ವಿಷಯವನ್ನು ಕುರಿತಾಗಿ ಹಲವು ಭಾಷಣಗಳಾದುವು. ಅರ್ಲ್ ಆಸ್ಕ್ವಿಲ್ಲೆ ಎಂಬ ಶ್ರೀಮಂತರೇ ಅಧ್ಯಕ್ಷರಾಗಿ ದ್ದರು. "ಭಾರತ ವರ್ಷದಲ್ಲಿ ಪ್ರಜೆಗಳ ಸ್ವಾ ತಂತ್ರ್ಯವಹಕ್ಷವು ಹೇಗಾಗಿಗುತ್ತದೆಂಬುದನ್ನು ಪ್ರಸಂಗಕ್ಕೆಲ್ಲ ಅರುಹುವುದೇ ಈ ಪರಿಷತ್ತಿನ ಮುಖ್ಯ ಉದ್ದೇಶವಾಗಬೇಕು. ಏಕೆಂದರೆ, ಈ ಸ್ವತಂತ್ರ್ಯ ಪ್ರಜೆಗಳ ಹಿಂದಿನ ಅಲ್ಲಿನವರ ನಡತೆಯುತ್ತದೆಂಬುದನ್ನು ಇಲ್ಲಿ ವಿವರಿಸ ಬೇಕಾಗಿಲ್ಲ. ಪ್ರೆಸ್ ಕಾನೂನು ಕೈದುಮಾಡುವ ರಭಸ, ವಿಚಾರಣೆಯಲ್ಲದೆ ಬಂಧನದಲ್ಲಿ ರಿಸೋಣವೇ ಮೊದಲಾದ ನಾನಾ ರೀತಿಗಳು ಅಲ್ಲಿ ಜಾರಿಯಲ್ಲಿವೆ. ಇವುಗಳಿಗುದ್ಧಿಯೇ ಇಲ್ಲಿ ಗೊತ್ತಾಗುವುದಿಲ್ಲ. ಜರ್ಮನಿ ಮತ್ತು ಇಟಲಿಗಳಲ್ಲಿ ಆಗುತ್ತಿರುವ ಹತ್ಯಾಕಾಂಡ ಅನೀತಿ ಅನ್ಯಾಯ ಮೊದಲಾದ ವಿಚಾರಗಳನ್ನು ಇಲ್ಲಿ ಬಹಳವಾಗಿ ವಿವರಿಸಿ ಬರೆಯುವರು. ಬಂಗಾಳದಲ್ಲಿ ಆಗುತ್ತಿರುವುದನ್ನು ಯಾರೂ ವಿವರಿಸುತ್ತಿಲ್ಲ, ಪ್ರಸ್ತಾಪವೆತ್ತುತ್ತಿಲ್ಲ. ಬ್ರಿಟಿಷ ಆಳಿಕೆಯು ಇಂಡಿಯದಲ್ಲಿ ನೂರಿರಲ್ಲಿ ೯೦ ಪಾಲು ಡಿಕ್ಟೇಟರರ ಅಧಿಕಾರವೇ ಆಗಿದೆ ಇಂಡಿಯಾ ಆಕ್ಟು ಸಹ ವಸಾಹತುಗಳ ರಾಜ್ಯ ಭಾರ ಕ್ರಮವನ್ನಾದರೂ ಇಂಡಿಯಕ್ಕೆ ಕೊಟ್ಟಿಲ್ಲ. ಸೇಫ್‌ಗಾರ್ಡುಗಳನ್ನು ಬಹಳವಾಗಿ ಇಟ್ಟಿರು ವುದೂ ಒಂದು ದೊಡ್ಡ ಬಂಧನ ವೈಸ್ರಾಯರಿಗೆ ಇರುವ ಸ್ವಂತಪ ಅಧಿಕಾರಗಳಿಂದ, ಈ ಹೊಸ ರಾಜ್ಯಭಾರ ಕ್ರಮವು ನಿರ್ಥವಾಗಿದೆ" ಎಂಬ ಅಭಿಪ್ರಾಯಗಳನ್ನು ಈ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸೂಚಿಸಿದರು

"೮೦ ವರ್ಷಗಳಿಂದೀಚೆಗೆ

ಈಗ ಸುಲಭವಾಗಿ, ಬರೀ ಹತ್ತೇ ದಿನಗಳಲ್ಲಿ ಹಸಿಹುಲ್ಲನ್ನು ನಟ್ಟು ಬೆಳೆಸಿ ಕೊಯ್ಲಿಗೆ ತರುವ ಹಂದು ಹೊಸ ಕ್ರಮವನ್ನು ಇಂಗ್ಲೆಂಡಿನ ಇಬ್ಬರು ವೈಜ್ಞಾನಿಕರು ಕಂಡುಹಿಡಿದಿದ್ದಾರೆ. ಹುಲ್ಲಿನ ಬೀಜಗಳನ್ನು ದೊಡ್ಡ ದೊಡ್ಡ ಹರಿವಾಣಗಳಲ್ಲಿ ಹರಡಿ ಅದರ ಮೇಲೆ 24 ತಾಸುಗಳ ಗೆಮ್ಮೆ ಮೂರು ಮೂರು ಮಿನಿಟುಗಳ ಕನಕ ಒಂದು ಬಗೆಯ ರಸಾಯನಿಕ ದ್ರವದಿಂದ ಕೂಡಿದ ನೀರನ್ನು ಚಿಮುಕಿಸುತ್ತ ಇರುವರು. ಹತ್ತು ದಿನಗಳೊಳಗಾಗಿ ಹುಲ್ಲು ಬೆಳೆದು ಕೊಯ್ಲಿಗೆ ಬರುವದು ಭೂಮಿ ಬೇಕಾಗಿಲ್ಲ, ಉಳಬೇಕಾಗಿಲ್ಲ, ಗೊಬ್ಬರೆ ಹಾಕಬೇಕಾಗಿಲ್ಲ. ಹೀಗೆ ಹುಟ್ಟುವ ಹುಲ್ಲು ಆಗ್ಗವಾಗಿಯೂ ಧಾರಾಳವಾಗಿಯೂ ಪೌಷ್ಟಿಕವಾಗಿಯೂ ಇರುತ್ತದೆ; ಮಾತ್ರವಲ್ಲ, ದನಕರುಗಳಿಗೆ ಬಹಳ ರುಚಿಕರವಾಗಿರುವದು ಅವುಗಳು ತಿನ್ನುವಾಗ ಹುಲ್ಲಿನ ಒಂದು ಕಡ್ಡಿ ಕೂಡ ಬಿಡುವದಿಲ್ಲ ಅಕಾಲ ಈಕಾಲ ಎನ್ನದೆ ಬೇಕುಬೇಕಾದ ಕಾಲದಲ್ಲಿ ಹುಲ್ಲನ್ನು ಬೆಳೆಯಿಸಬಹುದು ಇನ್ನು 10 ದಿನದ ಮೇಲೆ ಬೇಕಾಗುವ ಹುಲ್ಲಿಗೆ ಇವತ್ತು ಬೀಜ ಹಾಕಿದರಾಯ ತ.

x x x x

ಪುಸ್ತಕಗಳಿಗೆ ಹುಳ ಬಾಧೆ ಇಲ್ಲ

ಗೆದ್ದಲು ಭೂಮಿಶ್ಯೆ ಮೊದಲಾದ ಸಣ್ಣ ಸಣ್ಣ ಕ್ರಿಮಿಕೀಟಗಳಿಗೆ ಅಮೂಲ್ಯವಾದ ಪುಸ್ತಕಗಳು ಕೂಡ ಬಲಿಯಾಗುತಿದ್ದವು ಈ ಕ್ರಿಮಿಕೀಟಗಳು ಆ ಪುಸ್ತಕಗಳನ್ನೆಲ್ಲ ತಿಂದು ಹಾಕಿ ಉಪಯೋಗಕ್ಕೆ ಬಾರದಂತೆ ಮಾಡುತಿದ್ದುವು ವೈಜ್ಞಾನಿಕರು ಈಗ ಈ ಕ್ರಿಮಿಕೀಟಗಳ ಹಾವಸಿಯಿಂದ ತಪ್ಪಿಸಿಕೊಳ್ಳುವ ಒಂದು ಉಪಾಯವನ್ನು ತಿಳಿಕೊಂಡಿದ್ದಾರೆ

(೧೪ನೇ ಪುಟವನ್ನು ನೋಡುವುದು)

ವೈಜ್ಞಾನಿಕ ವೃತ್ತಾಂತ

(ಸಂಗ್ರಾಹಕರು ಎಸ್. ಎಸ್. ಕೆ.)

GODREJ

CHAVI BRAND

ಗೊಡ್ರೆಜ್

ಚಾವಿ ಮಾರ್ಕಿನ ಸುಗಂಧಪೂರಿತ ಸಾಬೂನುಗಳು

ದೀಪಾವಳಿಯ ನೂತನ ಬಹುಮಾನಗಳು!

ಗೊಡ್ರೆಜ್ ಸಾಬೂನುಗಳನ್ನು ಉಪಯೋಗಿಸುವವರಿಗೆ ಈ ಕೆಳಗಿನ ಬಹುಮಾನಗಳನ್ನು ಉಚಿತವಾಗಿ ಕೊಡಲಾಗುವುದು.

1ನೇ ಬಹುಮಾನ ರೂ. 360 ಮೌಲ್ಯದ ಪೈಲಟ್ ರೇಡಿಯೊ ಸೆಟ್ 1

2ನೇ ,, ರೂ 160 ಮೌಲ್ಯದ ಸಿಂಗರ್ ಹೊಲಿಯುವ ಯಂತ್ರ 1

3ನೇ , ರೂ. 100ರ ಕೊಲಂಬಿಯಾ ಗ್ರೆಮಾಫೋನ್ 1

4ನೇ ,, ರೂ. 50ರ ಮೋತಿಲಾಲ್ ಎಂ. ಶಹಾರವರ ಬಹುಮಾನ ಸಾಮಗ್ರಿಗಳು

25 ಸಾದಾ ಬಹುಮಾನಗಳು:— 1 ಡಜನ್ ಗೊಡ್ರೆಜ್ ಗಂಧದ ಸಾಬೂನುಗಳು ಯಾ ಲಿಮ್ಕಾ ಸಾಬೂನುಗಳು.

ಮೇಲಿನ ಬಹುಮಾನಗಳನ್ನು ಪಡೆಯಬೇಕಾದರೆ, ನಮ್ಮ ಟೊಯಿಲೆಟ್ ಸಾಬೂನಿನ ನಂಬ್ರ 1 ಅಥವಾ 2, ಹೌಸ್‌ಹೋಲ್ಡ್ ಮತ್ತು ಗಂಧದ ಸಾಬೂನುಗಳಿರುವ ಪೆಟ್ಟಿಯಲ್ಲಿರುವ ನಂಬರುಗಳಿರುವ ಚಿತ್ರಗಳನ್ನು ಜಾಗ್ರತೆಯಾಗಿ ತೆಗೆದು ಇಟ್ಟುಕೊಳ್ಳುವುದು. ಬಹುಮಾನ ಕೊಡಲ್ಪಡುವ ನಂಬ್ರಗಳನ್ನು ಈ ಮೊದಲೇ ಅರಿಸಿ, ಸೀಲುಮಾಡಿ ಇಟ್ಟಿರುತ್ತದೆ. ದಿನೆಂಬರ್ ತಾ. 31ರಲ್ಲಿ ಮೇಲೆ ಸೂಚಿಸಿದ ನಂಬ್ರಗಳನ್ನು ಹಿಂದೂ ಸ್ಥಾನದ ಮುಖ್ಯವಾದ ಎಲ್ಲಾ ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಬಹುಮಾನದ ನಂಬ್ರಗಳ ಚಿತ್ರಗಳನ್ನು ನಮಗೆ ಟಪ್ಪಾಲುದ್ವಾರಾ ರವಾನಿಸಿಕೊಟ್ಟಲ್ಲಿ ಮೇಲ್ಕಾಣಿಸಿದ ಬಹುಮಾನಗಳನ್ನು ರವಾನಿಸಿ ಕೊಡಲಾಗುತ್ತೆ.

ಮುಖ್ಯ ಏಜಂಟರು: ನಾದಿರ್‌ಷಾ ಪ್ರಿಂಟಿಂಗ್ ಎಂಜಿನಿಯರಿಂಗ್ ಕಂಪೆನಿ, ಹೊಂಬಾಯಿ.

ಪೆಳ್ಳರು:— ಗೊಡ್ರೆಜ್ ಸೋಪ್ಸ್ ಲಿಮಿಟೆಡ್, ವಿಕ್ಟೋರಿಯಾ ರೋಡ್, ಬೊಂಬಾಯಿ, 11.

ಜಾಣರೇ ಒಳಗಣ್ಣು ತೆರೆದು ನಿಮ್ಮ ಜಾಣತನದ ಪ್ರಯೋಜನ ಹೊಂದಿ!

ತಳುಕು ಹಿಸುವ ವೆಚ್ಚವಲ್ಲ—ತಳುಕು ಹಿಸದಿರುವುದೇ ನೋಡಿ

ಮೊದಲನೆ ಬಹುಮಾನ ರೂ ೨೦೦, ಕೊಡಕ ಕೆಮರಾ, ಪಾರ್ಕರ್ ಪೆನ್

ಇತರ ಬಹುಮಾನಗಳು ರೂ ೧೦೦, ಕೇಮೆಲ್, ರೋಕ್ಸಿ ಪೆನ್ನುಗಳು!

ವಿನೋದ ಸಮಸ್ಯೆ ನಂಬ್ರ ೫



ಕುರುಹು ಎಡದಿಂದ ಬಲಕ್ಕೆ —

ಇದಾಗಕ್ಕವರ ಕಲಿಯಬೇಕಾದ ಕಲಿಗಳಲ್ಲಿ ಭೂಪರಿಶಾಸ್ತ್ರವು ಮುಖ್ಯವಾದುದ್ದು ಹಗರವಾದ ಕಲ್ಲೂ ಸೇರಲ್ಲಿ ನುಗ್ಗು ಸರಿಯಾಗಿ ಮನ ಮುಂಜೆ ತಪ್ಪುತ್ತೆ ಸಾವಿರ ಇಷ್ಟು ಒಪ್ಪಿನಮ್ಮ ಜಾಣನನ್ನಾಗಿ ಮಾಡಲಾರದು ಇ ವಿಲ್ಲದ ನಮ್ಮುವಿಲ್ಲ ಒ ಜ ಕ್ಪಿಯೆಯು ಇದರಿಂದ ನಮ್ಮನ್ನು ಬೆರಗ 'ಏಳಿಸುತ್ತಾನೆ. ಒ ಸಿದ್ಧುದಲ್ಲಿ ಇಂತಹ ಯಂತ್ರದ ಸಂಭವ ವಿದೆ ರ ಕಂಪಿಗೆ ದ ಕೊಡಿಯೇ ಬೇಕೆಂದು ನಾಗರೀಕರು ತಿಳಿದ ರೀತಿಯಲ್ಲಿ ತೋರುತ್ತೆ' ೧೪ ಹಳ್ಳಿಗಳಲ್ಲಿ ಕರು ಇನ್ನೂ ಕವ್ಮಿಯೂಗುವ ಸಂಭವವಿದೆ

ಕುರುಹು ಮೇಲಿಂದ ಕೆಳಕ್ಕೆ — ಮೇಲಿಂದ ಬಿದ್ದ ಪದಾರ್ಥ ಹೀಗಾಗಿದ್ದಷ್ಟು ಬೇಗ ಬೇಳ್ತೆ ಇದರಿಂದ ಮಧ್ಯರು ಚುರುಕಾಗಿ ತ್ತಾರೆ ಮಾತಿದ ಇದನ್ನು ಕೆಲವು ಜೀವಿಗಳು ಎಂದಿಗೂ ಮರೆಯವು ಹಿಂದಿನವರ ಇದು ನಮಗೆಷ್ಟೋ ಜ್ಞಾನವನ್ನು ಕೊಡುತ್ತೆ ೧೦ ದೊಡ್ಡವರು ಹೆಚ್ಚು ಮಂದಿ ಸೇರುವರು ೧೯ ದೂರ ದೇಶಕ್ಕೆ ಹೊರಟ ವ್ಹಾನವಲ್ಲ ಧನ ಆಗಲುವಿಕೆಯ ಸಮಯದಲ್ಲಿ ಇದು ಸಹಜ ೧೪ ಮಕ್ಕಳನ್ನು ಯದ ಮಾತೆಯೇ ಇಲ್ಲವೆನ್ನಬಹುದು ೧೩ ವಿಜ್ಞಾನಿಗಳು ಯುದ್ಧಕ್ಕಾಗಿ ಯಂತ್ರದ ಇವರನ್ನು ಸೃಷ್ಟಿಸರುವರು

ನಿಬಂಧನೆಗಳು.—ಉತ್ತರಗಳನ್ನು ಪಾಲಿ ಕಾಗದ ಮೇಲೆ ಬರೆಯಬಹುದು ವ್ಯಕ್ತಿಯೊಂದು ಕೂಪನಿಗೂ ವ್ಯವೇಚ ಧವ ನಾಲ್ಕಾಡೆ ಒಬ್ಬರೇ ನಾಲ್ಕು ಕೂಪನ್ನುಗಳನ್ನು ಕಳುಹಿಸಿದರೆ ಇನ್ನೆರಡು ಉಚಿತ. ಸರಿಯಾದ ಉತ್ತರವು ದಿ ಕೆ. ಇ. ವ್ಯಾಂಕಿಂಗ್ ಸಿಂಡಿಕೇಟಿನಲ್ಲಿ ಮೊದಲು ಮಾಡಿ ಇದಲಾಗಿದೆ. ಅಧು ನವೆಂಬರ್ ೨೬ಕ್ಕೂ, ಗೆದ್ದವರ ಹೆಸರುಗಳು ದಿಸೆಂಬರ್ ೩ಕ್ಕೂ ಸ್ವದೇಶಾಭಿವಾಸಿಯಲ್ಲಿ ಪ್ರಕಟಿಸಲ್ಪಡುವುದು. ಬಹುಮಾನಗಳು ದಿಸೆಂಬರ್ ೧೯ಕ್ಕೆ ಹಂಚಲಾಗುವುದು. ಉತ್ತರಗಳು ನವೆಂಬರ್ ೨೨ನೇ ತಾರೀಕಿನೊಳಗೆ ನಮಗೆ ತಲುಪಬೇಕು. ಎಲ್ಲಾ ವಿಚಾರಗಳಲ್ಲಿಯೂ ಈ ಸಮಸ್ಯೆಯ ಸಂಸ್ಥೆಯ ಜಾಲಕರ ನಿರ್ಣಯವೇ ಅಂತಿಮ. ಕೂಪನ್ನು ಬದ್ಧ ವಾಗಿರುವುದೆಂದು ತಿಳಿದಿರತಕ್ಕದ್ದು.

ನಮ್ಮ ವಿಳಾಸ:—ವಿನೋದ ಸಮಸ್ಯೆ ನಂ. ೫. ೧೦ ಪೋಷ್ಟ್ಬಾಕ್ಸ್, ಮುಂಬಯಿ ೪.

ಕರ್ನಾಟಕ ಏಕೀಕರಣಸಂಘ ಧಿಗಡಾವಿ.

ಪ್ರಕಟಣೆ ೩.

ಏಕೀಕರಣ ಆಂದೋಲನವನ್ನು ಜೋರಿನಿಂದ ಸಾಗಿಸಿರಿ.

ಈ ವರೆಗಿನ ಕಾರ್ಯ

ಏಕೀಕರಣ ಸಂಘದವರು ವಿಸ್ತವಿಸಿದ ಮೇರೆಗೆ ಏಕೀಕರಣ ದಿನವು ಮೊನ್ನೆ ೧೦ನೇ ತಾರೀಕಿನ ದಿನ ಇಡೀ ಕರ್ನಾಟಕದಲ್ಲಿ ಆಚರಿಸಲ್ಪಟ್ಟಿತು. ಅಲ್ಲದೆ ಏಕೀಕರಣದ ಬೇಡಿಕೆಯ ಪತ್ರಿಕೆಗಳಿಗೆ ಸಹಿಗಳು ತೆಕ್ಕೊಳ್ಳಲ್ಪಟ್ಟಿರುವವು. ಎಷ್ಟೋ ಕಡೆ ಏಕೀಕರಣ ಸಂಘದ ಶಾಖೆಗಳಾದರೂ ಸ್ಥಾಪಿಸಲ್ಪಟ್ಟಿರುವವು. ವೃತ್ತಿಕಾರ್ಕರೆನೇಕರು ಅಗ್ರಲೇಖ, ಬಿಡಿಸುದಿ, ವಿಶೇಷ ಸಂಚಿಕೆ ಮೊದಲಾದುವುಗಳನ್ನು ಪ್ರಕಟಿಸಿ ಏಕೀಕರಣದ ಆಂದೋಲನಕ್ಕೆ ಬೆಂಬಲವನ್ನಿತ್ತಿರುವರು. ಸುಹಾತ್ಮಾ ಗಾಂಧಿ, ಸುಭಾಷಚಂದ್ರ ಬೋಸ್, ಲೋಕನಾಯಕ ಅಣೆ, ಆಚಾರ್ಯರೇ, ಡಾ ಕುರ್ತುಕೋಟಿ, ಶ್ರೀ ಸತ್ಯಮೂರ್ತಿ, ಡಾ. ಪಟ್ಟಾಭಿ, ಶ್ರೀ ಎನ್ ಸಿ ಕೇಳಕರ ಮೊದಲಾದ ಅಖಿಲ ಭಾರತೀಯ ಮುಖಂಡರನೇಕರು ಏಕೀಕರಣದ ತತ್ವವನ್ನು ಮಾನ್ಯ ಮಾಡಿ ನಮ್ಮ ಆಶೆ ಕೈಗೂಡಲೆಂದು ಹೃತ್ಪೂರ್ವಕವಾಗಿ ಹರಿಸಿರುವರು ಇದೆಲ್ಲರ ಫಲವಾಗಿ ಮುಂಬಯಿ, ಮದ್ರಾಸ ಕಾಯದೇ ಮಂಡಳಿಗಳೆಲ್ಲಿಯ ಕಾಂಗ್ರೆಸ್ ಮತ್ತು ಇಂದಿನ ಪಕ್ಷಗಳು ನಮ್ಮ ಬೇಡಿಕೆಗೆ ಬೆಂಬಲ ಕೊಡುವವೆಂದು ಅಶ್ವಾಸನವಿತ್ತಿದ್ದಾರೆ ಇದೇ ತಿಂಗಳ ಕೊನೆಯ ವಾರದಲ್ಲಿ ಕಲ್ಕತ್ತಾದಲ್ಲಿ ಕೂಡುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಾದರೂ ಏಕೀಕರಣದ ಬೇಡಿಕೆಗೆ ಮನ್ನಣೆ ಕೊಡುವರೆಂದು ನಮಗೆ ಪೂರ್ಣ ವಿಶ್ವಾಸವಿದೆ

ಇನ್ನು ಮುಂದೆ ಮಾಡಬೇಕಾದ ಕಾರ್ಯ

ಏಕೀಕರಣದ ಆಂದೋಲನವನ್ನು ನಾವು ಇದಕ್ಕೂ ಹೆಚ್ಚು ಜೋರಿನಿಂದ ಸಾಗಿಸಬೇಕಾಗಿದೆ ಮುಂಬಯಿ ಮತ್ತು ಮದ್ರಾಸ ಕಾಯದೇ ಮಂಡಲಗಳಲ್ಲಿ ಈ ವಿಷಯವು ಚರ್ಚೆಗೆ ಹೊರಡುವ ಮೊದಲೇ ನಮ್ಮ ಆಂದೋಲನದ ತೀವ್ರತೆಯನ್ನು ಸ್ಪಷ್ಟವಾಗಿ ಕಾಣಿಸಿಕೊಡಬೇಕಾಗಿದೆ ಆದುದರಿಂದ ಇನ್ನೆರಡು ತಿಂಗಳುಗಳೊಳಗಾಗಿ ಅಂದರೆ ದಿಸೆಂಬರ ತಿಂಗಳಲ್ಲಿ ಮುಂಬಯಿ ಕಾಯದೇ ಮಂಡಳದ ಅಧಿವೇಶನವು ಪ್ರಾರಂಭವಾಗುವುದರೊಳಗಾಗಿಯೇ ಕೆಳಗೆ ಕಾಣಿಸಿದಂತೆ ನಾವು ಕಾರ್ಯವನ್ನು ಕೈಕೊಳ್ಳುವುದು ಅವಶ್ಯವಿದೆ.

೧ ಏಕೀಕರಣದ ಬೇಡಿಕೆಯ ಪತ್ರಿಕೆಗಳಿಗೆ ಕನಿಷ್ಟಪಕ್ಷ ಒಂದು ಲಕ್ಷ ಸಹಿಗಳನ್ನಾದರೂ ಕಲೆಹಾಕುವದು

೨ ಏಕೀಕರಣ ಸಂಘದ ಕನಿಷ್ಟಪಕ್ಷಕ್ಕೆ ಒಂದು ನೂರು ಶಾಖೆಗಳನ್ನಾದರೂ ಸ್ಥಾಪಿಸುವುದು

೩ ಅಖಿಲ ಕರ್ನಾಟಕ ಏಕೀಕರಣ ಸಂಘಕ್ಕೆ ಅಯಾ ಶಾಖೆಗಳ ಮುಖಾಂತರ ಇಲ್ಲವೆ ವೃತ್ಯೇಕವಾಗಿ ನಾಲ್ಕಾಣೆಯ ಸದಸ್ಯರನ್ನು ಮಾಡುವದು

೪ ಕರ್ನಾಟಕದ ಎಲ್ಲ ಸಂಘ ಸಂಸ್ಥೆಗಳು ಏಕೀಕರಣದ ಗೊತ್ತುವಳಿಯನ್ನು ಪಾಸು ಮಾಡಿ ಮುಂಬಯಿ ಮದ್ರಾಸು ಸರಕಾರಗಳಿಗೆ ಕಳಿಸುವುದು

೫. ಕರ್ನಾಟಕದಲ್ಲಿಯ ಸುಸಂಘಟಿತ ಸಂಸ್ಥೆಗಳಾದ, ಲೋಕಲ್ ಬೋರ್ಡು, ಮುನಿಸಿಪಾಲಿಟಿ, ಗ್ರಾಮಸಂಚಾಯತಿ, ಲಾಯಬ್ರರಿ, ಸಹಕಾರಿ ಸಂಘ, ಕರ್ನಾಟಕ ಸಂಘ ಮೊದಲಾದವುಗಳಲ್ಲಿ ಏಕೀಕರಣದ ಗೊತ್ತುವಳಿಗಳನ್ನು ಸ್ವೀಕರಿಸಿ ಸರಕಾರಕ್ಕೆ ಕಳಿಸುವುದು.

೬ ಏಕೀಕರಣದ ಕಾರ್ಯವನ್ನು ಸಾಗಿಸಲು ಹಣ ಕೂಡಿಸಿ ಏಕೀಕರಣ ಸಂಘಕ್ಕೆ ಕಳಿಸುವದು. ಧನಿಕರು ವೈಕ್ತಿಕವಾಗಿ ಕಾಣಿಕೆಯನ್ನು ಸಂಘಕ್ಕೆ ಕಳಿಸಬಹುದು.

ಬೆಂಗಳೂರಿನಲ್ಲಿ ನಿರ್ಮಾನರ ದಸ್ತಗಿರಿ

ಕುದಿಪಾರು ಮದ್ರಾಸು ಕಡೆಗೆ -

ಪೋಲೀಸರು ಗುಂಡುಹಾರಿಸಿದರು! ೬೦ ಮಂದಿಯನ್ನು ಅಸ್ಪತ್ರೆಗೊಯ್ಯಲಾಗಿದೆ!

ಶಾಲಾ ವಿದ್ಯಾರ್ಥಿಗಳ ಮುಷ್ಕರ.

ಬೆಂಗಳೂರು, ೨೪

ಬೊಂಬಾಯಿಯ ಕೊಂಗ್ರೆಸ್ ಧುರೀಣರಾದ ಶ್ರೀ। ನರಿಮಾನರು, ಬೆಂಗಳೂರಿನ ಜಿಲ್ಲಾಧಿಕಾರಿಗಳು ಕೊಟ್ಟ ಹುಕುಮಿಗೆ ವಿರುದ್ಧವಾಗಿ ಬನ್ನಪ್ಪಾ ಪಾರ್ಕಿನಲ್ಲಿ ೧೦ ಸಾವಿರ ಮಂದಿ



ಶ್ರೀ। ನರಿಮಾನರು

ಯುವಕರ ಸಭೆಯಲ್ಲಿ ಭಾಷಣ ಮಾಡಿದ ಬಗ್ಗೆ ಮೈಸೂರು ಪೋಲೀಸ ಅಧಿಕಾರಿಗಳಿಂದ ಕೈದು ಮಾಡಲ್ಪಟ್ಟಿರುವರು ಅವರ ದಸ್ತಗಿರಿಯಾಗುತ್ತಲೇ ಅಲ್ಲಿ ನೆರೆದ ಯುವಕರು ಕೋಲಾಹಲ ಎಬ್ಬಿಸಿದುದರಿಂದ, ಪೋಲೀಸರು ನೆರೆದ ಸಭೆಯನ್ನು ಚದರಿಸುವ ಬಗ್ಗೆ ಲಾಠಿ ಉಪಯೋಗಿಸಿ ತುಂಬಾ ಗಲಬೆಮುಂಟಾಯಿತು

ಬೆಂಗಳೂರು, ೨೫

ನಿನ್ನೆಯ ದಿವಸ ಶ್ರೀ। ನರಿಮಾನರನ್ನು ಕೈದ ಮಾಡಿದುದರಿಂದ, ಪಟ್ಟಣದಲ್ಲಿ ಹರತಾಳವನ್ನು ಆಚರಿಸಿದ್ದರು ಹೆಚ್ಚಿನ ಕಾಫಿ ಮತ್ತು ಊಟದ ಹೊಟೆಲುಗಳೂ ಇತರ ಅಂಗಡಿಗಳೂ ಮುಚ್ಚಲ್ಪಟ್ಟಿದುವು ಶಾಲಾ ವಿದ್ಯಾರ್ಥಿಗಳ ಮುಷ್ಕರದ ಪ್ರಸಂಗವು ಕರಿಣವಾಗಬಹುದಾಗಿ ಊಹಿಸಿ, ರಿಜರ್ವ್ ಪೋಲೀಸರ ದಳವು ಮೈಸೂರು ಬೇಂಕ ಸ್ಟೇಷನರಿ ಸಮೀಪ ನಿಲ್ಲಿಸಲ್ಪಟ್ಟಿತ್ತು ಸುಮಾರು ೧೧ ಘಂಟೆಗೆ ಕೆಲವು ವಿದ್ಯಾರ್ಥಿಗಳು ಕೂಡಿ ಇಂಟರಮಿಡಿಯೆಟ್ ಕೊಲೆಜಿಗೆ ಹೋಗಿ ಅಲ್ಲಿಯ ವಿದ್ಯಾರ್ಥಿಗಳಿಗೆ ಮುಷ್ಕರ ಹಿಡಿಯಬೇಕೆಂದು ಬೋಧಿಸಿದರು ಎಲ್ಲ ಹುಡುಗರು ಕೊಲೆಜಿನ ಬಟಾರದಲ್ಲಿ ಗುಂಪುಕೂಡಿದರು ದಾರಿಹೋಕರು ಕೂಡ ಅದರಲ್ಲಿ ಕೂಡಿಕೊಂಡರು ಕೊಲೆಜಿನ ಕ್ಲಾಸಿನ ಕಿಟಿಕಿಗಳಿಗೂ ಮತ್ತು ಒಳಗೂ ಕಲ್ಲುಗಳಿಂದ ಹೊಡೆಯಲು ಪ್ರಾರಂಭಿಸಿದರು ಈ ಅನರ್ಥವನ್ನು ನೋಡಿ ಕೊಲೆಜಿನ ಸುವರಿಂಟೆಂಡೆಂಟರು, ಪೋಲೀಸ ಅಧಿಕಾರಿಗಳನ್ನು ಬರ ಮಾಡಿಸಿದರು ಕೂಡಲೇ ರಿಜರ್ವ ಪೋಲೀಸಿನವರು ಬಂದು ಹುಡುಗರ ಗುಂಪನ್ನು ಚೆದರಿಸುವರೆ ಲಾಠಿಪ್ರಯೋಗ ಮಾಡಿದರು ಅನೇಕ ವಿದ್ಯಾರ್ಥಿಗಳಿಗೆ ಪೆಟ್ಟಾಯಿತು ರಿಜರ್ವ ಪೋಲೀಸರ ಲಾಠಿಗೆ ಕಲ್ಲುಗಳಿಂದ ಹೊಡೆದುದರ ವರಿಣಾಮವಾಗಿ ಕೆಲವು ಪೋಲೀಸರೂ ಗಾಯಗೊಂಡರು ಗಾಯಗೊಂಡ ಅನೇಕ ಹುಡುಗರನ್ನೂ ೧೨ ಮಂದಿ ಪೋಲೀಸಿನವರನ್ನೂ ಆಸ್ಪತ್ರೆಗೊಯ್ಯಲಾಯಿತು ಒಂದು ಗಂಟೆಯ ವರೆಗೆ ಸ್ವಲ್ಪ ಸಮಧಾನಗೊಂಡ ಗಲಭೆಯು ೧೫ ಘಂಟೆಗೆ ಪುನಃ ಉದ್ರೇಕವಾಯಿತು ಕೆಲವು ವಿದ್ಯಾರ್ಥಿಗಳು ಪೋಲೀಸ ವಹಿರಯ ಸಾಲನ್ನು ದಾಟಿ ನುಂಗಿಹಾಕಲು ಪ್ರಯತ್ನಪಟ್ಟರು ಪೋಲೀಸರು ಪುನಃ ಲಾಠಿಪ್ರಯೋಗ ಮಾಡಿದರು ಇದರಿಂದ ಕೂಡಿದವರೆಲ್ಲ ಉದ್ರೇಕಗೊಂಡು ಪೋಲೀಸರನ್ನು ಕಲ್ಲು ದೊಣ್ಣೆಗಳಿಂದ ಹೊಡಿಯಲು ಪ್ರಾರಂಭಿಸಿದರು ಈ ವಿಷಮ ಪರಿಸ್ಥಿತಿಯಲ್ಲಿ ಪೋಲೀಸರು ಗುಂಡುಹಾರಿಸಿದರು ಅನಂತರ ಕೆಲವು ಸಭ್ಯ ಮಹನೀಯರ ಮಧ್ಯಸ್ಥಿಕೆಯಿಂದ ಉದ್ರೇಕಗೊಂಡವರನ್ನು ಸಮಾಧಾನಪಡಿಸಿ, ಪೋಲೀಸರನ್ನು ಹಿಂದಕ್ಕೆ ಕಳುಹಿಸಲಾಯಿತಾಗಿ ತಿಳಿದುಬಂದಿದೆ ಅನಂತರ ಶಾಂತವಾಗಿದೆಯೆಂದು ತಿಳಿಯುತ್ತೇವೆ

ಬೆಂಗಳೂರಲ್ಲಿ ಮೈಸೂರು ಸರಕಾರದವರಿಂದ ಬಂಧಿಸಲ್ಪಟ್ಟ ಶ್ರೀ। ನರಿಮಾನರನ್ನು ಬಿಡುಗಡೆಮಾಡಿ ಮದರಾಸಿಗೆ ಕಳುಹಿಸಿರುವ ಖ್ಬರಿ

ಮದ್ರಾಸಿನ ಪ್ರಧಾನ ಸಚಿವರು

ಕಲ್ಕತ್ತದಲ್ಲಿ ಜರಗಲಿಕ್ಕಿರುವ ಅ ಭಾ ಕೊಂಗ್ರೆಸ್ ಸಮಿತಿಯ ಅಧಿವೇಶನಕ್ಕೆ ಮದ್ರಾಸು ಸರಕಾರದ ಮುಖ್ಯ ಸಚಿವರಾದ ಶ್ರೀ। ರಾಜಗೋಪಾಲಾಚಾರ್ಯರು, ದೇಹದಲ್ಲಿ ಸ್ವಲ್ಪ ಅಸ್ವಸ್ಥದಿಂದಿರುವುದರಿಂದ ಹೋಗುವುದಿಲ್ಲವೆಂದು ತಿಳಿದುಬರುತ್ತದೆ ಅವರು ಸ್ವಲ್ಪ ಸಮಯ ವಿಶ್ರಾಂತಿ ಪಡೆಯಬೇಕಾಗಿ ಡಾಕ್ಟರರು ಸೂಚಿಸಿರುವರು

ಕಲ್ಕತ್ತದಲ್ಲಿ ರಾಷ್ಟ್ರಪತಿ ನೆಹರೂಗಳು

ಅ ಭಾ ಕಾಂಗ್ರೆಸ್ ಸಮಿತಿಯ ಅಧಿವೇಶದ ಬಗ್ಗೆ, ರಾಷ್ಟ್ರಪತಿ ಜವಾಹರಲಾಲರು ಬೊಂಬಾಯಿ ಮೈಲಿನಲ್ಲಿ ಕಲ್ಕತ್ತಕ್ಕೆ ಬಂದಿರುವರು ಅವರನ್ನು ಶ್ರೀ। ಸುಭಾಸಚಂದ್ರ ಬೋಸರು ಅವರನ್ನು ಸ್ವಾಗತೀಕರಿಸುವುದಕ್ಕೆ ರೈಲ್ವೆ ಸ್ಟೇಶನಿಗೆ ಬಂದಿದ್ದರು ಅವರು ಕಲ್ಕತ್ತದಲ್ಲಿ ಸರತಚಂದ್ರಬೋಸ್ಕರ ಅತಿಥಿಗಳಾಗಿ ನಿಲ್ಲುವರೆಂದು ತಿಳಿದುಬಂದಿದೆ

ಲೋರ್ಡ್ ಚೆನ್ಸಿಸನ್ ರವರ ಕ್ರಿಕೆಟ್ ಟೀಮಿನವರು ಮುಂಬಾಯಿಗೆ ಬಂದು ತಲ್ಪಿದರು

ಹಿಂದುಸ್ಥಾನದಲ್ಲಿ ಕೆಲವು ಕ್ರಿಕೆಟ್ ಪಂದ್ಯಾವಳಿಗಳನ್ನು ಆಡುವರೆ ವಿಲಾಯತಿಯಿಂದ ಹೊರಟ ಲೋರ್ಡ ಚೆನ್ಸಿಸನ್ ಟೀಮಿನವರು ಕಾ. ೨೫ನೇ ದಿನ ಬೊಬ್ಬಾಯಿಯಲ್ಲಿ ಬಂದಿಳಿದರು. ಅದೇ ರಾತ್ರಿ ಟ್ರೈನಿನಲ್ಲಿ ಅವರು ಬರೋಡಕ್ಕೆ ಹೋಗಿ ಕಾ. ೩೦ರಲ್ಲಿ ಅವರು ಬರೋಡದಲ್ಲಿ ಅವರ ಮೊದಲನೇ ಕ್ರಿಕೆಟ್ ಪಂದ್ಯಾವಳಿ ನಡೆಯುವುದು

ಉದರದೊಳಗ ವಾಯು

ಉದರದೊಳಗೆ ವಾಯು ಉಂಟಾಗುವುದು, ಅಜೀರ್ಣಾವಸ್ಥೆಯಿಂದವೆಂದಾಮಿಸುವೆ, ಈ ಸಂಕಟವನ್ನು ಅತಿ ಬೇಗನೆ ಗುಣವಡಿಸಬಹುದು. ವಾಯುರೋಗದ ನೋವನ್ನು ನಿವಾರಿಸಬಹುದು. ಹೊಟ್ಟೆಯೊಳಗೆ ವಾಯು ಉಂಟಾಗುವುದರಿಂದ, ಹೊಟ್ಟೆಯು ತುಂಬಿದ ಭಾವವು ನಮ್ಮಲ್ಲಿ ಉಂಟಾಗುವುದು ಅಜೀರ್ಣದಿಂದಲೂ, ಹೊಟ್ಟೆಯೊಳಗೆ ಜೀರ್ಣರಸಗಳು ಅತಿರೇಖವಾಗಿ ಉಂಟಾಗುವುದರಿಂದಲೂ ವಾಯು ಉಂಟಾಗುವುದು ಹೊಟ್ಟೆಯಲ್ಲಿ ಅತಿರೇಖವಾಗಿ ಜೀರ್ಣರಸಗಳು ಉಂಟಾಗದಂತೆ ಏನಾಗಬೇಕು, ಇದನ್ನು ನೀವು ಮುಖ್ಯವಾಗಿ ತಿಳಿಕೊಳ್ಳಬೇಕು ಆಲ್ಕೇಲಿಯನ್ನು ಹೊಟ್ಟೆಯೊಳಗೆ ಸೇರಿಸಿದರೆ, ಅದು ಹೊಟ್ಟೆಯೊಳಗೆ ಉಂಟಾಗುವ ಜೀರ್ಣ ಆಸಿಡ್‌ಗಳನ್ನು ಕಡಿಮೆ ಮಾಡುವುದು ಹೊಟ್ಟೆಯೊಳಗೆ ಜಾಸ್ತಿ ಆಸಿಡ್ ಉಂಟಾಗುವುದನ್ನು ಗುಣವಡಿಸಲು, ಆಲ್ಕೆಲಿ ಚಿಕಿತ್ಸೆಯೆ ಶ್ರೇಷ್ಠವಾದುದು

ಮೆಕ್ಲೀನ್ ಬ್ರೇಂಡ್ ಸ್ವೋಮಕ್ ಪೌಡರು, ಅವಾಯವಿಲ್ಲದ ಅತ್ಯಂತ ಗುಣಕಾರಿ ಆಲ್ಕೆಲಿ ಹುಡಿಯು ಅದು ಹೊಟ್ಟೆಯಲ್ಲಿರುವ ಆಸಿಡ್‌ಗಳೊಡಲೆ ಹದವನ್ನೊಡುತ್ತವೆ ನೀವು ಕೂಡಲೆ ಮಹಾ ಉಪಶಮನವನ್ನು ಅನುಭವಿಸುವಿರಿ ಹೊಟ್ಟೆ ಡುಬ್ಬಾಗಿರುವ ವಾಯು ಭಾವನೆ ಕೂಡಲೆ ಮಾಯವಾಗುವುದು ಹೊಟ್ಟೆಯು ಹಗುರವಾಗಿ ಅತ್ಯಂತ ಸುಖಕರವೆನಿಸುವುದು, ವಾಯುವು ನಿಶಿತ್ಯ ರೀತಿಯಲ್ಲಿ ಮಾಯವಾಗುವುದು

ವಾಯುವನ್ನು ಅನುಭವಿಸುವವರು ಕೃಮುಪ್ರಕಾರವಾಗಿ ಮೆಕ್ಲೀನ್ ಬ್ರೇಂಡ್ ಸ್ವೋಮಕ್ ಪೌಡರನ್ನು ಸೇವಿಸಬೇಕು ಅದರಿಂದ ಕೂಡಲೆ ಗುಣವಾಗುವುದು ಇದು ಒಂದೆ ಕಾರಣವಲ್ಲ, ಇದಕ್ಕೆ ಇನ್ನೊಂದು ಮುಖ್ಯವಾದ ಕಾರಣವಿದೆ,

ಈ ವಾಯುವಿನ ಸರ್ಜಕ್ಷವಾದರೆ ಅದರಿಂದ ಮಹಾ ಉದಡೋಗಗಳು ವರಿಣಮಿಸುವವು- ಹೊಟ್ಟೆಯೊಳಗೆ ಕುರುಹು ಇತ್ಯಾದಿಗಳು ಉಂಟಾಗುವವು ಈ ಅಪಾಯಗಳಿಂದ ಸುರಕ್ಷಿತವಾಗಲು ವಾಯುರೋಗ ಪೀಡಿತನು ಪ್ರಯತ್ನ ಪಡಲೆ ಬೇಕು ಮೆಕ್‌ಲೀನ್ ಪೌಡರ್‌ನಿಂದ ಹೊಟ್ಟೆಯು ನರ್ಮಲವಾಗುವುದಲ್ಲದೆ, ಹೊಟ್ಟೆಯೊಳಗಿನ ಅಸಿಡು ಕಡಿಮೆಯಾಗಿ, ಕುರುಗಳುಂಟಾಗಲಿಕ್ಕೆ ಅವ್ಕಾಶ ದೊರಕದು ಮೆಕ್‌ಲೀನ್ ಬ್ರೇಂಡ್ ಪೌಡರನ್ನು ಕ್ರಮವಾಗಿ ಸೇವಿಸಿರಿ ನಿಮಗೆ ಖಾತ್ರಿ ಮಷ್ಟಾಲು ದೊರಕುವುದೆಂತೆ

Alex. C. Madan

ಎಂಬ ಸಹಿಯ ಕೆಂಪು ಮುದ್ರೆಯ ಳ ಟೀಸೆಯನ್ನೇ ಕೊಳ್ಳಿರಿ ಇಂತಹ ನಮೂನೆಯ ಕಡಿಮೆ ದರದ ಪ್ರತಿಕೀಯ ಬ್ಯಾಲ್ಸ್ಯು ಪಡೆದು ತೋಸಹೋಗದೇಡಿ ಇದುಟಿಲ್ಲದೆಯಾಗಿರುವುದಿಲ್ಲ ಟೀಸೆಗಳಲ್ಲೂ ಪೊಟ್ಟಣಗಳಲ್ಲೂ ದೊರಲ್ಲುತ್ತವೆ

ಸ್ಥಳೀಯ ಕಮಿಸ್ಶನರಿಂದ ಅಥವಾ ಸ್ವೋರುಗಳಿಂದ ಪಡೆಯಲು ಇಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಖರೀಯಿಂ -

ಜೆ ಎಲ್ ಮೊರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್
ಫ್ಲಿಂಡಾರ್ಸ್ ಬಿಲ್ಡಿಂಗ್ ಹ್ಯೂಸ್ ರೋಡ್ ಮುಂಬಾಯಿ



S No. 65.

ತುಸು ವಿನೋದ

ಉಪಾಧ್ಯಾಯ: ನಿನಗೆ ಇಷ್ಟರ ವರೆಗೆ ದೊರೆತ ಪುಸ್ತಕಗಳಲ್ಲಿ ಅತ್ಯಂತ ಉಪಯುಕ್ತವಾದ ಪುಸ್ತಕ ಯಾವುದೊ?

ಶಾಮು. 'ನನ್ನ ತಂದೆಯ ಚೆಕ್ ಪುಸ್ತಕ ಸರ್'

ಹಣಕ್ಕಾಗಿ ಮಗನ ಕೊಲೆ!

ಗವರ್ನರ ದೂರಿಗಳಿಗೆ ಜಮೀನುದಾರರ ಮೊರೆ

ರತ್ನಗಿರಿಯಲ್ಲಿ ಗಣಪತಿ ಸಖಾರಾಮ ಸಾಠಿ ಎಂಬೊಬ್ಬ ೬೫ ವರ್ಷ ಪ್ರಾಯದ ಮುದುಕ ಆತನಿಗೆ ಭುವಾ ಎಂಬ ೨೨ ವರ್ಷದ ಮೆಗನು ಮಗನು ತನ್ನ ಜೀವದ ಮೇಲೆ ೨ ಸಾವಿರದ ವಿಮೆಯನ್ನು ಕಳೆದ ಫೆಬ್ರವರಿಯಲ್ಲಿ ಇಳಿಸಿದ್ದನು ಮಾರ್ಚಿಯಲ್ಲಿ ತಂದೆಯು ಬಂದು ದೊಣ್ಣೆಯಿಂದ ಮಗನ ತಲೆ ಹೊಡೆದು ಆತನನ್ನು ಕೊಂದನು ಮತ್ತು ಆತನು ಒಂದು ಅವಘಡದಿಂದಾಗಿ ಸತ್ತನೆಂದು ಪೋಲಿಸರಿಗೆ ತಿಳಿಸಿದನು ಪೋಲಿಸರಿಗೆ ಅನುಮಾನವಾಗಿ ಅವರು ಸಖಾರಾಮನನ್ನು ಕೈದು ಮಾಡಿದರು ಕೋರ್ಟಿನಲ್ಲಿ ಆತನ ಹೆಂಡತಿಯು, ತನ್ನ ಪತಿಯು ಮಗನನ್ನು ಧೊಣ್ಣೆಯಿಂದ ಹೊಡೆದುದನ್ನು ತಾನು ಕಣ್ಣಾರೆ ಕಂಡೆನೆಂದು ಸಾಕ್ಷಿ ಹೇಳಿದಳು ಅವರಾಧಿಗೆ ಘಾತಿ ಶಿಕ್ಷೆ ವಿಧಿಸಲಾಗಿದೆ

ಹಾಲಿನ ಬದಲಾಗಿ ಕುಂಬಳಕಾಯಿಯ ರಸ

ಜರ್ಮನಿಯ ರಸಾಯನ ಶಾಸ್ತ್ರಜ್ಞರು ಅದೊಂದು ಸಂಶೋಧನೆಯು ಫಲತಾಂಶವಾಗಿ ಹಾಲಿನ ಬದಲು ಕುಂಬಳಕಾಯಿಯ ರಸವನ್ನು ಉಪಯೋಗಿಸಬಹುದಾಗಿದೆ

ಕುಂಬಳಕಾಯಿಯ ಸಿಪ್ಪೆಗೆದ ತಂಡು ಮಾಡಿ ರಸ ಹಿಂಡಿ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಕೆಡದಂತೆ ಭದ್ರವಾಗಿಡಬಹುದಂತೆ

ಆಹಾರ ವೈಶಿಷ್ಟ್ಯ ದೃಷ್ಟಿಯಿಂದ ಈ ರಸ ಸಾರವು ಯಾವ ವಿಧದಲ್ಲಿ ಹಾಲಿನ ಸಮಾನತೆಗೆ ಬರುವುದೆಂದು ತಿಳಿದುಬರ ವುದಿಲ

ಸೊಳ್ಳೆಗಳ ಕಾಟವನ್ನು ತಪ್ಪಿಸಲು ಮೊಲಗಳ ಪ್ರಯೋಜನ

ಸೊಳ್ಳೆಗಳ ಕಾಟವನ್ನು ತಪ್ಪಿಸಲು ಬೆಳ್ಳೆಯಮಿನ ಕಾರ್ಟ್ ಮೆಟರ್ಲಿಂಕ್ ಎಂಬವರು ಒಂದು ಸುಲಭೋಪಾಯವನ್ನು ಕಂಡುಹಿಡಿದಿರುವರು

ಮನುಷ್ಯನ ರಕ್ತಕ್ಕಿಂತ ಮೊಲದ ರಕ್ತವನ್ನು ಸೊಳ್ಳೆಗಳ ಹೆಚ್ಚಿಗೆ ಪ್ರೀತಿಸುವುದಂತೆ ಆದ ದರಿಂದ ಸೊಳ್ಳೆಗಳ ಕಾಟದಿಂದ ತಪ್ಪಿಸಿಕೊಳ್ಳಬೇಕೆಂದಿದ್ದವರು ತಮ್ಮ ಶಯನಗೃಹದಲ್ಲಿ ಒಂದು ಮೊಲವನ್ನು ಕಟ್ಟಿಹಾಕಿದರಾಯಿತು ಎಲ್ಲಾ ಸೊಳ್ಳೆಗಳು ಹೋಗಿ ಆ ಮೊಲವನ್ನು ಕಚ್ಚತೊಡಗುವುವು ಮನುಷ್ಯನಿಗೆ ಸುಖನಿದ್ರೆಯಾಗ ವುದು. ಸೊಳ್ಳೆಗಳ ಕಡಿತವು ಮೊಲಕ್ಕೆ ತಾಗುವುದಿಲ್ಲವಾದುದರಿಂದ ಅದಕ್ಕೂ ಯಾವ ತರದ ತೊಂದರೆಯಾಗುವಂತಿಲ್ಲ

ನಿದ್ರೆ ಬರುವಂತೆ ಮಾಡುವ ಗಾಜಿನ ಬೋಂಬು

ಅಮೇರಿಕದಲ್ಲಿ ನ್ಯೂಯೋರ್ಕಿನ ರಸಾಯನ ಶಾಸ್ತ್ರಜ್ಞರು ನಿದ್ರೆ ಬರುವಂತೆ ಮಾಡುವ ಅದೊಂದು ಬಗೆಯ ಅನಿಲವನ್ನು (gas) ಕಂಡು ಹಿಡಿದಿದ್ದಾರೆ ಅದಕ್ಕೆ ಎಥಿಟೆಲ್ ಕೊಲೀನ್ ಎಂದು ಇದರ ಹೆಸರು ಸಣ್ಣ ಸಣ್ಣ ಗಾಜಿನ ಚೆಂಡುಗಳಲ್ಲಿ ಇದನ್ನು ತುಂಬಿಸಿ, ಅಂತಹ ಚೆಂಡುಗಳನ್ನೇಕವನ್ನು ಸೇರಿಸಿ ಬೋಂಬುಗಳನ್ನು ತಯಾರಿಸುವರು. ಈ ಬೋಂಬುಗಳನ್ನು ಬಿಸುಟಿದಾಗ ಅವುಗಳಲ್ಲಿದ್ದ ಸಣ್ಣ ಸಣ್ಣ ಗಾಜಿನ ತುಂಡುಗಳು ಸಿಡಿದು ಅವುಗಳಲ್ಲಿದ್ದ ಅನಿಲವು ಮನುಷ್ಯನ ದೇಹವನ್ನು ಪ್ರವೇಶಿಸುವುದು. ಒಡನೆ ಆತನಿಗೆ ನಿದ್ರೆ ಬಂದು ಅನೇಕ ಗಂಟೆಗಳ ನಂತರ ಆತನಿಗೆ ಎಚ್ಚರವಾಗುವುದು.

ಮುಡಾಫರ ಪುರದಲ್ಲಿ ಜಮೀನುದಾರರ ಪರಿಷತ್ತೊಂದು ಜರಗಿತು ಅವರು ಸರಕಾರ್ತಿನ ಸಮಾರಂಭಗಳ ಅಂತ್ಯದಲ್ಲಿ ಬಿಹಾರಿನ ಗವರ್ನರರಿಗೆ ತಂತಿಮೂಲಕ ಈ ಕೆಳಗಿನ ವಿನಂತಿಯನ್ನು ಕಳುಹಿಸಿದರು

"ಮುಜಾಫರ ಪುರದಲ್ಲಿ ನೆರೆದ ಸುಮಾರು ೪೦೦೦ ಜಮೀನುದಾರರು, ಕೊಂಗ್ರೆಸ್ಸಿನವರು ಬೇಸಾಯದುತ್ಪತ್ತಿಯ ಮೇಲೆ ತಿರಿಗೆಯನ್ನು ಹೊರಿಸಲಿರುವ ರೈತವಾರಿ ಕಾನೂನಿನ ಕುರಿತು ಬಹಳ ಚಿಂತೆಗೆ ಒಳಪಟ್ಟಿರುವರು ಈ ವಿಷಯದಲ್ಲಿ ತಾವು ಮಧ್ಯಸ್ಥಿಕೆಯನ್ನು ವಹಿಸಿ, ಜಮೀನುದಾರರ ನ್ಯಾಯಸಮ್ಮತವಾದ ಹಕ್ಕು ಬಾಧ್ಯತೆಗಳನ್ನು ಕಾಪಾಡಬೇಕಾಗಿ ಬೇಡುತ್ತೇನೆ"

ಇದೇ ರೀತಿಯಲ್ಲಿ ಮುಖ್ಯಮಂತ್ರಿಗಳಿಗೂ ಒಂದು ತಂತಿವರ್ತಮಾನವು ಕಳುಹಿಸಲಾಗಿದೆ

ಪೋಸ್ಟ್‌ಮಾಸ್ತರರ ದಸ್ತಗಿರಿ

ಸಿಯಾಲ್ ಕೋರ್ಟ್‌ನಲ್ಲಿ ಇದ್ದೊಂದು ಖೂರಿನ ಪೋಸ್ಟ್‌ಮಾಸ್ತರರಾದ ಗುರಾಂದಿತ್ತ ಎಂಬವರು ೩೦,೦೦೦ ಸಾವಿರ ರೂಪಾಯಿಗಳನ್ನು ಒಳಗೆ ಹಾಕಿರುವರೆಂಬ ಆಪಾದನೆಯ ಮೇಲೆ ಕೈದು ಮಾಡಲ್ಪಟ್ಟಿರುವರು ಕೈದು ಮಾಡಲ್ಪಡುವ ಮೊದಲು ಅವರು ರಜೆಯ ಮೇಲಿದ್ದರು ಈ ಸಮಯದಲ್ಲಿ ಪೋಸ್ಟಾಫೀಸಿನಲ್ಲಿ ಹಣವಿಟ್ಟಿವರೊಬ್ಬರು ಅಲ್ಲಿಗೆ ಹೋಗಿ ನೋಡಲು ತಮ್ಮ ಪಾಸ್ ಪುಸ್ತಕದಲ್ಲಿದ್ದ ಹಣದ ಸಂಖ್ಯೆಯೂ ಆಫೀಸಿನಲ್ಲಿದ್ದ ಪುಸ್ತಕದಲ್ಲಿದ್ದ ಹಣದ ಸಂಖ್ಯೆಯೂ ಸರಿಯಿಲ್ಲವೆಂದು ಅವರಿಗೆ ತಿಳಿದ ಬಂತು ಒಡನೆ ನಿಜಾರಣೆ ನಡೆಯಿತು ರಜೆಯ ಮೇಲಿದ್ದ ಪೋಸ್ಟ್‌ಮಾಸ್ತರರು ರಜೆ ಮುಗಿದೊಡನೆ ಬರಲು ಕಡೆಗೆ ನೋಡಲು ೩೦೦೦ ರೂಪಾಯಿಗಳು ಇಲ್ಲವೆಂದು ತಿಳಿದು ಬಂತು

ವಾಣಿಜ್ಯ ಸಂಘದವರ ವರ್ತನೆ—ಹಿಂದೂ ಪ್ರತಿನಿಧಿಗಳ ಅಸಂತುಷ್ಟಿ

ಹಿಂದೂ ಐರೋಪ್ಯ ವಾಣಿಜ್ಯ ಸಂಬಂಧ ಮಾತುಕತೆಗಳಿಗಾಗಿ ಹಿಂದೂದೇಶದಿಂದ ಪ್ರತಿನಿಧಿಗಳು ಹೋಗಿದ್ದರಷ್ಟೆ ಅವರು ಮೂರು ತಿಂಗಳಿಗಿಂತ ಮಿಕ್ಕಾದ ಅವಧಿ ವರೆಗೆ ಇಂಗ್ಲಾಂಡಿನಲ್ಲಿದ್ದು ಮಾಡಿದ ಪ್ರಯತ್ನಗಳ ಫಲವಾಗಿ ವಾಣಿಜ್ಯ ಸಂಘ (ಬೋರ್ಡು ಒಫ್ ಟ್ರೇಡ್) ದವರ ಅಧೀನ ಅವರೂವ ವರ್ತನೆಯು ಬಯಲಿಗೆ ಬಂದಿದೆ ಇದರಿಂದಾಗಿ ಹಿಂದೂ ಪ್ರತಿನಿಧಿಗಳು ಅಸಂತುಷ್ಟಿಯನ್ನು ಕೋರಿಸಿರುವರು

ಖಾಧಿಯೂವಾಡದಲ್ಲಿ ಹರಿಜನರಿಗೆ ಪ್ರೋತ್ಸಾಹ

ಹರಿಜನ ಸೇವಕಾ ಸಂಘದ ಹಂಗಾಮಿ ಕಾರ್ಯದರ್ಶಿಗಳಾದ ಶ್ರೀಮತಿ ರಾಮೇಶ್ವರೀ ನೆಹರೂ ಮತ್ತು ಶ್ರೀಯುತ ಎ. ವಿ. ಥಕ್ಕರವರೂ ಕಾಥಿಯೂವಾಡದ ಪ್ರವಾಸವನ್ನು ಮುಗಿಸಿರುವರು. ವಾಂಕವರಿನ ಮಹಾರಾಜರು ಹರಿಜನರಿಗೆ ಬಾವಿಗಳಿಂದ ನೀರು ಸೇದುವ ಮತ್ತು ದೇವಾಲಯಗಳಿಗೆ ಪ್ರವೇಶಿಸುವ ಹಕ್ಕನ್ನು ಕೊಡುವ ಯೋಚನೆಯನ್ನು ಮಾಡುವೆನೆಂದು ತಾಗಿ ಅವರಿಗೆ ವಚನಕೊಟ್ಟಿರುವರು. ಪೊರ್ಬಂದರಿನಲ್ಲಿ ದಿವಾನರೂ ಕೂಡ ಸಂಸ್ಥಾನಿಗರ ಅಭಿಪ್ರಾಯ ತಿಳಿದು ಹರಿಜನ ಸೇವಕ ಸಂಘದ ಕಾರ್ಯಕ್ರಮಗಳಿಗೆ ಕಟ್ಟಿಂದಾಜಿ ಬೆಂಬಲ ವನ್ನು ಕೊಡುವೆನೆಂಬುದಾಗಿಯೂ ಭರವಸೆ ಯನ್ನು ಕೊಟ್ಟಿರುವರಂತೆ.

೧೪ ಮಂದಿ ಗಲ್ಲಿಗೇರಿಸಲ್ಪಟ್ಟರು!

ಶಿಕ್ಷಿತ ನಿರುದ್ಯೋಗಿಗಳಿಗೆ ಧನಸಹಾಯ.

ರಷ್ಯದ ಮೆತ್ತು ಕೆಂಪು ಸೈನ್ಯದ ಆಹಾರ ಸಾಮಗ್ರಿಗಳನ್ನು ನಾಶಗೊಳಿಸಿದುದಕ್ಕಾಗಿ ೧೪ ಮಂದಿ ಗಲ್ಲಿಗೇರಿಸಲ್ಪಟ್ಟಿರುವರು ಇವರಲ್ಲಿ ಧಾನ್ಯ ಸಂಘದ ಐದು ಮಂದಿ ಅಧಿಕಾರಿಗಳೂ ಇರುವರು.

ಅವರಾಧಿಗಳು ತಾವು ಸಾವಿರಾರು ಟನ್ ಧಾನ್ಯಕ್ಕೆ ಇತರ ಹಾಳು ಪದಾರ್ಥಗಳನ್ನು ಕನ್ನಡಿಯ ಚೂರನ್ನೂ ಬೆರೆಸಿರುವುದಾಗಿ ಒಪ್ಪಿರುವರು

ಪೋಲೇಂಡಿ ಮತ್ತು ಜಪಾನಿನ ಹೇಳಿಕೆಯ ಮೇರೆಗೆ ರಷ್ಯದ ರೈಲುಮಾರ್ಗವನ್ನು ಹಾಳುಮಾಡಿದುದಕ್ಕಾಗಿ ೯ ಜನರು ಸೈಬೀರಿಯ ಕೋಪಾಗ್ನಿಗೆ ಬಲಿಯಾಗಿರುವರು

ಮಲಯಾದೇಶದಲ್ಲಿ ಖಾದಿಪ್ರಚಾರ

ಕುವಲಾಲಂಪುರಿನಲ್ಲಿ ವಾಸಿಸುವ ಹಿಂದೂ ನಿವಾಸಿಗಳು ಖಾದಿಕೊಳ್ಳುವರೆಂದು ಒಂದು ಸಂಘವನ್ನು ಸ್ಥಾಪಿಸಿರುವರು. ೨೫೦ ಮಂದಿಗಳು ಸುಮಾರು ೩೧೦೦ ರೂಪಾಯಿ ಬೆಲೆ ಬಾಳುವ ಖದ್ದರನ್ನು ದೀಪಾವಳಿ ಹಬ್ಬದ ಮುಂಚಿತವಾಗಿಯೇ ವಿದ್ಯಾಸಿ ಂದ ತರಿಸಲು ನಿರ್ಧರಿಸಿರುವರು ಖಾದಿಯನ್ನು ಇವರು ನೆಟ್ಟಿಗೆ ಎಣಿಸಿ ಯಿಂದಲೇ ಕೊಂಡುಕೊಳ್ಳುವರು

ಇದಲ್ಲದೆ ಈ ಸಂಘವು ಮಲಯದ ಎಲ್ಲೆಡೆಗಳಲ್ಲಿ ಖಾದಿಭಂಡಾರಗಳನ್ನು ಸ್ಥಾಪಿಸಿ ಆಗಾಗ್ಗೆ ಖಾದಿಪ್ರದರ್ಶನಗಳನ್ನೇರ್ಪಡಿಸಿ ಜನರಲ್ಲಿ ಖಾದಿಪ್ರೇಮವನ್ನು ಬೀರಲು ನಿಶ್ಚಯಿಸಿರುವರ

ಎಮ್ ಎಲ್ ಎ ಗಳ ಅಸಮಾಧಾನ

ಬ್ರಿಟಿಷರು ಪೆಲೆಸ್ತೀನಿಲ್ಲಿ ಅನುಸರಿಸುತ್ತಿರುವ ನೀತಿಯ ಕರಿತ ಅಸಮ್ಮತಿಯನ್ನು ಸೂಚಿಸಿ ಕೇಂದ್ರ ನ್ಯಾಯ ವಿಧಾಯಕ ಸಭೆಯ ಅನೇಕ ಮಂದಿ ಮಹಮ್ಮದೀಯ ಎಮ್ ಎಲ್ ಎ ಗಳು ಒಂದು ವಿನತಿ ಪತ್ರವನ್ನು ಬಿಟಿಷ್ ಮುಖ್ಯ ಪ್ರಧಾನರಿಗೆ ಕೇಬಲ್ ಮೂಲಕ ಕಳುಹಿಸಿರುವರ

ಶಿಕ್ಷಿತ ನಿರುದ್ಯೋಗಿಗಳುಸ್ವಾವಲಂಬಿಗಳಾಗಿ ವ್ಯಾಪಾರೋದ್ಯಮಕಾರ್ಯಗಳನ್ನು ನಡೆಯಲು ಧನ ಸಹಾಯವನ್ನು ಕೋರಿದರೆ, ಅವರ ಅರ್ಜಿಗಳನ್ನು ಸ್ವೀಕರಿಸುವಂತೆ ಸಂಯುಕ್ತ ಪ್ರಾಂತ್ಯದ ಸರಕಾರದವರು ನಿಶ್ಚಯಿಸಿರುವರು

ನಿರುದ್ಯೋಗಿಗಳ ಒಂದು ವರ್ಗದವು ಅಕ್ಟೋಬರ ೧೫ರಲ್ಲು ಡಿಪಲಸ್ಟೆಂಟ್ ಮಂತ್ರಿಗಳಾದ ಡಾ। ಕಟ್ಜುಯವರನ್ನು ಕಂಡರು

ರಾಷ್ಟ್ರೀಯ ವೈದ್ಯಕೀಯ ಶಾಸ್ತ್ರದ ಕುರಿತು ಜವಾಹರಲಾಲರ ಮತ

ನಂಗಾಲದೇವಾಲ ಎಂಬ ಹಳ್ಳಿಯಿಂದ ದಿಲ್ಲಿಗೆ ಹೋಗುವ ಹಾದಿಯಲ್ಲಿ ಟಿಬಿಯಾ ವಿಶ್ವವಿದ್ಯಾಲಯದ ನಿರ್ದ್ಯಾರ್ಥಿಗಳು ಪಂಡಿತ ಜವಾಹರಲಾಲರಿಗೊಂದು ಸೂಚನಪತ್ರವನ್ನು ಸಮರ್ಪಿಸಿದರು ಅದರಲ್ಲಿ ಅವರು ಕಮಲಾ ನೆಹರು ಸ್ಮಾರಕ ಆಸ್ಪತ್ರೆಯಲ್ಲಿ ಯುನಾನಿ ಮತ್ತು ಆಯುರ್ವೇದ ಚಿಕಿತ್ಸೆಗೆ ಸ್ಥಾನವನ್ನು ಕೊಡಬೇಕೆಂದು ಕೇಳಿಕೊಂಡಿದ್ದರು

ಪಂಡಿತಜಿಯವರು ಹಾಗೆ ಮಾಡಲು ಸಾಧ್ಯವಿಲ್ಲವೆಂದು ಹೇಳಿ, ಎಲ್ಲೂ ವೈಕಿಕ ಚಿಕಿತ್ಸಾ ಕ್ರಮವೇ ಎಲ್ಲದಕ್ಕಿಂತ ಶ್ರೇಷ್ಠವಾದುದರಿಂದ ಅದೊಂದಕ್ಕೇ ಸ್ಥಾನಕೊಡಲಾಗುವುದೆಂದು ಬಯಲು ಪಡಿಸಿದರು

ರಾಷ್ಟ್ರಪೇವಿ ಗಳಾದ ಇವರಲ್ಲಿ ರಾಷ್ಟ್ರೀಯ ಚಿಕಿತ್ಸಾ ಕ್ರಮಗಳ ಕರಿತ ಇಂತಹ ಸಂಕುಚಿತ ಭಾವನೆಗಳಿದ್ದುದು ತೀರ ವಿಷಾದಕರವಾಗಿದೆ ವರದೇಶಗಳಲ್ಲಿಯೂ ಅಯುರ್ವೇದಕ್ಕೆ ಸಿಗುವ ಮನ್ನಣೆಯು ಹುಚ್ಚುತ್ತಿರುವಿಗ ನವ್ಮ ದೇಶದವನಿಗೆ ಅದರಲೂ ಪಂಡಿತ ಜವಹರಿಗೆ ಅದರ ಮಹತ್ವವು ಇನ್ನೂ ಮುಂದೆ ಟ್ಯಾಗದಿರುವುದು ಬಹಳ ಖೇದಾಸ್ಪದವಾಗಿದೆ ಇರಲಿ ದಾದರೂ ಪಂಡಿತಜಿಯವರು ನಮ್ಮ ಈ ಅಭಿಪ್ರಾಯವನ್ನು ತಿದ್ದಿಕೊಂಡು ಆಯುರ್ವೇದ ಮತ್ತು ಯುನಾನಿ ಚಿಕಿತ್ಸಾ ಕ್ರಮಗಳಿಗೆ ಕಮಲಾನೆಹರೂ ಸ್ಮಾರಕ ಆಸ್ಪತ್ರೆಯಲ್ಲಿ ಯೋಗ್ಯ ಸ್ಥಾನವನ್ನು ಕೊಡುವರೆಂದು ನಂಬಲಾಗಿದೆ



ಅನುಕ್ರಮಣಿಕೆ

ಸಂಪಾದಕೀಯ ಲೇಖನಗಳು ೩
ಕಳಿಸಿರುವವರು ೪
ಇತರ ಲೇಖನ ೪
ವರ್ತಮಾನ ಸಂಗ್ರಹ
ಬೆಂಗಳೂರಲ್ಲಿ ಸರಿಮನರ ದಸ್ಕಗಿರಿ ೮
ಹಣಕ್ಕಾಗಿ ಮಗನ ಕೊಲೆ ೮
ಅಗ್ಗಲೇಖ
ಕೊಂಗ್ರೆಸ್ ಮಂತ್ರಿಗಳು ೧೦
ವಿವಿಧ ಸಮಾಚಾರಗಳು ೧೧
ಇಂದಿನ ಜೀವನವೆಲ್ಲಿ ಹೃದಯೀನಗಳು ೧೬
ದುಂಗಳೂರು ಸಮಾಚಾರ ೧೩
ತಾಲೂಕುಗಳಿಂದ ೧೫
ಕಥೆಯುಳ್ಳದ ಕಥೆಗಳು ೧೫
ಸ್ವಾಸ್ಥ್ಯಸಾಧನ ೧೯

ಸ್ವದೇಶಾಭಿಮಾನಿ.

ತಾ.೧೯ನೆ ಶುಕ್ರವಾರ ಆಕ್ಟೋಬರ್೧೯೧೨

ಕೊಂಗ್ರೆಸ್ ಮಂತ್ರಿಗಳು

ಎಳ್ಳೂ ಪ್ರಾಂತ್ಯಗಳಲ್ಲಿರುವ ಕೊಂಗ್ರೆಸ್ ಮಂತ್ರಿ ಕೂಟಗಳು ಇದು ವರೆಗೆ ಸಾಧಿಸಿದ್ದೇನೆಂಬುದನ್ನು ಪ್ರಕಟಿಪಡಿಸಿದ್ದಾರೆ. ಈ ಮಂತ್ರಿ ಕೂಟಗಳು ತಮ್ಮೊಳಗೆ ಸ್ವರ್ದೆಯಿಟ್ಟುಕೊಂಡಿರೂ ಉನಕಾರವು ಇನ್ನು ಹೆಚ್ಚಬಹುದೆನ್ನುವ ಬೇಕು. ಬಾಟ್ಲೆವಲರ ಮೊಕದ್ದಮೆಯ ವರ್ಷಾದನ್ನು ಕುರಿತಾಗಿ ಈಗ ಅಭಿಪ್ರಾಯ ಕೊಡುವುದು ತಪ್ಪಾಗಿರುವ ಕಾರಣ, ಅದೊಂದನ್ನು ಹಾಗೇ ಬಿಟ್ಟು, ಹೇಳಬಹುದಾದರೆ ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ಮದ್ರಾಸು ಮಂತ್ರಿಗಳು ಮಾಡಿದ್ದುದು ಸ್ಪಷ್ಟವಾಗುವುದು. ನೋಕರರ ಸಂಬಳವನ್ನು ಇಳಿಸುವ ವಿಷಯ ಸ್ವದಲ್ಲೇ ತೀರ್ಮಾನಗಳಾಗುವುವು. ಅದೇ ರೀತಿ ಸಾಲಸನ್ನು ಸುಲಭವಾಗಿ ತೆರಲಾಗುವ ಮೊದಲಾದ ರಯಾಮತಿಗಳನ್ನು ಕುರಿತೂ ಮಂತ್ರಿಗಳೂ ಸದ್ಯದಲ್ಲೇ ಶಾಸನ ನೂಡುವಂತಿದೆ. ಲೇಂಡ್ ರೆವಿನ್ಯೂ ವಿಚಾರದಲ್ಲೂ ತಿದ್ದುಪಡಿಯನ್ನು ಮಾಡುವ ವಿಚಾರಗಳನ್ನು ಹೊರಗೆಡವಿ ಅಲ್ಲಲ್ಲಿ ಚರ್ಚೆ ಮಾಡುತ್ತಿದ್ದಾರೆ. ಸುಧ್ಯವಾಸ ವಿಚಾರಣೆಗೂ, ಕೈವುಗ್ಗಳ ರಕ್ಷಣೆಗೂ ವರ್ಷಾದನೆಗಳು ಆಗಿಯೇ ಇವೆ. ಇಷ್ಟು ಒಂದಿಷ್ಟು ಅನಕಾಶದೊಳಗೆ ಸಾಧ್ಯವಾಗುವಂತೆ ಸಾಧಿಸಿರುವುದು ಕೀರ್ತಿಕರವೇ ಆಗಿದೆ. ಹೀಗೆ ಇದು ವರೆಗೆ ಮಾಡಿರುವುದನ್ನು ನೋಡಿ ಕುಳಿತುಕೊಳ್ಳದೆ, ಇನ್ನೇ ತೀವ್ರವಾಗಿ ಇನ್ನೂ ಮುಂದರಿಯುವ ಪ್ರಯತ್ನಗಳನ್ನು ಮಂತ್ರಿಗಳನ್ನು ಹಿಂತೆಗೆಯದೆ ಮಾಡುತ್ತಿರಬೇಕೆಂದು ಇಲ್ಲಿ ಸೂಚಿಸಲೇ ಬೇಕಾಗಿದೆ. 'ಮಾಡಿದವರು' ಎಂಬುದಕ್ಕಿಂತ 'ಮಾಡುವವರು' ಎನ್ನಿಸಿಕೊಳ್ಳುವ ಇಚ್ಛೆ ಮಂತ್ರಿಗಳಲ್ಲಿ ಬೆಳೆಯುತ್ತಿರಲಿ. ಹೀಗಾದರೆ ಮಾತ್ರ, ಅಪ್ಪ ಇಪ್ಪು ಅಲ್ಲಿಲ್ಲಿ ಸುಧಾರಣೆಗಳನ್ನು ಮಾಡುತ್ತಿರದೆ, ಶಾಂತವಾಗಿ ಎಲ್ಲ ಸುಧಾರಣೆಗಳನ್ನು ಮಾಡಿ ಮುಗಿಸುವುದೂ ಕಷ್ಟವಾಗಲಾರದು. ಸ್ವರಾಜ್ಯವನ್ನೇ ಸ್ಥಾಪಿಸುವ ದಕ್ಕೆ ಮೂಲದಲ್ಲಿ ನೂತನ ವಿದ್ಯಾಭ್ಯಾಸ ಕ್ರಮಗಳು ಜ್ಯಾರಿಗೆ ಬರಬೇಕು; ಮೃಯದ ಮೇಲೆ ತುಬಾ ನಿಗಾ ಇಡಬೇಕು. ಇದಕ್ಕೆ ಬೇಕಾಗಿರುವ ಧೈರ್ಯ ವಿವೇಕ ದೃಢತೆ ಮಂತ್ರಿಗಳಲ್ಲಿ ಹೆಚ್ಚುತ್ತಿರಲಿ. ಈ ಗುಣಗಳು ಪ್ರಕಟವಾಗಿದ್ದಕ್ಕೆ ಜನತೆಯು ಬೆಂಬಲವನ್ನು ಅವರಿಗೆ ಇದ್ದೇ ಇದೆ. ಹತಕಾಂಗಳಿಗೆ ಅವಕಾಶ ಮಾಡುವ ಬುದ್ಧಿ ನಮ್ಮ ಜನರಲ್ಲಿಲ್ಲ.

ಮುರ್ಷಿದಾಬಾದಿನ ನವಾಬರು

ಇವರ ಸಂದೇಶ

ವೈಕ್ಷಿಕ ವಂಗಡವಾಗಿ ಉಂಟುಮಾಡಿಕೊಳ್ಳುವ ಹಾನಿಯೆಷ್ಟು ಎಂಬುದನ್ನು ವಿವರಿಸಿ, ಮುಸ್ಲಿಮರಿಗೆಲ್ಲ ಒಂದು ಸಂದೇಶವನ್ನು ಮುರ್ಷಿದಾಬಾದಿನ ನವಾಬರು ಪ್ರಕಟಿಸಿದ್ದಾರೆ. ಇನ್ನು ಕಾಲೋಚಿತವಾಗಿರುವ ಸಂದೇಶವು ಮತ್ತೆಂದೂ ದಿರದು. ವಿಚಾರವಿಲ್ಲದ ಸ್ವಾರ್ಥಿಗಳು ಯಾವಾಗಲು ಜನಗಳೊಳಗೆ ವಂಗಡಗಳನ್ನುಂಟು ಮಾಡಿ ಬಾಳುವರು. ವಂಗಡಗಳಾಗಬೇಕೆಂದೇ ಸ್ನೆವನರು ತಮ್ಮ ವಂಗಡಕ್ಕಾದರೂ ಯಾವಾಗಲು ಹಿತವನ್ನು ಬಯಸುತ್ತಲಿದ್ದಕೆ ತಪ್ಪಿಲ್ಲ. ವಂಗಡದ ನೆವದಿಂದ ಜಗಳವೆಬ್ಬಿಸುವ ಪ್ರಯತ್ನ ಮಾಡುವುದಕ್ಕೆ ತನ್ನ ಜನವನ್ನು ಎಬ್ಬಿಸುವವರೂ ಮುಖಂಡರಾದರೆ? ಈ ಧರ್ಮ ಅಧರ್ಮ ನಾಶವಾಗುತ್ತದೆಂದು ಕೂಗುವವರೂ ಇಂಥವರೇ; – ನಿಜವಾಗಿ ಧರ್ಮಕ್ಕಾಗಿ ಇವರು ಕಾಸಿನ ಪ್ರಯತ್ನ ಮಾಡುವುದಿಲ್ಲ, ತಮ್ಮ ಗೌರವ ಹೆಚ್ಚಲೆಂದೇ ಮಾಡುವರು. ಮುಸ್ಲಿಮರಾಗಲೀ, ಹಿಂದುಗಳಾಗಲೀ ಈ ಸಂದೇಶವನ್ನೆಷ್ಟೇದುವುದುತ್ತನು. ಹಿಂದೂ ಮಹಾಸಭೆಯವರು ಮಾಡಿರುವುದು ಇನ್ನು ತಂಟೆ. ಸನಾತನವಾಗಿ ಬಾಳಿರುವ ಹಿಂದೂ ಧರ್ಮವಾಗಲಿ, ಜಗದ್ವ್ಯಾಪಿಯಾಗಿರುವ ಇಸ್ಲಮ್ ಮತವಾಗಲಿ ಸುಲಭವಾಗಿ ಹಾನಿ ಹೊಂದುವುದುಂಟೆ? ಸತ್ಯಕ್ಕೆ ಲೋಪವುಂಟೆ? ಸತ್ಯವು ಕೆಡುವುದೆಂದು ಯಾರೂ ಹೇಳಿದರೆ ಅದು ನಿಜವಾಗಿಯೂ ಸತ್ಯವನ್ನು ದೂಷಿಸಿದಂತಲ್ಲವೆ? ಸತ್ಯವನ್ನು ಅವಲಂಬಿಸಿ ನಡೆಯುತ್ತೇವೆನ್ನುವರು ಮಾತ್ರ ಅಂತರಂಗದಲ್ಲಿ ಕೆಟ್ಟಿರಿ, ಸತ್ಯವು ಕೆಟ್ಟಿಂತೆ ತೋರಬಹುದು. ಹೊರ ಪ್ರಯತ್ನಗಳಿಂದ ಸತ್ಯವನ್ನು ನಾಶಪಡಿಸುವವರಲ್ಲ. ಹೀಗಿರುವುದರಿಂದ ಧರ್ಮಕ್ಕೆ ಬರುವ ವಿಪತ್ತೆಂಬುದು ಕೆಲವರು ಸಾರುವ ಸ್ವ-ಧರ್ಮದ ಸಂರಕ್ಷಣೋಪಾಯ; ತಾವೇ ಮೇಲಾಗಿ ಬಾಳುವಂತಾಗಲೆಂದೇ ಪ್ರಯತ್ನ. ದಾರಿದ್ರವು ಯಾವ ಧರ್ಮವನ್ನು ಹಿಂಬಾಲಿಸುವವರಲ್ಲಿ ಇಲ್ಲ? ಒಂದು ಧರ್ಮದವರು ಪುತ್ತೊಂದು ಧರ್ಮದವರು ತಮ್ಮ ಹಗೆಗಳು ಎಂದು ಭಾವಿಸಿದರೆ, ಈ ದಾರಿದ್ರ್ಯವು ಕಡಮೆಯಾದೀತೆ? ಸಂಪತ್ತು ಎಲ್ಲರಲ್ಲೂ ಹೆಚ್ಚುವಂತೆ, ಎಲ್ಲರೂ ಒಂದಾಗಿ ಪ್ರಯತ್ನಿಸಿದರೇ ಸಾಧ್ಯವಲ್ಲದೆ, ವಂಗಡಗಳಲ್ಲಿ ಪ್ರಯತ್ನಪಡುವುದರಿಂದಾಗದು. ಈ ಏಕ್ಯ ಸಾಧನೆಯ ಪ್ರಯತ್ನಗಳನ್ನು ಕೊಂಗ್ರೆಸು ಮಾಡುತ್ತಲಿದೆ. ಇದೊಂದೇ ಮಾತ್ರ ಇದೇ ಜನಾಂಗದ ಸಂಗಡ. ಇದನ್ನೆ ಎಲ್ಲರೂ ಸೇರಿ ಸಮಾಜಯಾವುದಾದೀತು, ಕೊಂಗ್ರೆಸು ಹಿಂದೇ!' ಎಂದೇ ಮಾತುಗಳನ್ನು ನವಾಬರು ಸ್ವಯವಾಗಿ ವಿವರಿಸಿ, ಜನತೆಗೆ ಒಂದು ಉಪಕಾರ ಮಾಡಿದುದಕ್ಕೆ ಅವರು ಕೃತಜ್ಞತಾನಾರ್ಹರು.

ಸ್ಫುಟವಿಚಾರಗಳು

ಬಾಷಾಪಾಠಗಳು

ಈ ರೀತಿಯಾಗಿದ್ದರೆ ಸಾಕೆಂದು ನಮ್ಮ ಸರಕಾರದ ಅಭಿಪ್ರಾಯವಾಗಿದೆ ಎಂದು ತಿಳಿದು ಬರುತ್ತದೆ. ಎಲಿಮೆಂಟರಿ ತರಗತಿಗಳಲ್ಲಿ ತಾಯ್ನುಡಿ ಯಾನ ದೇಶಭಾಷೆಯೇ ಮಾತ್ರ ಸಕೆಂದು – ಶಾಲೆಗಳ – ಮೊದಲನೆ ಮೂರು ತರಗತಿಗಳಲ್ಲಿ ವಾರಕ್ಕೆ ಮೂಕ್ಕಭಾವೆ (8 ತಾಸು) ಹಿಂದೀ (8 ತಾಸು) ಇಂಗ್ಲಿಷು ಅಥವಾ ಸಂಸ್ಕೃತ ಗಳು ಇಚ್ಛಿಕ ಭಾಷೆಗಳಾಗಿ (6 ಯಾ 4 ತಾಸು) ಹೈಸ್ಕೂಲುಗಳ ಮೇಲ್ತರಗತಿಗಳಲ್ಲಿ ದ್ವಿಭಾಷಾ ಶ್ರೇಯುವಿದೆಯನ್ನು; ಎಸ್. ಎಸ್. ಎಲ್. ಸೀ. ಪರೀಕ್ಷೆಯ ನಂತರ ವೃತ್ತಿಶಿಕ್ಷಣಕ್ಕೆ ತಯಾರಿಸುವ ಕ್ರಮವೊಂದು; ಯೂನಿವರ್ಸಿಟಿ ಪರೀಕ್ಷೆಗೆಳಿಗಾಗಿಯೆ ಸಿದ್ಧಗೊಳಿಸುವಕ್ರಮವೊಂದು. ಮೊದಲನೆ ಬಗೆಯ ಶಿಕ್ಷಣವಿರುವಲ್ಲಿ ಮಾತೃಭಾಷೆಯವಾಠಗಳು ಹೆಚ್ಚು, ಇಂಗ್ಲಿಷು ಕಡಮೆ. ಎರಡನೆ ಬಗೆಯಲ್ಲಿ ಮಾತೃಭಾಷೆಗೂ ಇಂಗ್ಲಿಷಿಗೂ ಸಮಾನವಾದ ಪ್ರಾಶಸ್ತ್ಯ. ಕೊನೆಯ ಪಕ್ಷ ಇನ್ನು ತರಗತಿಗಳಲ್ಲಿ ಒಂದು ತಾಸು (ವಾರದಲ್ಲಿ) ಕಡ್ಡಾಯವಾಗಿ ಹಿಂದೀ ಕಲಿಸಬೇಕೆಂಬ ಸೂಚನೆಯೂ ಉಂಟು. ಕೊಲೇಜು ತರಗತಿಗಳಲ್ಲಿ ಸಂಸ್ಕೃತವನ್ನು ಅಭ್ಯಾಸಮಾಡಬೇಕೆನ್ನುವ ಕೆಲವರು ಅದನ್ನು ಕಲಿಯಲೂ ಬಹುದು. ಕೊಲೇಜ್ ತರಗತಿಗಳಲ್ಲಿ ಇಂಗ್ಲಿಷೇ ಇನ್ನು ಬಹು ವರ್ಷಗಳ ತನಕ ಮುಖ್ಯ ಭಾಷೆಯಾಗುವುದು; ಮಾತೃಭಾಷೆ ಎರಡನೆಯ ಭಾಷೆಯಾಗುವುದು; ಸಂಸ್ಕೃತ ಅಥವಾ ಹಿಂದೀ ಭಾಷೆಗಳು ಐಚ್ಛಿಕ ಭಾಷೆಯಾಗುವುವು. ಭಾಷಾವಾರಾಗಳಲ್ಲದ ಇತರ ಪಾಠಗಳಲ್ಲಿನ ಪಾಠವಿಷಯವೆಲ್ಲ ಸಾಕಷ್ಟು ಮಟ್ಟಿಗೆ ಕಡಮೆ ಮಾಡಿ. ಭಾಷೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಗೆ ಮತ್ತು ಸಮರ್ಪಯೂ ಸಿಗುವಂತೆ ಸೂಚಿಸಲಾಗುವುದು.

ಶಿಕ್ಷಿತರೆಷ್ಟು

ನಮ್ಮ ದೇಶದಲ್ಲಿರುವ ಶಿಕ್ಷಿತರ ಸಂಖ್ಯೆ ಸುಮಾರು 23 ಮಿಲ್ಲಿಯ ಗಂಡಸರು; 4 ಮಿಲ್ಲಿಯ ಹೆಂಗಸರು–ಒಟ್ಟು 28,138,856. ಇದು ಇಡೀ ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ 8 ರಂತಾಗಿದೆ. ಹತ್ತು ವರ್ಷ ವಯಸ್ಸಿಗೆ ಮೇಲ್ಪಟ್ಟವರ ಸಂಖ್ಯೆಯೊಡನೆ ಈ ಶಿಕ್ಷಿತರ ಸಂಖ್ಯೆಯನ್ನು ಹೋಲಿಸಿದರೆ ಇದು ನೂರಕ್ಕೆ 11 ಆಗಿದೆ. ಬ್ರಿಟನ್, ಫ್ರಾನ್ಸ್, ಜರ್ಮನಿ, ಯು ನ್ಯಾಟೆಡ್ ಸ್ಟೇಟ್ಸ್, ಜಪಾನು, ಕೆನಡಾ, ಔಸ್ಟ್ರೇಲ್ಯ–ಇಂದೂ ಕಡೆ ಈ ಸಂಖ್ಯೆ 95ಕ್ಕೆ ಕಡಮೆ ಯಾಗಿಲ್ಲ. ರಷ್ಯದಲ್ಲಿ 90; 20 ವರ್ಷಗಳ ಹಿಂದೆ ಇದು 17 ಆಗಿತ್ತು! ಮುಂದಣ ಹತ್ತು ವರ್ಷಗಳಲ್ಲಿ ನಮ್ಮನ್ನು ಸರ್ವತ್ರವೂ ಶಿಕ್ಷಣ ಹರಡಬೇಕಾದರೆ ಪುಸ್ತಕ ಭಂಡಾರಗಳು ಹೆಚ್ಚಿನ ಸ್ಥಾಪಿತವಾಗಬೇಕಾಗಿದೆ. ಹಿಂದೆ ರಾಮಾಯಣ ಮಹಾಭಾರತಗಳನ್ನು ಜನರಿಗೆ ಓದಿ ವಿವರಿಸುತ್ತಿದ್ದಿಲ್ಲವೆ? ಇದೂ 'ಲೈಬ್ರೆರಿ' ಪುಸ್ತಕ ಭಂಡಾರಗಳ ಉಪಯೋಗ ಕ್ರಮದಂತೆಯೆ. ಉತ್ತಮ ವರ್ಣಾಮವನ್ನು ಸರಕ್ಷರದ ಮೇಲೆಯೂ ಉಂಟುಮಾಡುತ್ತಿದ್ದಿತು. ಇದೇ ಬಗೆಯಾಗಿ ಈಗ ಸರ್ವಜನರಿಗೆ ಅನುಕೂಲವಾಗುವ ಹಾಗೆ ಜ್ಞಾನವನ್ನು ಹರಡಬೇಕಾಗಿದೆ. ಯಾವುದಾದರೊಂದು ಜಿಲ್ಲೆಯಲ್ಲಿ ಈ ಪ್ರಕಾರವಾಗಿ ಜ್ಞಾನಪ್ರಚಾರಕ್ಕೆ ತೊಡಗಿದರೆ, ಅದರ ವ್ಯವೋಜನಾನುಭವಗಳನ್ನು ಇತರ ಜಿಲ್ಲೆಗಳಿಗೂ ಉಪಯೋಗಕ್ಕೆ ಬರುವಂತೆ ಮಾಡಬಹುದು. ಅಂಧ್ರ ಜಿಲ್ಲೆಗಳಿಂದ ಮದ್ರಾಸು ಸರಕಾರಕ್ಕೆ ಅರಿವಾಯಿಮ್ಮು ಕಂದಾಯವು ದೊರೆಯುತ್ತದೆ. ಅಂಧ್ರಪ್ರಾಂತ್ಯವನ್ನು ಪ್ರತ್ಯೇಕಿಸಿದರೆ, ಸುಲಭವಾಗಿ ಅಂಧ್ರಪ್ರಾಂತ್ಯದಲ್ಲಿ ಹತ್ತೇ ವರ್ಷಗಳಲ್ಲಿ ತುಂಬ ಜ್ಞಾನವನ್ನು ಹರಡಲು ಅನುಕೂಲವಾಗುವುದು. ಈಗ ಸೇಲಂ ಜಿಲ್ಲೆಯಲ್ಲಿ ಮಧ್ಯಪಾನ ನಿವಾರಣೆಗಾಗಿ ಪ್ರಯತ್ನ ಮಾಡಿರುವಂತೆಯೆ ಒಂದೊಂದೇ ಜಿಲ್ಲೆಯಲ್ಲಿ ಈ ಬಗೆಯ ಶಿಕ್ಷಣ ಪ್ರಚಾರ ಮಾಡಿದರೆ ತುಂಬ ಉಪಕಾರವಾದೀತೆಂದು ಪ್ರಜ್ಞಾಪದಲ್ಲಿ ಸೇರಿದ ಪುಸ್ತಕ ಭಂಡಾರಗಳ ವರಿಷತ್ತಿನಲ್ಲಿ ತೀರ್ಮಾನವಾಗಿದೆ. ದಕ್ಷಿಣ ಕನ್ನಡದಲ್ಲಿ ಈ ಹೊಸ ಉದ್ಯೋಗವನ್ನು ಆರಂಭಿಸಲು ತುಂಬಾ ಸಾಧ್ಯವಿದೆ.

ಮಿಸ್ಸಿಸ್ ಫಜಲುಲ್ ಹುಕ್

ಇವರು ಈಚೆಗೆ ಸೆಲ ಲಾಹೋರಿನಲ್ಲಿ ಭಾಷಣ ಮಾಡಿದುದನ್ನು ಕುರಿತಾಗಿ ಬಿಹಾರದ ಮಂತ್ರಿಯರಾದ ರಾ। ಮಾಮೂದರು ಹೀಗೆ ಹೇಳುತ್ತಾರೆ:–ಇವರು ಇಷ್ಟು ಜೋರಾಗಿ ಭಾಷಣ ಮಾಡಿದುದೇಕೆಂದರೆ, ಪ್ಯಾಲೆಸ್ಟೈನ್ ಕದನ ಮುಗುಕ್ತ ಬಂದುದರಿಂದಲೇ; ಇಂತಹರೇ ಹೇಗೂ ಮಾಡಿ ನೇರಿ, ಕೈಕಪ್ಪಿ ಹೋಗುತ್ತಿರುವ ಕಮ್ಮ ಗೌರವವನ್ನು ಹೀಗೆ ಉಳಿಸಿಕೊಳ್ಳಲು ಬಹಳವಾಗಿ ಯತ್ನಿಸಿರುವರು, ಹೇಗೂಮಾಡಿ, ಮುಸಲ್ಮಾನರನ್ನೆಲ್ಲ ಒಂದುಕೂಡಿಸುವುದರಲ್ಲಿ ಇವರು ಕೃತಾರ್ಥರಾದರೇ ಎಂದು ಆಲೋಚಿಸಿದರೆ ಇವರಂಥಾಗದು ಎಂದೇ ಹೇಳಬೇಕಾಗುವುದು. ತ್ಯಾಗ ಮತ್ತು ಸಹನೆಗಳಿಂದಲ್ಲದೆ ಯಾರೂ ಜನಾಂಗವನ್ನು ಒಂದುಕೂಡಿಸಲು ಯತ್ನಿಸಿ ಜಯಶೀಲರಾದುದಿಲ್ಲ. ಜಿನ್ನಾರವರಾಗಲಿ, ಹುಕ್ಕರಾಗಲಿ ತ್ಯಾಗಪೂರ್ಣರಾಗಿ, ಸರ್ವರಂತೆ ತಾವೂ ಸಮಸ್ತ ಪೇಚಾಟಗಳಿಂದ ಸಹಿಸಿಕೊಳ್ಳಲು ಸಿದ್ಧರಾಗಿ ಜನಸೇವೆಗೆ ತೊಡಗಲಿ, ನೋಡೋಣ. ಪ್ರತಿಯೊಬ್ಬ ಮುಸಲ್ಮಾನನೂ ಆಗ ಅವರ ಬೆಂಬಲಕ್ಕೆ ಬರುವನು! ಎಲ್ಲ ಮಂತ್ರಿಮಂಡಲಗಳನ್ನು ಕೃಜಿಸಿ, ಮುಸ್ಲಿಮ ಮಂತ್ರಿಗಳು ಅವರನ್ನು ಸೇರುವರು. ಇಸ್ಲಾಮು ಧರ್ಮವನ್ನು ಉಳಿಸುವುದಕ್ಕೆ ಯಾವ ಮುಸ್ಲಿಮನೂ ಹಿಂಜರಿಯನು; ಇತರರ ಸಹಾಯದಿಂದ ತಾವು ಅಭ್ಯುದಯ ಹೊಂದಬೇಕು, ನೆವಕ್ಕೆ ಮಾತ್ರ ಧರ್ಮೋದ್ಧರಣ ಎಂಬ ಮಾತಾದುತ್ತಿರಬೇಕು ಎಂದರೆ ಯಾವ ಮುಸ್ಲಿಮನೂ ಇವರ ಬೆಂಬಲಕ್ಕೆ ಬರಲಾರನು.

ಶ್ರೀಯುತ ನೆರಿಮೇನ್‌ರು

ಎಂತೂ ಮದ್ರಾಸಿಗೆ ತಲಪಿರುವರು. ಬೆಂಗಳೂರಿಂದ ಅವರನ್ನು ಜಿಲ್ಲಾ ಮೆಜಿಸ್ಟ್ರೇಟರೂ ಸಿಟಿ ಮೆಜಿಸ್ಟ್ರೇಟರೂ ಪೊಲೀಸ್ ಆಫೀಸರರೂ ಸಾಯಂ ೫ ಘಂಟೆಗೆ ಸೆಂಟ್ರಲ್ ಜೈಲಿಗೆ ಬಹು ಕಂಡವರಾಗಿ, ಅವರ ಮೇಲೆ ಮೊಕದ್ದಮೆ ಇಲ್ಲವೆಂದೂ ತಿಳಿಸಿ, ಯಾರಿಗೂ ತಿಳಿಯು ಬರದಂತೆ ರೈಲ್ವೆ ಸ್ಪೇಷನಿಗೇ ಕರೆದೊಯ್ದರು. ಇಷ್ಟಾಗಿ ರಾತ್ರೀ ವೇಳೆಯ ರೈಲಿನಲ್ಲಿ ಹೋಗುವ ಮನಸ್ಸಿಲ್ಲದಿದ್ದರೂ, ಇನ್ನು ಇವರನ್ನು ಬೆಂಗಳೂರಲ್ಲಿಟ್ಟರೆ ಗಲಾಟೆಗಳ ಮುಗಿಯುವಂತಿಲ್ಲವೆಂದು ಸೂಚಿಸಿ, ಅದೇ ಗಾಡಿಯಲ್ಲಿ ಮದ್ರಾಸಿಗೆ ಪ್ರಯಾಣ ರೂಡುವಂತೆ ಹೇಳಿದರು. 'ಸಭೆ ನಡೆವಾಗ, ನಾನೇ ಸಭೆ ಮುಗಿಸಿ ನಿಮಗೆ ಶರಣಾಗುತ್ತೇನೆ' ಎಂದಾಗ ಪೋಲೀಸರು ನನ್ನ ಮಾತಿನಂತೆ ಸುಮ್ಮನಿದ್ದರೆ, ಏಕಕಹ ತೆಂಟೆಗೂ ಅವಕಾಶವಿರುತ್ತಿರಲಿಲ್ಲ ಎಂದು ಅವರೆಂದರು. ಒಂದು ದಿನವೆಲ್ಲ ಅನವಶ್ಯಕವಾದ ಗದ್ದಲ ಗಲಾಟೆಗಳು ಬೆಂಗಳೂರಲ್ಲಿ ಉಂಟಾದುವು. ಅದರೂ, ಕೊಂಗ್ರೆಸ್ ಕೂಟಗಳು ಶಾಂತವಾಗಿ ಜರುಗಬೇಕೆಂದೂ, ಅಕ್ರಮಕಾರ್ಯಗಳಾವುವೂ ನಡೆಯಬಾರದೆಂದೂ ಅದರಿಂದ ಮುಂದೆ ಫಲವುಂಟೆಂದೂ ಎಲ್ಲರೂ ತಿಳಿಯುವಂತಾಯ್ತು. ಬೆಂಗಳೂರಲ್ಲಿದ್ದ ಕೊಂಗ್ರೆಸ್ ಕಟ್ಟಡವನ್ನು ಒಡೆದು ನುಗ್ಗಿ, ಅಲ್ಲಿದ್ದ ಒಟ್ಟು ಸ್ವಯಂಸೇವಕನನ್ನು ಅಸ್ತ್ರಕ್ರಿಯಲ್ಲಿ ಉಪಚಾರ ಹೊಂದುವಂತೆ ಬಡಿದು, ಅಲ್ಲಿದ್ದ ಕೆಲವು ರಿಕಾರ್ಡುಗಳನ್ನು ಒಯ್ದುರನರಾಗಿ ತಿಳಿದುಬಂದಿದೆ. ಗುಂಡಿನೇಟಿಗಳಿದವರಲ್ಲಿ ಒಬ್ಬನು ಮಡಿದನು; 25ಮಂದಿಯನ್ನು ಕೈದುಮಾಡಿದ್ದಾರೆ. ಪೋಲೀಸ ಸ್ಟೇಶನನ್ನು ಮುಕ್ತಿ, ಕಂಡ ಪೋಲೀಸರನ್ನು ಹೊಡೆದು ಸ್ಟೇಶನನ್ನೆ ಹಾಳುಮಾಡಿದ ಅಕ್ರಮಿಗಳ ಪರಾಕ್ರಮವು ನಿಂದನೀಯವಾಗಿದೆ. ಯಾವ ಬಗೆಯ ರಾಜಕೀಯ ಕೆಲಸಕ್ಕೂ ಇಂತಹ ಕಾರ್ಯಗಳು ಸಲ್ಲವು.

ಚೀನೀಯರ ಸಾಹಸದ ಹೋರಾಟ! ೨೦೦ ಮಂದಿ ಕೊಲ್ಲಲ್ಪಟ್ಟರು!

ಬ್ರಿಟಿಷ ಠಾಣಿಯ ಮೇಲೆ ಜಪಾನು ವಿಮಾನಗಳಿಂದ ಬೋಂಬುಗಳು

ಷೆಂಘಾಯಿಯಲ್ಲಿ ಜಪಾನರು ಪುನಃ ಭಯಂಕರವಾದ ಯುದ್ಧವನ್ನು ಉಪಕ್ರಮಿಸಿರುವರು.

ಈ ಮೊದಲೇ ಊಹಿಸಿದಂತೆ ಜಪಾನರು ಪುನಃ ಭೀಕರವಾದ ಯುದ್ಧವನ್ನು ಉಪಕ್ರಮಿಸಿರುವರು.

ಈಗ ಇದ್ದ ಸೈನ್ಯಕ್ಕೆ ಸಹಾಯವಾಗಿ ಹೆಚ್ಚಿಗೆ ೩೦ ಸಾವಿರ ಹೊಸ ಸೈನ್ಯದವರು ಜಪಾನರ ಸಹಾಯಕ್ಕೆ ಬಂದಿರುತ್ತದೆ. ಇದರಿಂದಾಗಿ ಜಪಾನರು ಅತೀ ಘೋರವಾದ ಯುದ್ಧವನ್ನು ಪ್ರಾರಂಭಿಸಿರುವರು.

ಬ್ರಿಟಿಷರ ಠಾಣಿಯ ಮೇಲೆ ಜಪಾನು ವಿಮಾನುಗಳಿಂದ ಬೊಂಬುಗಳು.

ಒಂದು ಜಪಾನರ ವಿಮಾನವು ಬ್ರಿಟಿಷರ ಠಾಣಿಯ ಮೇಲೆ ಬೊಂಬುಗಳನ್ನು ಬಿಸಾಡಿ ಅನಾಹುತವನ್ನೂ ಮಾಡಿರುತ್ತದೆ ಅಲ್ಲಿಯ ಅಧಿಕಾರಿಯಾದ ಮೆಜರ್ ಗೋವನ್ ಎಂಬವನಿಗೆ ಜಖಂ ಆಗಿರುತ್ತದೆ ಅಲ್ಲೇ ಸವಿಾಪದಲ್ಲಿದ್ದ ೪ ಮಂದಿ ಚೀನಿಯರು ಮಡಿದಿರುತ್ತಾರೆ ೬ ಮಂದಿಗೆ ಗಾಯವಾಗಿರುತ್ತದೆ ಈ ಕುರಿತು ಬ್ರಿಟಿಷ ರಾಯಭಾರಿಯು ನಿಷೇಧಿಸಿ ಜಪಾನು ರಾಯಭಾರಿಗೆ ತಿಳಿಸಿದ್ದಲ್ಲಿ, ಅದರು ವಿಷಾಧದನ್ನು ಸೂಚಿಸಿ, ಅದು ಚೀನೀಯರ ವಸಾಹತುವಾಗಿರಬಹುದೆಂದು ಅವರು ಮೋಸಕೋಗಿರಬಹುದಾಗಿ ತಿಳಿಸಿರುತ್ತಾರೆ

ಚೀನೀಯರ ಸಾಹಸದ ಹೋರಾಟ ೨೦೦ ಮಂದಿ ಕೊಲ್ಲಲ್ಪಟ್ಟರು'

ಜಪಾನರ ಬೋಂಬಿನ ದಾಳಿಯಿಂದ ಸಂಗ್ ಕಿಜಾಂಗ್ ರೈಲ್ವೆ ನಿಲ್ದಾಣವು ಸಟ್ಟುಹಾಕಲ್ಪಟ್ಟಿದೆ ಅಲ್ಲಿ ೨೦೦ ಮುಂದಿ ಚೀನೀಯರು ಕೊಲ್ಲಲ್ಪಟ್ಟಿದ್ದಾರಾಗಿ ತಿಳಿದುಬಂದಿದೆ ೪೦೦ ಮಂದಿಗೆ ಜಖಂ ಆಗಿರುತ್ತದೆ ಹೆಂಗಾಂ ರೈಲ್ವೆ ಡ್ರಾಂಕ್ಷಿಪ ಬಳಿಯಲ್ಲಿರುವ ಸುಚೂರು ಗಂಂ ಮನೆಗಳು ನಾಶವಾಗಿರುತ್ತವೆ ಚೀನಿಯರು ಬಹಳ ಕಷ್ಟದಿಂದ ಬಾಧಾಗ್ರಸ್ತರಾಗಿರುವರು ಇದರಿಂದಾಗಿ ಜಪಾನರು ಮೆಲ್ಲನೆ ಸುಂದರಿಯಾನದ ಪ್ರಯತ್ನಪಡುತ್ತಿರುವರು ಟೋಂಗ್ ನಿಂಗ್‌ಹಿಯಾಂಗ್ ಇನ್ನೂ ಚೀನೀಯರ ವಶವೇ ಇರುತ್ತವೆ ಜಪಾನರು ಅಲ್ಲಿ ವಿಶೇಷ ಬೋಂಬಿನ ಹಾವಳಿಯನ್ನುಂಟುಮಾಡಿರುವರು ಟೋಂಗಿನಲ್ಲಿ ರೈಲ್ವೇಗಳು ಎಲ್ಲಿರುತ್ತವೆ ಎಂಬುದನ್ನು ಗೊತ್ತುಮಾಡಲು ಬಹಳ ಪ್ರಯಾಸವಾಗಿದೆಯೆಂದು ತಿಳಿಬರಿರುತ್ತದೆ ಜಪಾನರ ಕಡೆಯಲ್ಲೂ ೩೦೦ ಮುಂದಿ ಮಡಿದಿರಬಹುದಾಗಿಯೂ ಹೆಚ್ಚು ಮಂದಿ ಗಾಯಗೊಂಡಿರುವುದಾಗಿಯೂ ಊಹಿಸಲಾಗಿದೆ

ಪೆಲೆಸ್ತೀನ್ ಪರಿಸ್ಥಿತಿ! ರೈಲ್ ಕಂಬಿಗಳನ್ನು ತೆಗೆದುಹಾಕಿರುವರು.

ಪೆಲೆಸ್ತೀನಿನಲ್ಲಿ ಹಗಲಿನಲ್ಲಾಲಿ ರಾತ್ರಿಕಾಲದಲ್ಲಿ ಯಾರೂ ಸಂಚಾರಮಾಡದಂತಾಗಿದೆ ರಾತ್ರಿಕಾಲದಲ್ಲಿ ರೈಲ್ವೇ ಗಾಡಿಗಳೂ ಓಡಾಡುವುದಿಲ್ಲ. ಸಂಜೆಯಾದ ನಂತರ ಪೋಲೀಸು ಮತ್ತು ಮಿಲಿಟರಿ ಅಧಿಕಾರಿಗಳಲ್ಲದೆ ಬೇರೆ ಯಾರೂ ಮೂರ್ಗಗಳಲ್ಲಿ ಅಲೆದಾಡುವುದಿಲ್ಲ.

ಅನಾಚಾರಗಳು ಹೆಚ್ಚಾಗಿ ಸುಜೆಯು ಮುಸುಕಿನ ನೇರೆಯಲ್ಲಿ ಸಡೆಯುತ್ತಿವೆ. ಪೋಲೀಸು ಅಧಿಕಾರಿಗಳು ಬದುವುದಕೊಳಗಾಗಿ ದಂಗೆಗಾರರು ಮುಸುಕಿನಲ್ಲಿ ತಪ್ಪಿಸಿಕೊಳ್ಳುವರು. ತೆರುಸಲೇಮಿನ ಸವಿಾಪದ ಪ್ರಾಂತ್ಯದಲ್ಲಿ ರೈಲ್ ಕಂಬಿಗಳನ್ನು ಬೇರ್ಪಾಗಬೇಕಾದರೆ ತೆಗೆದುಹಾಕಿರುತ್ತಾರೆ. ಪ್ರತಿ ಗಳಿಗೆಯಲ್ಲಿಯೂ ಏನಾದರೂ ಅನಾಹುತ ಉಂಟಾಗಬಹುದಾಗಿ ಅಧಿಕಾರಿಗಳು ಜಾಗ್ರತೆ ಯಿಂದಿದ್ದಾರೆ

ನಾರಿಮನ್ ಪಟೇಲ್ ಪ್ರಕರಣ.

ಶ್ರೀ ಕೆ. ಎಫ್. ನಾರಿಮನ್ ಮತ್ತು ವಲ್ಲಭಾಯಿ ಪಟೇಲ್‌ರವರಿಗೆ ಉಂಟಾಗಿದ್ದ ದೃಷ್ಟಾಪವು ಇದೇ ಹೇಳಿಕೆಯನ್ನು ಹೊರಡಿಸಿದ್ದಾರೆ " ಈ ವೃಷಹಾರದ ತೀರ್ಪು ೧೪ ಪುಲ್ಸ್‌ಕೇಪ್ ಷೀಟುಗಳಲ್ಲಿದೆ. ಅದರಲ್ಲಿ ಶ್ರೀ ವಲ್ಲಭಾಯಿ ಪಟೇಲರವರು ನಿರಪರಾಧಿಗಳೆಂದು ಮತ್ತು ಶ್ರೀ ನರಿಮನ್ನರು ತಪ್ಪುತಕ್ಕರೆಂದೂ ತೀರ್ಮಾನಿಸಿದೆ ಆದರಂತೆಯೇ ಶ್ರೀ ನರಿಮನ್ನರವರು ಸಮಸ್ತವೂ ತಮ್ಮದೇ ತಪ್ಪೆಂದು ಒಪ್ಪಿಕೊಂಡಿರುತ್ತಾರೆ. ಏನೇ ಆದರೂ ಶ್ರೀ ನರಿಮನ್ನರವರು ಕಮ್ಮದೇ ಎಲ್ಲವೂ ತಪ್ಪೆಂದು ಒಪ್ಪಿಕೊಂಡು ಈ ವೃವಹಾರವನ್ನು ಪರ್ಯವಸಾನಗೊಡಿದುದು ಅಭಿನಂದನೀಯವಾದುದೇ ಸರಿ

ಸ್ವದೇಶದಿಂದ ಮುಂಬ್ಯಾಗೆ ಬಂದವರಿಗೆ ಕನ್ನಡ ಸಂಗೀತ ಸಭೆಯಲ್ಲಿ ಸತ್ಕಾರ.

ಮಂಗಳೂರು ಎಸ್.ಜಿ.ಕ್ಯೂರ್ ಸಂಸ್ಥೆಯ ಕಾರ್ಯದರ್ಶಿಯವರೂ ಸಂಗೀತ ವಿದ್ಯಾಭಿಮಾನಿಗಳೂ ಆದ ಶ್ರೀ ಯಂ ಎ. ದೇವಡಿಗ ಮತ್ತು ಅವರ ಸಂಗಾತಿಯಾದ ಶ್ರೀ ಬಿ ಎಸ್ ಆನಂದ ರಾವ್ ಇವರನ್ನು ಆದರಪೂರ್ವಕವಾಗಿ ಸತ್ಕರಿಸುವ ನಿಮಿತ್ತವಾಗಿ ಕನ್ನಡ ಸಂಗೀತ ಸಭಾ ಎಮೆಚೂರ್ಸ್ ಮುಂಬಯ್ಗು, ಇವರಿಂದ ಶ್ರೀ ಯಂ ನಾರಾಯಣರಾವ್ ಇವರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದನ್ನು ಇದೇ ತಾ ೩೦-೩೮ನೇ ರವಿವಾರ ಬೆಳಿಗ್ಗೆ ೧೦ಕ್ಕೆ ಜರಗಿಸಲಾಯಿತು

ಸಭೆಯು ಆನಂತರ್ಯದಂತೆ ಅಂದಿನ ಸತ್ಕಾರಕ್ಕೂ ಪಾತ್ರವಾದ ಸಭೆಗೆ ಚಿತ್ತಯಿಸಿದ ಶ್ರೀ ಯಂ ಎ ದೇವಡಿಗ ಮತ್ತು ಶ್ರೀ ಬಿ ಎಸ್ ಆನಂದರಾವ್, ಇವರನ್ನು ಸನ್ಮಾನಪೂರ್ವಕವಾಗಿ ಸಭೆಗೆ ಸ್ವಾಗತಿಸಲಿಸಿ ಅಂದಿನ ಶುಭದಂತೆ ಅವರ ಗಾಯನ ಕಚೇರಿಯು ೩ ಗಂಟೆಯ ತನಕ ಸಂಗಾಯವ್ಯಾಪಿ ನೆಡೆದು ಹೃದಯಸಂತೃಪ್ತಿಕರವಾದ ಅವರ ಗಾಯನದಿಂದ ಸಭಿಕರು ಸಂತೋಷಪಡೆಸಿದರು ಬಳಿಕ ಶುಭದಂತೆ ಕಾರ್ಯದರ್ಶಿಯವರು ಅವರನ್ನು ಕೊಂಡಾಡಿ ಪುಷ್ಪಹಾರದೊಂದಿಗೆ ರೂ ೨೫೬ನ್ನು ಅವರಿಗೆ ಮಾನ ನಿಧಿಯಾಗಿ ಅರ್ಪಿಸಿ ಯೋಗ್ಯ ರೀತಿಯಿಂದ ಸತ್ಕರಿಸಿದ್ದಲ್ಲದೆ ಅವರಿಗೆ ಕಚೇರಿಯಲ್ಲಿ ಅವರಿಗೆ ಸಹಾಯಕರಾಗಿ ಬಂದು ಕುಶಲಾನಪ್ರಶ್ನೆಪಡೆದ ಶ್ರೀ ತಾರಾನಾಥರವರನ್ನೂ ಕೊಂಡಾಡಿ ಅವರಿಗೂ ಪುಷ್ಪಹಾರವನ್ನು ಕೊಟ್ಟು ಸತ್ಕರಿಸಿದರು ಒಳ್ಳೆ ಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಕಳೆದ ತಾ ೨೨ ಕ್ಕೆರಿದಾದ ಕನ್ನಡ ಸಂಗೀತ ಸಭೆಯು ಈ ಕೆಳಗೆ ಕಾಣಿಸಿದವ ವಿಳಾಸದಲ್ಲಿ ತನ್ನ ಆಫೀಸನ್ನು ಸ್ಥಾಪಿಸಿ ಎಂದಿನಂತೆ ಕಾರ್ಯದರ್ಶಿಯವರು ತಿಳಿಸುತ್ತಾರೆ

ವಿಳಾಸ —ನಂಬ್ರ ೨೩, ಪೋಲೀಸ್ ಕೋರ್ಟ್ ಲೈನ್, ಕೋಟೆ ಮುಂಬಾಯ್ಗು

(೧೩ನೇ ಪುಟದಿಂದ ಮುಂದುವರಿಸಿದುದು)

ನಮ್ಮ ಭಾರತದಲ್ಲಿ ಯಾವ ವಸ್ತುವೇ ಆಗಲಿ, ಒಮ್ಮೆ ಉಪಯೋಗಿಸಲ್ಪಟ್ಟುದಿಂದಲೇ ನಂತರ ಅದರಿಂದ ಯಾರೂ ಕಳ್ಳತ್ತಿಯೂ ನೋಡಲಾರರು ಇಲ್ಲಿ ನಾವು ಬಿಸಾಡುವ ಸಾಮಾನುಗಳಿಂದಲೇ ಜಪಾನು ಇನ್ನೂ ಕೈಗಾರಿಕೆಗಳನ್ನು ವೃದ್ಧಿಗೊಳಿಸಿ, ಈಗ ಮಾರುವದರ ಅರ್ಧ ದರದಲ್ಲಿ ಸಾಮಾನುಗಳನ್ನು ಮಾರುವುದು

ಜಪಾನಿನಲ್ಲಿ ಯಾವುದನ್ನೇ ಆಗಲಿ, ನಿಷ್ಪ್ರಯೋಜಕವೆಂದು ಬಿಸುಡಲಾರರು. ಹೇಟ್ಟಿನ ಬರೇ ಒಂದಿಂಚು ಚೆಚ್ಚಾಕದ ತುಂಡೇ ಆಗಲಿ, ಅದರಿಂದ ಕಾಲ್ಚೀಲ, ಬೆಲ್ಟು ಮತ್ತು ಹ್ಯಾಂಡ್ ಬ್ಯಾಗ್ ಇಂತಹ ಸಾಮಾನುಗಳನ್ನು ತಯಾರಿಸಿ ವಿಕ್ರಯಿಸುವರಲ್ಲವೇ?

ಕಬ್ಬಿಣದ ಚಿಕ್ಕ ತುಂಡುಗಳಿಂದ ಚಿಕ್ಕ ಕಿಸೆಚೂರಿಗಳನ್ನು ತಯಾರಿಸುವರು. ನಿಷ್ಪ್ರಯೋಜಕವಾದ ರಬ್ಬರಿನ ತುಂಡಿನಿಂದ ಚಿಕ್ಕ ಮಕ್ಕಳ ಆಟದ ಸಾಮಗ್ರಿಗಳನ್ನು ತಯಾರಿಸುವರು. ಇನ್ನೂ ಇಂತಹ ಅನೇಕ ಸಾಮಗ್ರಿಗಳನ್ನು ತಯಾರಿಸುವರು.

ಆದುದರಿಂದಲೇ ಇಂದು ಜಪಾನು ಜಗತ್ತನ್ನೆಲ್ಲಾ ತಲೆದೂಗಿಸಿಬಿಟ್ಟಿದೆ. ತನ್ನ ವ್ಯಾಪಾರೀ ಧೋರಣೆಯನ್ನು ತೋರಿ, ಇದೀ ಯುರೋಪು ಮತ್ತು ಅಮೇರಿಕಾ ಇವುಗಳ ವ್ಯಾಪಾರವನ್ನು ನಿರ್ದಾಕ್ಷಿಣ್ಯವಾಗಿ ಭಗ್ನಗೊಡಿಸಬಲ್ಲ ಒಂದೇ ಒಂದು ಶಕ್ತಿಯೆಂದರೆ ಜಪಾನು!

ಎಕ್ಸ್ ಅಂಗುಲದ ಮನುಷ್ಯ

ಲ್ಯಾಂಕ್‌ಷೈರಿನಲ್ಲಿ ಹ್ಯಾರಿಸಯರ್ ಎಂಬವನೊಬ್ಬ ನಿಸ್ಸನು. ಅವನಿಗೆ ೫೦ ವರ್ಷಗಳಾಗಿದ್ದಿತು ಅದರೆ ಅವನು ೩೬ ಅಂಗುಲ ಮಾತ್ರ ಬೆಳೆದಿದ್ದಾನೆ ಇವನು ಈಗ ಕೆಲವೇ ದಿನಗಳ ಹಿಂದೆ ಮರಣಹೊಂದಿದನು. ಇವನಷ್ಟಿಂಕಲೂ ಚಿಕ್ಕವರು ಯಾರೂ ಇಲ್ಲ.

ಕನ್ನಡ ಭಾಷಾವಿಶಾರದ

ಶ್ರೀ ವಂಜೆ ಮಂಗೇಶರಾಯರು, ಅಕ್ಕೋಬರ ತಾ ೨೫ರಲ್ಲಿ ಹೈದರಾಬಾದಿನಲ್ಲಿರುವ ಅವರ ಪುತ್ರ ಶ್ರೀ ಗೋಪಾಲರಾವ್ ವಂಜೆಯವರ ಮನೆಯಲ್ಲಿ, ನ್ಯುಮೋನಿಯಾ ಬಾಧೆಗೆ ಶಿಕ್ತಾದರೆಂದು ಕೇಳಲು ತುಂಬ ವ್ಯಸನವಾಗುತ್ತದೆ. ಕನ್ನಡ ನಾಡಿನ ಯಾವ ಪ್ರಾಂತ್ಯದಲ್ಲಾದರೂ, ಈ ತಲಾಂತರದ ಯಾವನೊಬ್ಬನೂ ಇವರು ಕನ್ನಡ ಭಾಷೆಗಾಗಿ ದುಡಿದುದಕ್ಕಿಂತ ಹೆಚ್ಚಾಗಿ ಇವರಿಗೆ ಆ ಭಾಷೆಯ ಮೇಲೆ ಹೆಜ್ಜಾಗಿದ್ದ ಪ್ರೇಮವನ್ನು ಸೃಕಃ ಅಥವಾ ಇತರರ ಮೂಲಕ ತಿಳಿಯದೆ ಇರಲಾರನು ಎನ್ನುವಷ್ಟು ಗಾಢವೂ ವಿಸ್ತಾರವೂ ಆಗಿ ಇವರ ಭಾಷಾ ಸೇವೆ ನಡೆದಿತ್ತು ಸಣ್ಣ ಕತೆ, ಹೊಸ ರೀತಿಯ ಕವಿತೆಗಳೂ ನಾಟಕ ಯಕ್ಷಗಾನ ಪ್ರಬಂಧ ಸುಶೋಧನೆ ಮೊದಲಾದುವನ್ನೆಲ್ಲ ನಮ್ಮ ನಾಡಿಂಕೈಂದ ಎಷ್ಟೋ ವರ್ಷಗಳ ಹಿಂದೆ ಇವರೇ ಮೊದಲಾಗಿ ಪ್ರಾರಂಭಿಸಿದ್ದುದರಿಂದ, ವರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಇವರನ್ನು ಹಿಂಬಾಲಿಸಿ ಕನ್ನಡ ಸಾಹಿತ್ಯದಲ್ಲಿ ನೂರಾರು ದಾರಿ ಹಿಡಿದವರ ಹಿಂದೇ ಇಲ್ಲಿ ಇವರನ್ನು ಕೊಂಡಾಡುತ್ತಲಿದೆ ಶಿಷ್ಟ ಸಾಹಿತ್ಯವನ್ನು ಇವರು ಪ್ರಾರಂಭಿಸುವ ಮೊದಲು, ಅದೊಂದು ಸಾಹಿತ್ಯ ವರ್ಗವು ಹುಟ್ಟಿರಲೆಇಲ್ಲವೆನ್ನಬೇಕು ಜಾತಿವಿಜಾತಿಯೆನ್ನಿಸಿ ಕನ್ನಡಸೇವಕರಲ್ಲೆಲ್ಲ ಇವರಿಗೆ ಅತ್ಯಕ್ಕೃಷ್ಟವಾದ ಅಭಿಮಾನದ ವಾತ್ಸಲ್ಯಗಳಿದ್ದವು ಇವರಿಗೂ ಸ್ವದೇಶಾಭಿಮಾನಕ್ಕೂ ಇದ್ದ ಸಂಬಂಧದಿಂದ, ನೂತನ ಕವಿತೆ ಸಣ್ಣ ಕಪತೆಗಳು ಮೊದಲಾದುವನ್ನು ಈ ವಕ್ತಿಕೆಯು ಇವರಿಂದ ಪಡೆದು ಪ್ರಕಟಿಸಿತ್ತು ಸದ್ಯದಲ್ಲಿ ಇವರ ಸ್ಥಾನದಲ್ಲಿ, ಇವರ ಸರ್ವತೋಮುಖವಾದ ಸಾಹಿತ್ಯಪ್ರಧ್ಯನು, ಹಾಸ್ಯರಸದ ವಿಚಿತ್ರ ವ್ಯಕ್ತಿನಿಸಾವರ್ಧ್ಯ ಶಾಲಾಪಾಸ್ತಕಗಳ ನೂತನ ರೀತಿಯ ರಚನೆ ಯಂತಾದುವನ್ನು ನೂಡಿಲು ಶಕ್ತಿಯುಳ್ಳವರು ಸದ್ಯಕ್ಕೆ ನುತ್ತೊಬ್ಬರೂ ತೋರುವಂತಿಲ್ಲ ಇವರ ಕೈಯಿಂದ ಹೊರಡೆಲಿದ್ದ ಇವರ ತುಂಬಾ ಅಭಿಮಾನಕ್ಕೆ ಕಾರಣವಾದ ಸಾರಣವ್ಯನಸ್ಕಾರದ ಸಂಗ್ರಹವನ್ನು ನಾವು ಎದುರ ನೋಡ ಕೈಲೇ ಇರುವಾಗ, ಎನೇರು ಹೀಗೆ ದೈವಾಧೀನರಾದುದು. ತೀರಾ ಶೋಚ್ಯವೆಯವು ಗವರ್ನಮೆಂಟು ಕೊಲೇಜು, ಟ್ರೈನಿಂಗ್ ಶಾಲೆ ಮತಾದ ಸಂಸ್ಥೆಗಳಲ್ಲಿ ಇವರು ಕುಂಬಾ ಸುಧಾರಣೆ ಮಾಡಿದ್ದು ಇಲ್ಲಿ ಇನ್ನೂ ಪೇಕ್ಷರಾಗಿದ್ದ ತಮ್ಮ ರೇಂಜಿನಲ್ಲಿ ಮಾಡಿದ ಸುಧಾರಣೆಗಳನ್ನು ಸರ್ವ ಉಪಾಧ್ಯಾಯರು ಮೆರೆಯಲಾರರು ಇವರ ಆಕ್ಮಕ್ಕೆ ಶಾಂತಿಯನ್ನೂ ಇವರ ಕುಟುಂಬದವರಿಗೆಲ್ಲ ಶೋಕ ಸಮಾಧಾನವನ್ನೂ ಭಗವಂತನು ಪಾಲಿಸಲಿ

(೧೩ನೇ ಪುಟದಿಂದ ಮುಂದುವರಿಸಿದುದು)

ಮುಂಗಳೂರು ಮುನಿಸಿಪಲ್ ಕೌನ್ಸಿಲಿನ ವಿಷಯಗಳು ಇದೇ ಬರುವ ತಾ ೧೫-೧೧-೧೯೪೨ನೇ ದಿನ ಸಂಜೆ ೫-೩೦ ಗಂಟೆಗೆ ಮುನಿಸಿಪಲ್ ಆಫೀಸಿನಲ್ಲಿ ಜರಗಲಿರುವ ದೆಂದು ಚೆಯರ್‌ಮೇನರಾದ ಶ್ರೀ ಡಾ ವಿಕ್ಟಲೆಸ್ಟ್ರಾದು ತಿಳಿಸುತ್ತಾರೆ.

ಮಂಗಳೂರು ಬಾರ್ ಎಸೋಸಿಯೇಶನ್‌ನವರು ಮದ್ರಾಸು ಸರಕಾರದವರು ನೂತನವಾಗಿ ಜಾರಿಗೆ ತರ ದೇಶಂದಿರುವ ರೈತರ ಪೊಜ್ಜೋರಿಯಮ್ ಕಾಸನದ ಕುರಿತು ಆಲೋಚಿಸಿ ಬಹುಮತವದರು ಅದನ್ನು ವಿರೋಧಿಸಲ್ಪಡುವುದು ಪಾಸಾಯಿತು. ಅಲ್ಲದೆ ವಿಶೇಷನೆಯದಾಗಿ ಹಿಗ್ಗಿ ಪಶುಸ್ಯಿಯಲ್ಲಿ ಜಪ್ತಿಮಿಸಿಲ್, ಮತ್ತು ವಿಕ್ಟ್ರಿಸಿಟಿ ರಿಪೇರ್ಮುಮಟ್ಟುಗಳನ್ನು ದೇಲೆ ದೇಶಯಾಗಿ ಬಹಿಗಿಸಿ ನಿರ್ಣಯಿಸುವಮ. ನ್ಯಾಯಾರ್ಥಕಕ್ಕೆಯ ಅಷ್ಟಕತೆಗೆ ಹೆಚ್ಚಿನ ಅನುಕೂಲವಾಗಬಹುದಾಗಿ ಬಹು

ದ. ಕ. ಜಿಲ್ಲಾ ಮೆಡಿಕಲ್ ಅಸೋಸಿಯೇಶನ್

ಇದರ ೭೫ನೇ ವಾರ್ಷಿಕ ಮಜಾನಷ್ಟೆಯು ಕಳೆದ ತಾ ೨೬-೧೦-೧೯೪೨ರಲ್ಲಿ ಶ್ಯಾಮ ಫೆಂಟೆ ಹೈಂಕ್ಳ ಮೆಸ್‌ರೋ ಆಸ್ಪತ್ರೆಯ ವಕಾರದಲ್ಲಿ ಡಾ। ಎಮ್. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಸಭೆಯಲ್ಲಿ ಎಲ್ಲಾ ಸದಸ್ಯರೂ ಆಜ್ಞೆದೆ ಸದಸ್ಯರಲ್ಲದವರೂ ನೆರೆದಿದ್ದರು. ಸ್ವಾಗತಾಧಿಕೇಶನವು ಪ್ರಾರಂಭಿಸುವ ಮೊದಲು ನಮ್ಮ ಸಂಸ್ಥಾನದ ಆರೋಗ್ಯ ಇಲಾಖೆಯ ಪುಂಖ್ರಿಗಳಾದ ಮಾನ್ಯ ಡಾ। ಟಿ ಎಸ್ ಎಸ್. ರಾಜನವರಿಂದ ಮೆಡಿಕಲ್ ಎಸೋಸಿಯೇಶನಿನ ಶ್ರೇಯಸ್ಸನ್ನು ಮತ್ತು ಜಿಲ್ಲೆಯ ಆರೋಗ್ಯ ಸಂರಕ್ಷಣೆಯ ಕುರಿತು ವೈದ್ಯರಲ್ಲರೂ ಸಹಾನುಭೂತಿ ಮತ್ತು ಅನುರಾಗದಿಂದ ವರ್ತಿಸಬೇಕಾಗಿ ಬಂದ ಸಂದೇಶವನ್ನು ಸಭೆಯವರಿಗೆ ಓದಿ ತಿಳಿಸಿದ ನಂತರ ಎಸೋಸಿಯೇಶನಿನ ಗತವರ್ಷದ ಲೆಕ್ಕಾಚಾರದ ವರದಿಯನ್ನು ಸಭೆಯವರಿಂದ ಅಂಗೀಕರಿಸಲ್ಪಟ್ಟು ಮುಂದಿನ ವರ್ಷದ ಬಜೆಟನ್ನು ಪಾಸುಮಾಡಲಾಯಿತು ನಂತರ ಈ ಎಸೋಸಿಯೇಶನ್ನನ್ನು ಇಂಡಿಯನ್ ಮೆಡಿಕಲ್ ಎಸೋಸಿಯೇಶನ್‌ಗೆ ಸೇರಿಸಿಕೊಳ್ಳುವಂತೆ ನಿರ್ಧಾರಮಾಡಲಾಯಿತು ಅಲ್ಲದೆ ೧೯೪೩ ಇಸವಿಗಾಗಿ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಲಿರುವವರ ಹೆಸರುಗಳನ್ನು ಸೂಚಿಸಿ ಸಭೆಯು ಮುಕ್ತಾಯವಾಯಿತು

ಇದರನಂತರ ಚಾಲಿಯಹಾರದಮಗಿದೆಯಿಂದಿನ ವರ್ಷದ ಬಗ್ಗೆ ಕೆವ್ಹಸ್ ಕೆ ಕೆ ಸಂಪಯಿಂಗರ್ ಬಿ. ಎ ಎಮ್ ಬಿ ಎಂಡ್ ಬಿ ಎಸ್ ಇವರನ್ನು ಅಧ್ಯಕ್ಷರಾಗಿಯೂ, ಡಾ। ಕೆ ಆರ್ ಶೆಣೈ, ಎಂ ಬಿ ಎಂಡ್ ಬಿ ಎಸ್ ಇವರನ್ನು ಒಪರರು ಕಾರ್ಯದರ್ಶಿ ಮತ್ತು ಕೋಷಾಧ್ಯಕ್ಷರಾಗಿ ಆರಿಸಲಾಯಿತು. ಅಲ್ಲದೆ ಮುಂದಿನ ಸದಸ್ಯರನ್ನು ಕಾರ್ಯಕಾರಿ ಸಮಿತಿಗೆ ಚುನಾಯಿಸಲಾಯಿತು. ಆ ಮೇಲೆ ಡಾ। ಯು ಸಿ ಮಲ್ಯರು ಸಂಘದ ಪ್ರಗತಿಯ ಕುರಿತು ಭಾಷಣಮಾಡಿದರು ಆವರು ಕಳೆದ ೭ ವರ್ಷಗಳಿಂದ ಸಂಘವು ನಿರ್ವಹಿಸಿದ ಕಾರ್ಯಕ್ರಮ ಮತ್ತು ಪ್ರದರ ಅಭಿವೃದ್ಧಿಯ ಕುರಿತು ಶ್ಲಾಘಿಸಿದ್ದಲ್ಲದೆ ಸಂಘದ ಉದ್ದೇಶವು ಬರೇ ವೈದ್ಯಕೀಯ ಅನುಭವ ಮತ್ತು ಅದರ ಉದ್ಯೋಗ ಸಮಸ್ಯೆಯ ಕುರಿತಾದ ವಾಸ್ತವಿಕ ಹಿಗಾ ತೆಗೆದುಕೊಳ್ಳುವುದಲ್ಲದೆ ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಮಂಗಳೂರಿನಲ್ಲಿ ವಿಶೇಷವಾಗಿ ಜನರನ್ನು ಬೀಡಿಸುತ್ತಿರುವ ವಿಸಮಜ್ವರ ಮತ್ತು ಕ್ಷಯರೋಗದ ನಿವಾರಣೆ ಕುರಿತು ಆಗತ್ಯವಿರುವ ಸಾಧನಗಳ ಕುರಿತು ಪರ್ಯಾಲೋಚಿಸಿ ಅದರ ನಿವಾರಣಾ ಕಾರ್ಯಕ್ಕೆ ಆತ್ಯವಶ್ಯವಿರುವ ವ್ಯವಸ್ಥೆಯ ಕುರಿತು ಸ್ಥಳೀಯ ಪ್ರಾಂತಿಕ ಸರಕಾರದ ಸಹಾಯವನ್ನು ಪಡೆಯುವರೆಗೆ ಜಿಲ್ಲಾವಾಸಿಗಳಿಂದ ವಿವರಿಸಿ ಹೇಳಿದರು. ಮಾತೃವಲ್ಲದೆ ನಮ್ಮ ಜಿಲ್ಲೆಯ ಅನೇಕ ಗ್ರಾಮಾಂತರ್ಲ್ಲಿ ಎಲ್ಲಿ ಜನರಿಗೆ ಆಸ್ಪತ್ರೆಗಳ ಅನುಕೂಲವಿಲ್ಲವೆಂದೂ ನೋಡಿ ಅಲ್ಲಲ್ಲಿ ಬಕ್ಕ ಆಸ್ಪತ್ರೆಗಳನ್ನು ಕೆರೆಯಿಸುವಂತೆ ಸ್ಥಳೀಯ ಪ್ರಾಂತಿಕ ಸರಕಾರದ್ಕೆಳ್ಳಿ ಎನವಿ ಮಾಡಿಕೊಳ್ಳಲಾಯಿತು ಕೂಡಲೆ ಸಂಘದ ಸಮಿತಿಯ ಕರ್ತವ್ಯವಾಗಿಯೂ ಮತ್ತು ಇಂತಹ ಜನೋಪಕಾರದ ಕಾರ್ಯಗಳಲ್ಲಿ ಪೂರ್ವದಲ್ಲಿ ಜನಾನುರಾಗವನ್ನೂ ಕೀರ್ತಿಯನ್ನೂ ಪಡೆಯುವಂತೆ ಸಂಘದ ಸದಸ್ಯರಿಲ್ಲಂಡಿ ೧ ರೂಪ್ಯಾದಿಂದ ಸಹಿಸಿಕೊಂಡು, ಸಂಘವನ್ನು ಇನ್ನೂ ಆಭಿವೃದ್ಧಿ ಹೊಂದುವಂತೆ ಕೃಯತ್ನಿಸಬೇಕೆಂದೂ ಸಮಿಸ್ತರವಾಗಿ ತಿಳಿಸಲಾಯಿತು ಅನಂತರ ಜಿಲ್ಲಾ ಮೆಡಿಕಲ್ ಆಫೀಸರಾದ ಕೆವ್ಹಸ್ ನಂದಿಯಾರ್‌ರವರು ಬೋಡದಾಯಕವಾದ ಭಾಷಣವು ಮುಗಿದನಂತರ ಮಂಗಳೂರ ನಗರ ಸ್ವಾಧ್ಯಕ್ಷರು ನೀಡಿಸಿ ಕೊರಕೆ ಮತ್ತು ಕ್ಷಯರೋಗ ನಿವಾರಣೆ ಕುರಿತು ನೂರ ಸಭೆಯು ತುಂಬಾ ಗಮನಿಸುತ್ತಿರುವುದಾಗಿಯೂ ಮತ್ತು ಸಿರನ್ನು ಒದಗಿಸುವ ವಿಚಾರದಲ್ಲಿ ನಗರ ಸಭೆಯವರು ಈ ಬರೆಗೆ ಸುಮಾರು ರೂ ೨೦೦೦ ಖರ್ಚುಮಾಡಿರುತ್ತಾರಾಗಿಯೂ ಇನ್ನೂ ಸದ್ಯದಲ್ಲೇ ಆದರ ಯೋಜನೆಯು ಕಾರ್ಯರೂಪಕ್ಕೆ ತೆಸ್ಸಲ್ಪಡುವುದಾಗಿಯೂ ಭರವಸೆಯನ್ನಿತ್ತರು ರಸ್ತೆಗಳಿಗೆ ಡಾಮರು ಹ

ಇಂದಿನ ವಿಷಯವು

ಜಪಾನು – ಇತರ ಪ್ರಮುಖರಾಷ್ಟ್ರಗಳ ವ್ಯಾಪಾರಗಳನ್ನು ಹೇಗೆ ಬಗ್ಗುಬಡಿಯುತ್ತಿದೆ?

ವ್ಯಾಪಾರೀಜಗತ್ತಿನಲ್ಲಿ ಜಪಾನಿನ ನ್ಯಾಮುಮ್ಯಿತೆಯಂತು?

ನಾವು ಅಂಗಡಿಗಳಿಂದ ಬಾಟ್ಲಿಗಳನ್ನು ಕೊಂಡುಕೊಳ್ಳುತ್ತೇವೆ. ಮನೆಗೆ ತರುತ್ತೇವೆ. ಹಣಾ ಬಾಟ್ಲಿಯೊಡೆದು ಹೋಗುತ್ತದೆ. ಆಗ ಆ ಬಾಟ್ಲಿಗಳಿಗಿದ್ದ ಕಾರ್ಕಿನ (ಬೂಚಿ) ಗತಿ ಯೇನು? ಅವನ್ನು ಕೂಡ ಬಿಸಾಡುತ್ತೇವೆ. ಎಲ್ಲಾದರೂ ಮನೆಯನ್ನು ನಡೆಸುವುದರಲ್ಲಿ ನಿಸ್ಸಾತೆಯಾದ ಗೃಹಿಣಿಯ ಯಾ ಸೇವಕಿಯ ಕೈಗೆ ಬಿದ್ದಲ್ಲಿ ಅದು ಹಲವು ಸಮಯವಾದರೂ ಉಳಿಯುವುದು. ಆದರೂ ಆಕೆಯ ಕೈಯಲ್ಲೂ ಮತ್ತೆರಡು ಯಾ ಮೂರು ಬಾಟ್ಲಿಗಳನ್ನು ಅಲಂಕರಿಸಿ ಕೊನೆಗೆ ಕಸದ ಕಿಪ್ಪೆಗೆ ಛೀಳುವುದು. ಕೊನೆಗೆ ಆ ಕಸವನ್ನು ರಸ್ತೆಯ ಬದಿಯ ಚರಂಡಿಗಳಲ್ಲಿ ಬಿಸುಟೊಡನೆ, ಅದರೊಂದಿಗೇನೇ ಆ ಕಾರ್ಕಿನ ಅಂತ್ಯವೂ ಆಯಿತು.

ಆದರೆ ಜಪಾನಿನಲ್ಲಿ ಹಾಗಲ್ಲ. ಇಂದಿನ ಜಗತ್ತಿನಲ್ಲಿ ಕಾರ್ಕುಗಳ ಖರ್ಚು ವಿಪರೀತವಾಗಿದೆ. 'ಕಾರ್ಕು'ಗಳಿಲ್ಲದ್ದರೂ ಸಾಕಾಗುವುದಿಲ್ಲ. ಇನ್ನು ಹಲವೇ ತಿಂಗಳಲ್ಲಿ 'ಕಾರ್ಕು'ಗಳು ಬೇಕಾದ ಸಂಖ್ಯೆಗಿಂತ ಕಡಿಮೆಯಾಗುವ ಸಂಭವವಿದೆ. ಅಲ್ಲದೆ 'ಕಾರ್ಕು'ಗಳನ್ನು ತಯಾರಿಸುವ ಖರ್ಚು ಬಹಳವಿದೆ. ಮತ್ತು ಇದನ್ನು ಜಪಾನು ತಿಳಿದಿದೆ.

ಹಲವು ದಿನಗಳಿಗೊಮ್ಮೆ ನುನುಷ್ಯನೊಬ್ಬನು ಮನೆಗಳನ್ನೆಲ್ಲಾ ಸಂದರ್ಶಿಸುವನು. ನಾಗರಿಕರು ತಮ್ಮ ಗೃಹಕೃತ್ಯಗಳ ಪರಿಪೂರ್ಣತೆಗಾಗಿ ಕಸದೊಡನೆ ಶೌಚಗಳಗಳಲ್ಲಿ ಬಿಸುಟ ಹಳೆಯ ಕಾರ್ಕುಗಳನ್ನೆಲ್ಲಾ ಎತ್ತಿಕೊಳ್ಳುವನು. ಈ ರೀತಿಯಲ್ಲಿ ಪ್ರತಿದಿನವೂ ನೂರಾರು ಜನರು ಕಪ್ಪುಪಟ್ಟು, ಪುನಃ ಉಪಯೋಗಿಸಲಿಕ್ಕೆ ಅಸಾಧ್ಯವಾದ 'ಕಾರ್ಕು'ಗಳನ್ನು ಶೇಖರಿಸುವರು. ನಂತರ ಒಮ್ಮೆ ಇವನ್ನೆಲ್ಲಾ ಒಟ್ಟುಗೂಡಿಸಿ, ಒಕಾರ್ಯಾಮಾದಲ್ಲಿನ ಗಿರಣಿಯೊಂದಕ್ಕೆ ಕೊಂಡೊಯ್ಯುವರು. ಅಲ್ಲಿ 'ಹುಡಿಗುಟ್ಟುವ ಯಂತ್ರ'ಗಳಲ್ಲಿ ಅವನ್ನು ಹಾಕುವರು. ನಂತರ ವಿದ್ಯುಚ್ಛಕ್ತಿಯ ಅಪಾರ ಶಕ್ತಿಯಿಂದ ಯಂತ್ರದ ಚಕ್ರಗಳು ತಿರುಗುತ್ತಿರಲು, ಒಂದೆಡೆಯಿಂದ 'ಕಾರ್ಕು'ಗಳ ನುಣುಪು ಚೂರ್ಣವು ಕೆಳಬೀಳುವುದು.

ಈ ಚೂರ್ಣವನ್ನು ಒಂದು ತರದ ದ್ರವದಲ್ಲಿ ಹಾಕುತ್ತಾರೆ. ನಂತರ ಆ ಮಿಶ್ರಣವನ್ನು ಪುನಃ ಮತ್ತೊಂದು ರೀತಿಯ ಯಂತ್ರಗಳಲ್ಲಿ ತಾನಾತರದ 'ಕಾರ್ಕು'ಗಳ ಅಚ್ಚುಗಳಲ್ಲಿರುವ ಒಂದು ಯಂತ್ರದಲ್ಲಿ ಹಾಕುತ್ತಾರೆ. ಹಲವೇ ಕ್ಷಣಗಳಲ್ಲಿ ಆ ಯಂತ್ರದ ದ್ವಿತೀಯದ್ವಾರದಿಂದ 'ಕಾರ್ಕು'ಗಳ ಸುರಿಮಳೆ ಬೀಳುತ್ತದೆ.

ನಂತರ ಹಲವೇ ದಿನಗಳಲ್ಲಿ ಅಂಗಡಿಗಳಲ್ಲಿ ಬಣ್ಣಬಣ್ಣಗಳಿಂದ ರಂಜಿತವಾದ ತರತರದ 'ಕಾರ್ಕು'ಗಳು ಮಾರಾಟಕ್ಕೆ ಬಾಯ, ಳಿದ್ಧವಾಗಿ ನಿಲ್ಲುತ್ತವೆ. ಅಲ್ಲದೇ ಅದೇ 'ಕಾರ್ಕ'ನ ಹುಡಿಯಿಂದ ತಯಾರಾದ ಮೆಟ್ಟಿನ ತೋಡುಗಳನ್ನು, ಜಾಜಿಗಳನ್ನು ನಾವು ಅಂಗಡಿಗಳಲ್ಲಿ ಕಾಣುತ್ತೇವೆ. ಅವುಗಳನ್ನು ಕೊಂಡುಕೊಂಡು, ಮನೆಗೆ ಹೋಗಿ ಇಷ್ಟು ಅಲ್ಪ ಕೃಯಕ್ಕೆ ಇಂತಹ ಮೌಲ್ಯವನ್ನು ತಂದ ನಮ್ಮ ಬುದ್ಧಿಶಕ್ತಿಯನ್ನು ಮನಸ್ಸಿಲ್ಲಿರಿಸಿ, ಚರ್ಚಿಸುತ್ತೇವೆ. ಆದರೆ ನಮಗೆ ಅರಿವಿಲ್ಲ—ನಾವು ಒಂದು ಯಾ ಎರಡು ತಿಂಗಳ ಹಿಂದೆ ಕಸದ ಬುಟ್ಟಿಯಲ್ಲಿ ಬಿಸಾಡಿದ 'ಕಾರ್ಕಿ'ನ ತುಂಡುಗಳೇ ಈ ಸಾಮಾನುಗಳೆಂದು.

ಇನ್ನು ಜಪಾನಿನಲ್ಲಿ ತಯಾರಿಸಲ್ಪಟ್ಟು ಈಗ ಅಗ್ಗವಾಗಿ ದೊರೆಯುವ ಒಂದು ಕಿಸೆಗನ್ನಡಿಯನ್ನು ನೋಡಿರಿ. ಅದು ದಪ್ಪವಾಗಿರುತ್ತದೆ. ಅದರ ಅಂಚುಗಳನ್ನು ಮುಟ್ಟಿ ನೋಡಿರಿ. ಅಲ್ಲಿ ಒಂದು ಅಂಚಿನ ಬದಲಿಗೆ ಎರಡು ಕಡಿದ ಬರಿದು ಅಂಚುಗಳನ್ನು ಕಾಣುವಿರಿ. ಹಾಗಿದ್ದಲ್ಲಿ ಆ ಕನ್ನಡಿಯು ಛಾಯಾಗ್ರಾಹಕ ಯಂತ್ರದ ಉಪಯೋಗಕ್ಕಾದ ಕನ್ನಡಿಯೆಂದು ತಿಳಿಯಿರಿ.

ಸಾಧಾರಣ ಕನ್ನಡಿಗಳನ್ನು ತಯ್ಯಾರಿಸಲು ವೆಚ್ಚವು ಅಧಿಕವಾಗಿ ತಗಲುತ್ತದೆ. ಆದುದ್ದರಿಂದ ಜಪಾನಿನಲ್ಲಿ ತಯ್ಯಾರಾಗಿ ಮಾರಲ್ಪಡುವ ಕನ್ನಡಿಗಳಿಗಿಂತ ಕಡಿಮೆ ಕ್ರಯದಲ್ಲಿ ಇತರ ರಾಷ್ಟ್ರಗಳು ಮಾರುವುದೆಂದರೆ ಅದು ಅಸಂಭವ.

ಛಾಯಾಗ್ರಾಹಿ ಯಂತ್ರದ ಉಪಯೋಗಿತವಾದ ಕನ್ನಡಿಗಳು ವೃರ್ಥವಾಗಿರುತ್ತವೆ; ಅವುಗಳ ಕೆಲಸವನ್ನು ಅವು ಪೂರ್ಣಗೊಳಿಸಿವೆ; ಇನ್ನು ಅವುಗಳನ್ನು ಬಿಸುಡಬಹುದು. ಆದರೆ ಜಪಾನಿಯರು ಎಂತಹ ವಿಲಿಯೋಗಕ್ಕೆ ವಸ್ತುವನ್ನೇ ಆಗಲಿ, ಬಿಸಾಡಲಾರರು. ಹಲವು ದ್ರವಗಳು-ಮತ್ತು ಅಲ್ಪಸ್ವಲ್ಪ ಬುದ್ಧಿವಂತಿಕೆ-ಇವುಗಳಿಂದ ಅರೆಕ್ಷಣದಲ್ಲಿ ಕನ್ನಡಿಯು ಸಿದ್ಧವಾಯಿತು. ಬೇರೆ ಕನ್ನಡಿಗಳಿಗೆ ಹದಿನೆರಡಾನೆ ಕ್ರಯವಿರುವಾಗ ಈ ಕನ್ನಡಿಯು ಬರೇ ಎರಡಾನೆಗೆ ಮಾರಲ್ಪಟ್ಟಿದೆ. ನಿಮ್ಮ ಜೀವನವು ಭದ್ರವಾಗಿ ಆಶ್ರಯಿಸಿಕೊಳ್ಳುವುದು.

ಕಾರಣವು ಸುಲಭವಾಗಿರುತ್ತದೆ. ಛಾಯಾಗ್ರಾಹಕ ಯಂತ್ರದ ಕನ್ನಡಿಗಳು ೯ ಮಿಲ್ಲಿ ಮೀಟರುಗಳಿಗಿಂತ ದಪ್ಪವಿರುವುದಿಲ್ಲ. ಆದುದರಿಂದ ದಪ್ಪವಾದ ಕನ್ನಡಿಗಳನ್ನು ತಯಾರಿಸಲು ಎರಡು ಛಾಯಾಗ್ರಾಹಕ ಯಂತ್ರದ ಕನ್ನಡಿ (ಪ್ಲೇಟು)ಗಳನ್ನು ಇಡಬೇಕಾಗುತ್ತದೆ. ಆದುದರಿಂದ ಅವು ಅಷ್ಟು ದಪ್ಪವಾಗಿನೆ.

ಜಪಾನಿಗೆ ಸಂಚಾರಾರ್ಥವಾಗಿ ತೆರಳಿದ ಜನರು ಹೀಗೆನ್ನುವರು. 'ಅವರಿಗೆ ಕನ್ನಡಿಯನ್ನು ತಯಾರಿಸಲು ಕಾಗುವ ಖರ್ಚಿಗಿಂತಲೂ ಕಡಿಮೆ ದರದಲ್ಲಿ ಅವುಗಳನ್ನು ಮಾರುತ್ತಾರೆ. ಹೀಗಾದರೆ ಅವರಿಗೆ ಲಾಭವೆಲ್ಲಿ? ನಷ್ಟವಾದುತಲ್ಲ!' ಹಾದ್ದು; ನಷ್ಟವೇ ಆಗುವುದು-ಉಪಯೋಗಿಸಿ, ಉಳಿದ ಛಾಯಾಗ್ರಾಹಕ ಯಂತ್ರದ ಪ್ಲೇಟುಗಳನ್ನು ಇತರರಂತೆ ಬಿಸುಟರೆ ಮಾತ್ರ.

ಅನ್ಯದೇಶದ ನಾರಿಯರು ತಮ್ಮ ಪತಿಯರೊಡನೆ, 'ನನ್ನ ಉಡುವು ಹರಿದುಹೋಗಿದೆ, ಮಾಡಲೇನು?' ಎಂದು ಕೇಳಿದ್ದಲ್ಲಿ, ಆ ಪತಿಯರು 'ಹರಿದುಹೋಯಿತೇನು? ಅದನ್ನು ಬಡವರಿಗೆ ಕೊಟ್ಟು, ಹೊಸ ಉಡುವನ್ನು ಕೊಂಡುಕೋ' ಎನ್ನುವರು. ಅದರೆ ಜಪಾನಿನಲ್ಲಿ ಹಾಗಲ್ಲ. ಅಲ್ಲಿನ ಸ್ತ್ರೀಯು ಕೇಳುವುದು ಸಹ ಇಲ್ಲ. ಹರಿದುಹೋದ ಉಡುವನ್ನು ನೆಟ್ಟಿಗೆ ಪೇಟೆಗೆ ಕೊಂಡುಹೋಗಿ, ಮಗ್ಗದವನ ಕೈಗೆ ಕೊಡುವಳು. ಅವನ್ನು ಅದನ್ನು ಕೈಮಗ್ಗದಲ್ಲಿ ಹಾಕಿ, ಬರೇ ಹತ್ತು ನಿಮಿಷಗಳ ಕೆಲಸದಿಂದ ಅದನ್ನು ಹಿಂದೆ ತಂದುಕೊಡುವನು. ಆಗ ಅದು ಹೊಚ್ಚ ಹೊಸ ಉಡುವಿನಂತೆ ಹೊಳೆಯುತ್ತಿರುತ್ತದೆ.

೧೧ನೇ ಪುಟವನ್ನು ನೋಡುವುದು.

ಪ್ರಕಟಣೆ

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಮಂಗಳೂರು ಶಹರ್ ನೆಲ್ಲಿಕಾಯಿ ಶ್ರೀನಿವಾಸರಾಯರ ಸುಗ ವೆಂಕಟಕೃಷ್ಣರಾಯರ ಸಂಪೂರ್ಣ ಹಕ್ಕಿನ ಈ ಕೆಳಗೆ ಶೆಡ್ಯೂಲಿನಲ್ಲಿ ವಿವರಿಸಿದ ಸ್ಥಿರಾಸ್ತಿಗಳನ್ನು ವಿಕ್ರಯಿಸುವರೇ ಆದಿಂದ ತಾ. 16—8—1938ನೇ ತಾರೀಕಿಗೆ ರಿಜಿಸ್ಟ್ರಿಯಾದ ಜನರಲ್ ಪವರ್ ಆಫ್ ಎಟೋರ್ನಿ ಮೂಲಕ ಪೂರ್ಣಾಧಿಕಾರ ಹೊಂದಿದ ಮಂಗಳೂರು ಶಹರಿನಲ್ಲಿರುವ ಸಾಹುಕಾರ ಮಿಜಾರ ಅಣ್ಣಯ್ಯಗೆಳ ಮಗ ಮಿಜಾರ್ ಗೋವಿಂದ ಪೈ ಇವರಿಂದ ಸದ್ರಿ ಸ್ಥಿರಾಸ್ತಿಗಳು ಕೆಳಗೆ ಕಾಣಿಸಿದಂತೆ ಲೀಂಡ್ ಆಗಿ ಮಂಗಳೂರು ಶಹರು ತೇರುಬೀದಿಯಲ್ಲಿರುವ ದಿ ಕೆನರಾ ಬೇಂಕಿಂಗ್ ಕೊರ್ಪೊರೆಶನ್ ಉಡುಪಿ ಲಿಮಿಟೆಡ್ ಇದರ ಆಫೀಸಿನಲ್�ಿ ತಾ. 15-11-1937ರಲ್ಲು ಏಲಂ ಕೈದು ಪರಿಯಂತರ ಬಹಿರಂಗವಾಗಿ ಹರಾಜು ಮೂಲಕ ಮಾರಾಟಮಾಡಲ್ಪಡುವುವು. ಖಾಯಸವಳ್ಳದವರು ಸದ್ರಿ ಹರಾಜಿನಲ್ಲಿ ಕೊಂಡುಕೊಳ್ಳಬಹುದು. ನೂರು ವಾರ ಕಾಯಂ ಮಾಡುವುದು ಯಾ ಏಲಂ ಮಾಡದಿರುವುದು ಮಾಡುವವರ ಇಷ್ಟದ ಮೇಲೆ ಹೊಂದಿರುತ್ತದೆ.

ಗೆದ್ದ ದರಕಾಸ್ತುದಾರನು ತನ್ನ ಹೆಸರಿನಲ್ಲಿ ನೂರು ವಾರು ಆದ ಕೂಡಲೇ ಏಲಂ ಮೊಬಲಗಿನ ಪೈಕಿ ನಾಲ್ಕನೆಯ ಒಂದಂತವನು ಕೂಡಲೇ ತೆರತಕ್ಕದ್ದು. ಉಳಿದ ಐವಜನ್ನು ಏಲಂ ಕಾಯಂ ಆದ 15 ದಿವಸಗಳ ಒಳಗೆ ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್ ಮಂಗಳೂರು ಇವರಿಗೆ ಪಾವತಿಮಾಡಿ ರಶೀದಿ ಪಡೆಯತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಕಾಸ್ತುದಾರನು ಡಿಪೋಜಿಟ್ ಮಾಡಿದ ಕಾಲಾಂತರ ಹಣವನ್ನು ಕಳಕೊಳ್ಳುವುದಲ್ಲದೆ, ಸದ್ರಿ ದರಕಾಸ್ತುದಾರನ ನಷ್ಟದ ಸಂಭವದ ಮೇಲೆ ಸದ್ರಿ ಆಸ್ತಿ ಪುನಃ ಏಲಂ ಮಾಡಲ್ಪಡುವುದು. ಮತ್ತು ಹಾಗೆ ಮಾಡಲ್ಪಡುವ ಎರಡನೆಯ ಏಲಮಿನಲ್ಲಿ ಹುಟ್ಟುಬಂದ ಏನಾದರು ನಷ್ಟವಿದ್ದಲ್ಲಿ ಅದನ್ನು ಮೊದಲಿನ ಏಲಮಿನ ಏವಜಿಗಿಂತ ಕಡಿಮೆಯಾದಲ್ಲಿ ಹಾಗೆ ಕಮ್ಮಿಯಾಗುವ ಸದ್ರಿ ನಷ್ಟದ ಮೊಬಲಗನ್ನು ಏಲಂ ತಾರೀಕು ಲಾಗಾಯ್ತು ವಸೂಲು ವರೆಗೆ ಸಾಲಿಯಾನ್ ಸೇಕಡಾ 12½ರ ದರದ ಲಡ್ಡಿ ಸಮೇತ ಕೊಡುವರು. ಪ್ರಥಮ ದರಕಾಸ್ತುದಾರನು ಬದ್ದದಾಗಿರಬೇಕು. ಹೊರತು ಎರಡನೇಯ ಏಲಮಿನಲ್ಲಿ ಹೆಚ್ಚಿಗೆ ಏವಜ್ಜು ಹುಟ್ಟಿಬಂದರೆ, ಅದನ್ನು ಕೇಳಲು ಕಪ್ಪಿದರಕಾಸ್ತುದಾರನಿಗೆ ಹಕ್ಕು ಇರುವುದಿಲ್ಲ.

ಗೆದ್ದ ದರಕಾಸ್ತುದಾರನು ದರಕಾಸ್ತಿನ ಮೊಬಲಗನ್ನು 15 ದಿನಸಗಳ ಒಳಗೆ ವಸೂಲುಕೊಟ್ಟಲ್ಲಿ ಅತನ ಹೆಸರಲ್ಲಿ ದರಕಾಸ್ತು ಕಾಯಂ ಮಾಡಿ ಸದ್ರಿ ದರಕಾಸ್ತುದಾರನ ಖರ್ಚಿನಿಂದ ಆಗತ್ಯವಿರುವ ದಸ್ತಾವೇಜು ಸದ್ರಿ ಅಧಿಕಾರ ಹೊಂದಿದ ನಸ್ಸಿಂದ ರಿಜಿಸ್ಟ್ರಿ ಸಹಿತ ಬರಕೊಡಿಸೋಣಾಗುವುದು. ಪ್ರಥಮ ದರಕಾಸ್ತಿನ ಮೊಬಲಗನ್ನು ವ್ಯಾದಿ ಒಳಗೆ ವಸೂಲು ಕೊಡದ ಸಂಗತಿಯಲ್ಲಿ ಮಾರಲ್ಪಡುವ ಎರಡನೇ ದರಕಾಸ್ತಿನ ರೂಲುಗಳು ಸಹಾ ಮೇಲೆ ಕಾಣಿಸಿದಂತೆಯೇ ಆಗಿರುತ್ತವೆ.

ಏಲಮಿಗೆ ಕಾರಣವಾದ ಆಸ್ತಿಗಳು ಮಂಗಳೂರು ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನಿಗೆ ಸದ್ರಿ ನೆಲ್ಲಿಕಾಯಿ ವೆಂಕಟಕೃಷ್ಣರಾಯರು ಬರಕೊಟ್ಟ ದಕ್ಷಿಣಕನ್ನಡ ಜಿಲ್ಲಾ ರಿಜಿಸ್ಟ್ರಾರ ಆಫೀಸು ನಂಬ್ರ 617/38ಕ್ಕೆ ರಿಜಿಸ್ಟ್ರಿ ಸಿಕಿ ಆದ Indemnity Bondನಲ್ಲಿ ಸೇರಿರುತ್ತವೆ. ಪ್ರಕೃತ ಹರಾಜು ಮಾಡಿದ ಆಸ್ತಿಗಳ ಕ್ರಯದ ಪ್ರತಿಫಲವು ಸದ್ರಿ ಕೊರ್ಪೊರೇಶನ್ ಬ್ಯಾಂಕಿಗೆನೇ ಪಾವತಿಮಾಡ್ಬೇಕುವುದರಿಂದ ಅಂಥಾ ಜಪಾಬುದಾರಿಯ ಏಲಮಿನಲ್ಲಿ ಪಡಕೊಳ್ಳುವವರ ಮೇಲಾಗಲೀ ಅವರು ಪಡಕೊಳ್ಳುವ ಆಸ್ತಿಯ ಮೇಲಾಗಲೀ ಏಷ್ಟನ್ನಾದ್ರೂ ಹೊಣೆಯಾಗುವುದಿಲ್ಲ.

ನಾನು ಬರೇ ವಿಜಂಟನಾಗಿರುವುದರಿಂದ ಹಕ್ಕುಗಳ ಕುಂದುಕೊರತೆಗಳನ್ನು ಅವರವರೇ ತಿಳಿದುಕೊಳ್ಳಬೇಕಾಗಿರುವುದು ವಿನಹಾ ನನ್ನ ಸ್ವಂತ ಏನೊಂದೂ ಜವಾಬುದಾರಿ ಇರುವುದಿಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟಪಡಿಸಿದೆ.

ಈ ಏಲಂ ಪ್ರಕಾರ ಕ್ರಯಕ್ಕೆ ಪಡಕೊಂಡ ಆಸ್ತಿಯ ಮುಂದಿನ ಯಾವತ್ತೂ ಲಾಭನಷ್ಟಕ್ಕೆ ಕ್ರಯಗಾರನೇ ಜವಾಬುದಾರನಾಗಿರತಕ್ಕದ್ದು.

ಮಾರಾಟಮಾಡುವ ಸ್ಥಿರಾಸ್ತಿಗಳ ಶೆಡ್ಯೂಲು.

ಗ್ರಾಮದ ನಂಬ್ರ	ಸರ್ವೆ ನಂಬ್ರ	ಸಬ್ ಡಿವಿಜನ್ ನಂಬ್ರ	ಕಿಸಂ	ಎಸ್ಟೇರ್		ತೀರ್ವ		ಬ್ಲಾಕ್ ಸರ್ವೆ ನಂಬ್ರ	ಶರಾ
ಮಂಗಳೂರು ತಾಲೂಕಿನ ಮೊದಲನೆಯ ಸೆಟ್ಲ್‌ಮೆಂಟಿನ ಸರ್ವೆ ನಂಬ್ರ ಗ್ರಾಮದ ಕೆಳಗೆ XII ನೇ ಸೆಟ್ಲ್‌ಮೆಂಟಿನ ಸರ್ವೆ ನಂಬ್ರ ಗ್ರಾಮಕ್ಕೆ ಸೇರಿದ ಪಟ್ಟಾ	700	1	ಬಾಗಾಯ್ತು	1	58	12	10	XII 4-94	ಈ ಮೇಲಿನ ಸ್ಥಿರಾಸ್ತಿಗಳ ಪೈಕಿ ಸರ್ವೆ ನಂಬ್ರ 700ರ ಪೈಕಿ ಸುಮಾರು 1 ಎಕ್ರೆ ಜಾಗವು ಕೆಂಪು ಕಲ್ಲಿನ ಕೋಟೆಯಿಂದ ಸುತ್ತುವರಿದಿರುತ್ತದೆ.
708	"	ಡಿ	0	13	1	9	XII 4-49	
649	1B	ಡಿ	Sq. ft.	84848	7	9	XII 1-5	
649	"	ಡಿ	Sq. ft.	2614	0	12	XII 1-5	
779	"	ಡಿ	0	6	0	8	XII 6-56	

ಈ ಮೇಲಿನವು ಇರುವ ಉಪಕ್ಷೇತ್ರಗಳು ಬಳ್ಳಿ ಪಾತ್ರಪ್ಪದ ಹಂಚು ಛಾವಣಿ ಮನೆಗಳು, ತೆಂಗು, ಹಲಸು, ಮಾವು ಜಗೈರೆ ಮರಮಟ್ಟುಗಳು ಸರ್ವಾದಿ ಆಗುತ್ತವೆ.

ಮಂಗಳೂರು,
ತಾ. 10—5—1937

Mijar Govind Pai
ಹೋಲ್ಡರ್ ಆಫ್ ಎಟೋರ್ನಿ ಹೋಲ್ಡರ್.

N. B. ಮೇಲಿನ ಆಸ್ತಿಯ ವಿಚಾರ್ಯಗಳಲ್ಲಿ ಹೆಚ್ಚಿನವರು ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಉಡುಪಿ ಲಿಮಿಟೆಡ್ ಮಂಗಳೂರು ಬ್ರಾಂಚ್ ಪಿಸಿಯೂರಿನ ಮೇಲೆ ಅಂಚೆ 11ರಿಂದ ಸಾಯಂಕಾಲ ಅಂಚೆ ೪ರ ತನಕ ಬ್ಯಾಂಕಿಗೆ ರಜ ಇರುವ ದಿವಸಗಳಲ್ಲಿ ತಿಳಿಸಬಹುದು.

ತಾಲೂಕುಗಳಿಂದ

[illegible]ನೇ ಶನಿವಾರ ಪೂರ್ವಾಹ್ನ ಸ್ಥಳೀಯ ಕೇಂದ್ರದ ಮೂಲಪಾಠಶಾಲಾ ಅಧ್ಯಾಪಕ ಸಂಘದ ವಾರ್ಷಿಕ ಸಭೆಯು ಎಮ್ಮೆಕೆರೆ ಬೋ. ಹಾ ಎ. ಶಾಲಾ ಉಪಾಧ್ಯಾಯ ಶ್ರೀ ವೈ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಕೂಡಿಬಂದು, ಸದುದ್ದೇಶಕ್ಕಾಗಿ ಸಾರದಿ ವಾಚನ, ಶ್ರೀ ಬಿ ವಾಮನ ಪಡಿಯಾರರವರ ಮಾಡಿರಿ ಪಾಠ, ಸರ್ಕಾಲಾಬಗಳ ಅವಗಾಹನೆ, ಅಧ್ಯಕ್ಷರ ಸುರಭಾಷಣವೇ ಮುಂತಾದ ಉಪಯುಕ್ತ ಕಾರ್ಯಕ್ರಮಗಳು ಯೋಗ್ಯರೀತಿಯಲ್ಲಿ ಜರಿಗಿದ ಬಳಿಕ ಧನ್ಯವಾದಗಳೊಂದಿಗೆ ಸಭೆಯು ಕೊನೆಗೊಂಡಿತು

ಕಾರ್ಕಳ

ದಕ್ಷಿಣ ಕನ್ನಡ ಗ್ರಾಮೋದ್ಯಾರ್ಥ ಸಂಘದ ಈ ಊರಿನ ಶಾಲೆಯಲ್ಲಿ ಮೂರನೆಯದಾದ ಪ್ರಾಯಶ್ಚಿತ್ತ ಶಿಕ್ಷಣ ಕೇಂದ್ರವು ಈ ತಿಂಗಳ ಕೊನೆಯ ಅಥವಾ ಸವಂಬರ ತಿಂಗಳ ಮೊದಲನೆಯ ವಾರದಲ್ಲಿ ಸ್ಥಳೀಯ ಭೂತಗುರಿಯಲ್ಲಿ ತೆರೆಯಲ್ಪಡುವುದು. ಅಸುಪಾಸಿನ ಪ್ರಾಯಶ್ಚಿತ್ತಿಕ್ಷಿತರು ಸಂಘದ ಕಾರ್ಯದರ್ಶಿಗಳಿಗೆ ಮುಂದಾಗಿ ತಮ್ಮ ಹೆಸರುಗಳನ್ನು ಕೊಟ್ಟು ಈ ಕೇಂದ್ರದಿಂದ ದೊರೆಯಿಂವ ಪೂರ್ಣ ಪ್ರಯೋಜನವನ್ನು ಪಡೆಯ ವರಾಗಿ ಭರವಸೆ ಇದೆ

ಕಾರ್ಕಳ ಬೋರ್ಡು ಹೈಸ್ಕೂಲು ಮತ್ತು ಉಡುಪಿ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಉಡುಪಿಯಲ್ಲಿ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕಾರ್ಕಳ ಹೈಸ್ಕೂಲಿನ ವಿದ್ಯಾರ್ಥಿಗಳು ಒಂಕ್ಕೂ ಮೊದಲ ಹೆಚ್ಚಿದ ಸ್ಕೋರುಗಳನ್ನು ಪಡೆದು ಪ್ರಬಲವಿರೋಧವನ್ನು ಸಂಪಾದಿಸಿರುವದು ಕಾರ್ಕಳಕ್ಕೆ ಗೌರವವನ್ನು ತರುವ ಸಂಗತಿಯಾಗಿದೆ

ತಾ. ೧೫-೧೧-೧೯೩೫ರ ದಿನ ಮುದ್ರಾಧಿಕಾರಿಯಲ್ಲಿ ಶ್ರೀ ನಾರಿರಾಜ ಕಲ್ಯಾಣ್ಕರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರುಗಿ ಕರ್ನಾಟಕಿದ ವಕೀಲರಾದ ಅವಧ್ಯಕ್ಷತೆಯು ಸುರಿತ ಭಾಷಣಗಳಾಗಿ ಈ ಜಿಲ್ಲೆಯಲ್ಲಿ ಸಹಾಸುಧೂತಿಯನ್ನು ತೋರಿಸುವ ನಿಣಾಯವು ಸರ್ವ ಪ್ರಮತಿಯಿಂದ ಮಂಜೂರಾಗಿದೆ ತಾಲೂಕಿನ ಈ ಒಂದು ಹಳ್ಳಿಯಲ್ಲಿ ತೋರಿಸಿದ ಮಾರ್ಗದ ಸದಾಸನ್ನು ಇತರ ಹಳ್ಳಿಪ್ರಿಗಳು ಪೇಟಿಪ್ಪಟ್ಟಿಗಳು ಅನುಸರಿಸುವರಾಗಿ ನಂಬುತ್ತೇನೆ

ಕಾರ್ಕಳ ತೆಂಕಲ್ಲ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ತಾ ೧೬-೧೧-೧೯೩೫ರ ದಿನ ಟೌನಲ್ ಬಾಯ್ಸ್ ಸ್ಕೂಲಿನಲ್ಲಿ ಕಾರ್ಕಳ ತೀರ್ಥ ಹಿರಿಯ ಇನ್ಸ್‌ಪೆಕ್ಟರ್ ಶ್ರೀ ಬಿ ವೆಂಕಟಪ್ಪಯ್ಯ ಮಲ್ಯರ ಅಧ್ಯಕ್ಷತೆಯಲ್ಲಿ ಜರಿಗಿತ ಕಾರ್ಯದರ್ಶಿಯಾದ ಶ್ರೀ ಪಾಂಡುರಂಗರಾವ್ ವಿವರಿಸಿದ ಸರ್ಕಾರದವರ, ಮತ್ತು ವಾದರಿ ಪಾಠದ ಬಳಿಕ ಎದು ವರ್ಷಗಳಲ್ಲಿ ಸಾಧ್ಯರಿತೆಯ ಪ್ರಗಾರವಾದ ವಿಷಯ ಶ್ರೀ ಕಟಿಪಾಡಿ ಶ್ರೀಧರ ಪಾಯಿ ಪೆಜ್ಮೆಯವರ ಭಾಷಣ, ಶ್ರೀ ಹೊಂಬ ಜೆಟ್ಟರು ಹೊಸ ವರ್ಷಕ್ಕೆ ಕಾರ್ಯದರ್ಶಿಗಳಾಗಿಯೂ, ಶ್ರೀ ರಾಮ ಕೃಷ್ಣ ಸಾಯಕರು ತಾ ೧೩-೧೧-೧೯೩೫ರ ದಿನ ನಡೆಯುವ ತಾಲೂಕು ಉಪಾಧ್ಯಾಯರ ಸಂಘದ ಕಮಿಟಿ ಸಭೆಗೆ ಪ್ರತಿನಿಧಿಗಳಾಗಿಯೂ ಆಯಾವಧಿಯಾದ ಸಂಘದ ಮುಂದಿನ ಸಭೆಯು ತಾ ೩೦-೧೧-೧೯೩೫ರ ದಿನ ನೈನ ಎಲಿಮೆಂಟರಿ ಶಾಲೆಯಲ್ಲಿ ಕೂಡಬೇಕಾಗಿ ನಿರ್ಣಯವಾಗಿ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಮುಗಿಯಿತು.

ಇಲ್ಲಿಯ ಕಾಸ್ಮಪೋಲಿಟನ ಕ್ರಿಕೆಟ್ ಕ್ಲಬ್ ಮತ್ತು ಉಡುಪಿಯ ವ್ಯಾ. ಯಸ್ ಸಿ. ಸಿ. ಯಲ್‌ರೊಳಗೆ ಉಡುಪಿಯಲ್ಲಿ ನಡೆದ ಕ್ರಿಕೆಟ್ ಪಂದ್ಯಾವಳಿಲ್ಲ ಕಾಸ್ಮೊಪೊಲಿಟನ ಕ್ಲಬ್ ಗೆದ್ದಿರುವುದು ಆನಂದದಾಯಕವಾಗಿದೆ.

ಕೆದಿಂಜೆ

ಇಲ್ಲಿಯ ಮಹಾತ್ಮಾ ಗಾಂಧಿ ಕ್ಲಬ್ಬಿನ ಸೌಜನ್ಯದಿಂಗ ಕಮಿಟಿಯ ಸಭೆಯು ಇಂದೇ ತಾ ೩೬-೧೦-೩೬ರಲ್ಲಾಲ್ಲು ಮ್ಯಾರಿಂದಿಂ ದಾಸ ಹೆಗ್ಗೆಯರ ಅಧ್ಯಕ್ಷತೆಯಲ್ಲಿ ಜರಿಗಿ ಕೆದಿಂಜೆ ಸುತ್ತು ಬೋಳ ಗ್ರಾಮಗಳಲ್ಲಿ ಸಂಘವು ಶಾಖೆಗಳನ್ನು ಸ್ಥಾಪಿಸುವರ ರಿ. ಬೊ. ಪಂಚಾತಾಫೀಸರನ್ನು ಇಲ್ಲಿಕೊಳ್ಳಬೇಕೆಂದು ಕರಾವು ಪಾಸಾದ ಮೇಲೆ ರಾ. ಬಿ ಸಲ ಜೆಗ್ಡೇರು ಸಂದೇಶ ಬೆ ಹಾಯಿರ್ ಎಲಿಮೆಂಟರಿ ಇಲೆಯನ್ನು ಸರಕಾರದವರು ತೆಗೆದುದನ್ನು ಪಿಸೇದಿಸುವ ನಿರ್ಣಯವನ್ನು ತಂದರು. ಅದಕ್ಕೆ ಅಧ್ಯಕ್ಷರು ಶಾಲೆ ಮುನ್ನು ಕೊಂಗ್ರೆಸ್ಸಿನವರ ವಿದ್ಯಾವಿಲಾಪಿಯ ಸುಧಾರಣೆ ಯ ಕಾರ್ಯಕ್ಕೆ ಆನುಕೂಲವಾಗುವಂತೆ ತೆಗೆದಿಲಾಪಿ ತಿಗಿಯೂ ಅದರ ವಿಷಯ ಕೂಲಂಕುಷವಾಗಿ ತಿಳಿಯುವ ಇಚ್ಛೆ ಯಿತ್ತುದನ್ನು ನಾವು ಮಾಡಬಾರದಾಗಿಯೂ ಮುಂತ್ತು ಕಾಂಗ್ರೆಸ್ಸಿನ ಪತ್ರಿಗಳಲ್ಲಿ ನಮಗೆ ವಿಶ್ವಾಸವಿಲ್ಲ ಎಂದು ಹೇಳಿ ಕೆಲವು ಪ್ರೇಕ್ಷಕ ಮೇರೆಗೆ ಕರಾವು ಬಿಡಗೆಯಲ್ಲಾಲ್ಲು.

ನಾರಾವಿ

ಇಲ್ಲಿಯ ಯಕ್ಷಗಾನ ಸಂಘದ ಮೂರನೇ ವರ್ಷದ ವರ್ಧಂತಿ ಮಹಾಸಭೆಯು ಕಳೆದತೊಂಗಳಿಂಗಳನೇ ವಿಜಯ ಕಮಿಟಿಯ ದಿವಸ ಮ. ಶಾ. ರಾ. ವಕೀಲ್ ದುರ್ಗ ವೆಂಕಟೇಶ ಭಟ್ಟು ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ಘಂಟೆ ೨೦ರಿಂದ ಪ್ರಾರಂಭಿಸಿ ಇಳಿಗಂಟೆ ವರೆಗೆ ಜರಿಗಿಸಲ್ಪಟ್ಟಿತು. ಸುಮಾರು ಒಂದು ಸಾವಿರ ಜನರು ನೆರೆದಿದ್ದರು ರಾಬರ್ಟ್‌ಸನ್‌ಪೇಟೆ ಪ್ರಾಥಮಿಕರಾದ ಶ್ರೀ ಕೆ ಸಂಜೀವ ಶೆಟ್ಟಿಯವರು ಓದಿ ಸಭೆಯ ಮುಂದಿಟ್ಟರು. ಹೊಸ ವರ್ಷಕ್ಕೆ ಮುಂಡಿರಿಸಲಾದ ಈ ಸಂಘಕ್ಕೆ ೩೩ ಜನರು ಮೆಂಬರರಾಗಿ ಚುನಾಯಿಸಲ್ಪಟ್ಟರು. ಸಂಘದ ನಿರ್ಣಯಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಕಾರದಾ ಪೂಜೆ, ಭಾಷಣಗಳಾದಿಸಂತರ ಸಂಘದ ಅಧ್ಯಕ್ಷರು ಸಭಿಕರಿಗೂ ಸಭಾಧ್ಯಕ್ಷರಿಗೂ ಧನ್ಯವಾದಗಳನ್ನು ಅರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು

ಶಿರ್ವ

ಬೊಂಬಾಯಿ ಪ್ರಮುಖ ಲೇಖಕ ಮುಖಂಡರೂ ಕಾಂಗ್ರೆಸು ಕಲಸಗಾರರೂ ಆದ ಶ್ರೀಯುತ ಮುದ ಸಪ್ಪ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೬-೧೦-೩೬ನೇ ಆದಿತ್ಯವಾರ ಒಂದು ಸರ್ವಜನಿಕ ಸಭೆಯು ಇಲ್ಲಿಯ ಬೋರ್ಡು ಶಾಲೆ ಎಲ್ಲಾ ಸಮಾಭಾವದಲ್ಲಿ ಮುಂದಿನ ವಿಚಾರಗಳ ಪ್ರಸ್ತಾವನೆಯು ಕಾರ್ಯದರ್ಶಿಯಿಂದಾದ ಬಳಿಕ ಮಿ ಎಂ ಪಿ ಫೆರ್ನಾಂಡಿಸರು ತಮ್ಮ ಅಗಾಧ ಗಾಂಭೀರ್ಯ ಹುಡುಕಿಯರ ಶಾಲೆಗೆ ಅವಶ್ಯಕತೆಯನ್ನು ಮಿ ಎಂ ಪಿ ಸಿಲೇರಿಯರು ಬೋ ಪ್ರು ಶಾಲೆಗ ತಾವೆಲ್ಲರ ಉತ್ಸಾಹದಿಂದ ಬೆಂಬಲವಿಯಬೇಕಾದ ಆವ್ಯಕ್ತ ವ್ಯನ್ನು ಎಂ ಪಿ ನಾರಾಯಣ ಹೆಗ್ಗಡೆ ಕೆ. ಸಂಜೀವ ಹೆಗ್ಗಡೆ ಎಂ ಸಂಕಪ್ಪ ಹೆಗ್ಡೆ, ಕೆ ಪುಂಡಾಲಬಲ ಶೆಟ್ಟಿ ಮುಂತಾದವರು ಶಿರ್ವಕ್ಕೆ ಒಂದೊಪಗಿದ ಇಂದಿನ ಪರಿಸ್ಥಿತಿಯಲ್ಲಿ ಮುಂಡುವರಿಯುವುದರ ಸಾಧ್ಯಾ ಸಾಧ್ಯತೆ ಯನ್ನು ಬಲಪಡಿಸಿ ದವರ ಪರಿಣಾಮವನ್ನು ವಿವರಿಸಿದರು.

ಶ್ರೀಯುತ ನಾರಾಯಣ ಶೆಟ್ಟಿಯವರು ಸಾರ್ವಜನಿಕರಿಕ, ಪ್ರಗತಿಪರ ಶಿಕ್ಷಣದ ಅವಶ್ಯಕತೆಯ ವಿವರಿಸಿ ದಿಕ್ಸೂಚಿ ಇಟ್ಟಿಲೆ ಸ್ಪೃಷ್ಟಗಳಲ್ಲಿ ಒಡಕರ ತಲೆಯೆತ್ತಿಯುವ ಧಾರ್ಮಿಕ ಸಂಘರ್ಷಗಳಾದ ಪರಿಣಾಮವನ್ನೂ, ನಾವಿನ್ನಿ ದರಿ ಕಾಂಗ್ರೆಸ್ ಸರಕಾರಕ್ಕೆ ಕೊಡಬೇಕಾದ ಬೆಂಬಲ ಅವಶ್ಯಂ ಕೇಳಬೇಕಾದ ಅಪೇಕ್ಷೆಗಳನ್ನೂ ಸರಳವಾಗಿ ಹೇಳಿ ಸಾರ್ವಜನಿಕ ರಂಲೆಯಾದ ಹುಡುಗಿಯರ ಶಾಲೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು. ಶ್ರೀ ಬಿ ಮಂಜು ನಾಥ ನಾಯ್ಕರು ಶ್ರೀ ಶೆಟ್ಟಿಯವರ ಮಾತಿಗೆ ಸಸ್ಯರ್ತಿ ಸುತ್ತಾ ಜಾತಿ ಬೇದವಿಲ್ಲದೆ ಸರ್ವ ಮಕ್ಕಳಿಗೆ ಯೋಗ್ಯರೀತಿ ಯ ಶಿ ಕೆ ದೊರೆಯುವ ಶಿಕ್ಷಣಕ್ಕೆ ಸ್ಪಾರ್ಥದಿ ದೃಷ್ಟಿಯಿಂ ದ [illegible] ಸಮ್ಮಗಿರುವುದು ಹಂಯಿಲ್ಲವೆಂ ಗಾ ಸಂಖ್ಯಾತೆಗೆ ಕಾಂಗ್ರೆಸ್ ಸರಕಾರವು ಕೊಡಲಿ ಸಬ್ಸಿಯನ್ನೆಂದೂ, ವರ್ತನೆ ಕ್ರಿಯು ಮಂದಿಯವರೆಸುವು ದರಲ್ಲಿ ದೆಯೆಂದೂ ಅವೇಕ್ಷಿಯುಕ್ತವಾಗಿ ಹೇಳಿದರು ಗಳಾಧ್ಯಕ್ಷರಿ ರಬ್ಬಿ ಜಂಪೋಟಿನದ ಆದಿ ಅಂತ್ಯವನ್ನು ದೃಷ್ಟಾಂತವಾಗಿ ಕೊಡುತ್ತಾ ಜೊಬ್ಬೆ ಚೇರನಾಗಿ ಮತ್ತು ಒಡತನದ ಧರ್ಮಕ್ಕಾಗಿ ದುರಿಯುವೇಳು ದುರಿಯು ವವರೆಗೆ ಸ್ವತಾಪೇಕ್ಷೆಗಿದ್ದರಿಂ ದೇಶಕ್ಕಾಗಿ ಹೋರಾಡಿ ಕಮ್ಮ ಸಂಘಶಕ್ತಿಯನ್ನು ತೋರಿಸಬೇಕು ಎಂದು ಹೇಳಿ ಬೋರ್ಡು ಶಾಲೆಯ ಅವಶ್ಯಕತೆಯನ್ನು ಸ್ಪಷ್ಟವಾಗಿ ವಿವರಿಸಿದರು

ಆನಂತರ ಪ್ರಮುಖವಾದ ನಾಲ್ಕು ಕರಾವುಗಳು, ಶಾಲಾಭಿವೃದ್ಧಿಗಾಗಿ ಶ್ರೀ ಕೆ ಸಂಜೀವ ಶೆಟ್ಟಿ, ಬಿ ಅಪ್ಪಿಪೆಂಣ್ಣ ನಾಯ್ಕ, ಮಿ ಎಂ ಜೆ ಸಲೀಕ ಇವರಿಂದ ಮುಂತಲ್ಲಟ್ಟು ಸರ್ವಾನುಮತದಿಂದ ಮಂಜೂರಾಪಡಿ ಗ್ರಾಮರ್ಥ ಪ್ರತಿ ಮನೆಗೂ ಹೋಗಿ ಕೆಲಸಮಾಡುವ ಕಮಿಟಿಯು ನಿರ್ಮಾಣಾಗಿ ಮರುದಿನವೇ ಕಾರ್ಯಕ್ಕಾ ರಂಭವೂ ಆಯಿತು.

ಇದೇ ದಿನ ಬೆಳಿಗ್ಗೆ ಸುಮಾರು ಐಂಕ್ಕೆ ಮೇಲ್ಪಟ್ಟು ಬಾಲಕ ಬಾಲಕಿಯರ ಮತ್ತು ಗ್ರಾಮಸ್ಥರ ಪ್ರಭಾತ ಫೇರಿಯು ಮೆರವಣಿಗೆಯೊಂದು ರಾಷ್ಟ್ರಧ್ವಜಾಭ್ಯುದಯದಿಂದ ಹೊರಟು ಮಂಜಕಲ್ ಪೇಟೆಯ ಉದ್ದಕ್ಕೂ ಒಂದು ರಡು ಮೈಲುಗಳನ್ನು ಹಾದು ಹೋಯಿತು. ರಾಷ್ಟ್ರದ ದೃಷ್ಟಿದಾರಿಗಳಾದ ಈ ಮಕ್ಕಳ ಸುರವಾದ ರಾಷ್ಟ್ರಿಯ ಹಾಡುಗಳು ಹೊಸ ತಯೊತಿಯಿಂದ ಹಳ್ಳಿಗಳನ್ನು ಆಹ್ವಾನಿಸುವಂತಿದ್ದುವು. ಶ್ರೀ ಅದಿಕ್ಯವಾರವೂ ಬಿಡದೆ ಪ್ರಭಾತ ಫೇರಿಯಿಂ ಫಲಿಯನ್ನು ಪಾರ್ಥಾಡು ಮಾಡಿರು ತ್ತಿದೆ.

ಮಂಜೇಶ್ವರ—ಇಲ್ಲಿಯ ರೈಲ್ವೆ ಸ್ಟೇಷನಿಗೆ

ಹೋಗುವ ದಾರಿಯಲ್ಲಿರುವ, ತೇಂದಿ ಗುತ್ತಿಗೆಯ ಮೂಲಕ ಳಳ್ಳುಕುಡಿಯರ ಉಪಪ್ರವಪ್ತಿ ಬಹಳ ಹೆಚ್ಚಾಗಿ ತೆಪ್ಪಿಯುವುದರಿಂದ, ಸದ್ರಿ ಳಳ್ಳಿಕ ಗರಂಗಳ್ಳು ಸದ್ರಿ ಸ್ಥಳದಿಂದ ತೆಗೆಯಿಸಬೇಕೆಂದು ಇಲ್ಲಿಯ ಜಮಾಜರ ಮೂಲಕ ಕಲೆಕ್ಟರ್ ಜೋಸೆಗಳವರಿಗೆ ರವಾನಿಸಲಾಗಿದೆ. ಈ ತೇಂದಿ ಗುತ್ತಿಯು ರೈಲ್ವೆ ಆಫೀಸಿಗೆ ಹತ್ತಿರವಿದ್ದು ಸಾರ್ವಜನಿಕ ನೆಮ್ಮದಿಗೆ ಭಂಗ ಬರುವಂತಾಗಿದೆ. ಮತ್ತು ಈ ಗುತ್ತಿಯು ರೈಲ್ವೆ ಮಾರ್ಗಕ್ಕೂ ಸಮೀಪವಿದ್ದುದರಿಂದ ಳಳ್ಳುಕುಡಿಯು ಮತ್ತ ರಾಜವರಿಗೂ, ರೈಲ್ವೆ ಅಧಿಕಾರದ ಭಯವೂ ತುಂಬಾ ಇದೆ. ಆಮದರಿಂದ ಸರಕಾರದವರು ಸದರಿ ಗುತ್ತಿಗೆ ಯನ್ನು ಸದ್ರಿ ಸ್ಥಳದಿಂದ ತೆಗೆಯಿಸಬಹುದಾಗಿ ಆತಿಸ ಯಲ್ಲಿ ಮಾಮರು ಹೋಳುವ ಕೆಲಸಕ್ಕೆ ಪ್ರಾರಂಭಿಸಿದು ತ್ತಾರೆ.

ಶ್ರೀಮತಿ ಕಮಲಾ ದೇವಿಯವರು ಳಳ್ಳಕ್ಕಿದ್ದಲ್ಲಿ ಜರಗಲಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಗೆ ಹೋಗಿರುವುದಾಗಿ ತೀರ್ಮಾನಿಸಿದ್ದಾರೆ.

ತಾ. ೨೬-೧೦-೩೬ಕ್ಕೆ ಸರಿಯಾಗಿ ಸರ್ವಜನಿಕ ಶಿಕ್ಷಣ ಕೇಂದ್ರದಲ್ಲಿ ಸಂಘದ ಸಾಯಂಕಾಲ ೫ ಗಂಟೆಗೆ ಸಮ್ಮೇಳನ ಜರಿಗಿ ಹಲವು ಮಹನೀಯರಿಗೆ ಕೊರೆನೇಷನ್ ಮೆಡ್ಲ್‌ಗಳನ್ನು ಪಂಚುವ ಸದುದ್ದೇಶವು ಮುನ್ಸಿ ಜಿಲ್ಲಾ ಕಲ್ಲೆಕ್ಟರರಿಂದ ಜರಿಗಿಸಲ್ಪಟ್ಟಿತ್ತು.

ಈಕೆ ಶುಕ್ರವಾರ ಸಂಜೆ ಮಂಗಳೂರು ನಗರ ಸಭೆಯ ಸದಸ್ಯರು ಮಂಗಳೂರು ಸಭೆಯ ಕಮಿಷನರ್ ಶ್ರೀ ಆರ್ ಕರುಣಾಕರ ಮೆನೋನ್‌ನನ್ನು ಬಹುಮಾನಿಸುವ ಒಸ್ಕೆ ನರ್ಪಿಸಿದ ಉಪಹಾರ ಸತ್ಕಾರ ಕೂಟವು ಬಹಳ ವಿಜೃಂಭಣೆಯಿಂದ ನೆರವೇಸಲ್ಪಟ್ಟಿತ್ತು. ಅನೇಕ ಮುಂದಿ ಅಧಿಕಾರಿಗಳೂ ಊರ ಮಹನೀಯರೂ ಮುಕ್ತಿಯಿಂದ ನೆರೆದಿದ್ದರು

ತಾ ೧೦-೧೧-೩೬ರಿಂದ ಮಂಗಳೂರು ಬ್ಯಾಟ್ ಹೌಸಿನಲ್ಲಿರುವ ಮುನಿಸಿಪಲ್ ಧರ್ಮಾರ್ಥ ವಾಚನಾಲಯವು ಪ್ರತಿ ಶನಿವಾರ ಸಂಜೆ ಹೆಗಲಕಂಗಿನಿಂ ತೆರೆಯಿಡಾಗಿದೆ—ಎಂದು ಮುನಿಸಿಪಲ್ ಕೌನ್ಸಿಲರ ಕಮಿಷನರಾದ ಶ್ರೀ ಆರ್ ಕರುಣಾಕರ ಮೆನೋನ್, ಬಿ ಎ. ಬಿ ಎಲ್ ಇವರು ತಿಳಿಸುತ್ತಾರೆ

ಗಂನೇ ಪುಟದನ್ನು ನೋಡುವುದು

ಉಡುಪಿ

[ಸಮ್ಮ ಸ್ವೆತ ಒತ್ತಿದ್ದಾರರಿಂದ]

ತಾ ೨೬ನೇ ಸಾಯಂಕಾಲ ೫ ಗಾಗಿಗೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಸಾರ್ವಜನಿಕ ಸಭೆಯು ನಗರ ಸಭಾಧ್ಯಕ್ಷರಾದ ಶ್ರೀ ಎ ಲಕ್ಷ್ಮೀನಾರಾಯಣರಾಯ ಅಧ್ಯಕ್ಷತೆಯಲ್ಲಿ ಜರಿಗಿತು ಗಣ್ಯ ಸದಸ್ಯರು ಹಾಗೂ ರಿದ್ದರು ಪ್ರಾಥಮಿಕ ವಿದ್ಯಾಭ್ಯಾಸವನ್ನು ನಮಂದ ವರ್ಷದಿಂದ ಕಡ್ಡಾಯವಾಗಿ ಮಾಡಬೇಕೆಂದು ಶ್ರೀ ಎಲ್ ವಿಸ್ ನಾಯ ಕರ ಸೂಚನೆಯ ವಿದ್ಯುಸಭೆಯು ಕಾರ್ಯಾಲೋಚನೆಗೆದಿಲಾಯಿತ್ತು. ಹಿಂದೊಪ್ಪಿ ಭೋರ್ಡು ಹೈಸ್ಕೂಲನ್ನು ಮುನಿಸಿಪಾಲಿಟಿಯವರು ತೆಗೆದುಕೊಳ್ಳುವ ವಿಚಾರ ಒಂದಿದ್ದಾಗ ಕೆಲ ಕಾರಣಗಳಿಂದ ಅವನ್ನು ಮುಂದಕ್ಕಿ ಹಾಕಲಾಗಿತ್ತು. ಆದ ಬದಲಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯ ನಾಡುವ ಬಗ್ಗೆ ತಗಲಬಹುದಾದ ಸ್ಥಳ ಹೆಚ್ಚಿ ಸುವುದು ಮೇಲಾಪಾದಂದ ವಿದ್ಯಾಸಭೆಯಾಯಿತು.

ಸುರಿತ ಅನುಕೂಲ ಅಧಿಪತ್ಯಯವನ್ನೀಲಂ...ವರೆಂ ಹಾರೈಸಲಾಗುತ್ತದೆ ಮುನಿಸಿಪಲ್ ಕಾರ್ಮಿಲ್ಲಿ ರಾ ಮುಖಂಡರ ಭಾವಚಿತ್ರಗಳನ್ನಿಡುವ ವಿಷಯದ ಮಾಸಿ ವಿರ್ಮಿಂದ ಸದ್ಯ ಪರಿಗಣನೆಯಲ್ಲಿರುವುದು ಸಂತೋಷಕರವಾದ ಸಂಗತಿಯಾಗಿದೆ. ಕಾರಿದ ಹುಕ್ಕಂ ಒಂದಿದೆ ಅಯಾಯ ಸೂಚನೆಯಂ ಕೊಟ್ಟ ಮಹಾಯೋಧರು ತಂತಮ್ಮ ಬಂಟ್ಟಿನ ಭಾವಚಿತ್ರಗಳನ್ನು ಮುನಿಸಿಪಾಲಿಟಿಗೆ ತಿಪ್ಪು ಬದಿಸಿಕೊಡುವರೆಂದು ಅಪೇಕ್ಷಿಸಲಾಗುತ್ತದೆ ಮುನಿಸಿಪಲ್ ವರದಿಯ ಮೇ ಜಿಲ್ಲಾ ಕಲ್ಕೆಕ್ಟರ ಮತ್ತು ಮುನಿಸಿಪಲ್ ಕೌನ್ಸಿಲ ಇನ್ಸ್‌ಪೆಕ್ಟರ ವಿರ್ಣಾಧಿಕಾರಿಗಳನ್ನು ಓದಲಾಯಿ ಬ್ಯಯಕ್ಕಾ ಮುನಿಸಿಪಾಲಿಟಿಯನ್ನು ರದ್ದುಮಾಡಿ ಕೆಂದು ಪದೇ ಪದೇ ಸಭೆ ಚರ್ಚಿಸಲಾಗಿ ಆಗುತ್ತಿರು ವಾಗಿ ತೆರಿಗೆಗಳು ಕೃಸ್ತರವಾಗಿ ವಸೂಲು ಆಗದಿ ವಾಗಿ, ಇರುವ ಸಿಬಂದಿಯೂ ಸಾಕಾಗದಿದ್ದುದರ ನಾಲ್ಕು ನೌಕರನ್ನು ಹೆಚ್ಚಿಗೆ ನೇಮಿಸಲಾಯಿ ಹಾಜಿ ಅಬ್ದುಲ್ಲಾ ಸ್ಕೂರಿಕ ಕಮಿಟಿಯವರು ಗಾ ಸ್ಥೈರ್ಯದಲ್ಲಿ ಈಚೆಗೆ ನಿರ್ಮಿಸಿದ ಸಾರ್ವಜನಿ ವ್ಯಯಾನು ಶಾಲೆಯನ್ನು ಮುನಿಸಿಪಲಿಟಿಯವ ಹೆಗೆದುಕೊಂಡು ಬೇಲ್ಕಾದಾರ ನೋಡುತ್ತಿರಬೇಕೂ ಬಂದ ಮನವಿಯನ್ನು ಅಂಗೀಕಾರದ ಕಮಿಟಿಯ ಗಾಹನೆಗೆ ಇಡಲಾಯಿತು.

ಮುನಿಸಿಪಲ್ ಸಂಕಷ್ಟನಿವಾರಣ ಸಮಿತಿಯೊ ಸ್ಥಾಪನೆಯಾಗಿ ಮುನಿಸಿಪಲ್ ಬಾಕಿಗಳಲ್ಲಿ ಬೇರೆಯಾಗಿ ಸಭೆಗಳು ಏರಿಯಲ್ಪಟ್ಟು ಮುನಿಸಿಪ ಟಿಯು ಬೇಕಾ ಬೇಡವೆ ಎಂದು ಜನಮತ ಸಂಗ್ರಹಿಸಲಾಗುತ್ತದೆಯೆಂಬ ಸುದ್ದಿಯು ಪರಿಶೀಲನೆಯ ಕಂಡಿದ್ದು ಸಂತೋಷಕರವಾದ ಸಂಗತಿಯಾಗಿದೆ.

ಮಂಗಳೂರು.

ಸಮ್ಮತಿ ಹೊಂದಿದೆರು—ಕಳೆದ ಮೂವತ್ತು ವರ್ಷಗಳಿಂದ ಹಲವು ವಿಧದ ರೋಗಚಿಕಿತ್ಸೆಯನ್ನು ನಡೆಸುತ್ತಿದ್ದ ಇಲ್ಲಿಯ ಶ್ರೀ ಕಂಪೆನಿಯ ಮಾಲಿಕರಾದ ಶ್ರೀಯುತ ಸಿ. ಆರ್. ಕಾಮತರು ಮದ್ರಾಸಿನ ಸೆಂಟ್ರಲ್ ಬೋರ್ಡ್ ಆಫ್ ಇಂಡಿಯನ್ ಮೆಡಿಸಿನ್—ಈ ಸಂಸ್ಥೆಯಿಂದ ಸ್ವೀಕೃತಿಗಾಗಿ ಚಿಕಿತ್ಸೆ ನಡೆಸುವುದಕ್ಕೆ ಸಮ್ಮತಿ ಪತ್ರವನ್ನು ಹೊಂದಿದ್ದಾರೆ ಎಂದು ತೀರ್ಮಾನಿಸಿದೆ.

ಇದೇ ಬರುವ ನವಂಬರ ತಿಂಗಳ ತಾ. ೨೫ನೇ ಮಂಗಳವಾರ ಸಾಯಂಕಾಲ ೫-೩೦ಕ್ಕೆ ಸನ್ಮಾನಿಗಳಜ್ಜ ಯಲ್ಲಿ ಇಂದಿನ ಮಂಗಳೂರು ಅಧ್ಯ ಸಮಾಜ ಮಂದಿರ ದಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರ ಸಂಸ್ಮರಣೆಯ ಪ್ರಯುಕ್ತ ದಿನಾಚರಣೆಯೂ ಮಹಾರಾಜಶ್ರೀ ಡಾಕ್ಟರೇಟ್ ಪದವಿ ರಾದ ಶ್ರೀ ಆರ್ ಆಚಾರ್ ಎಂ. ಎ, ಎಲ್ ಎಲ್ ಬಿ ಯವರ ಅಧ್ಯಕ್ಷತೆಯಲ್ಲಿ ಜರಗುವುದು

ಈ ಸಂದರ್ಭದಲ್ಲಿ ಶ್ರೀಮತಿ ಮಂಜೇಶ್ವರ ಪಾರ್ವತಿ ಬಾಯಿ ವಾಸುದೇವರಾವ್ ಮತ್ತು ಶ್ರೀಮನ್ ಯನ್ ಯಸ್ ಶಿಲ್ಲಿಯವರೂ ಭಾಷಣ ಮಾಡುತ್ತಾರು ವರೆಂದು ಆರ್ಯ ಸಮಾಜ ಮಂಗಳೂರು ಇದರ ಅಧ್ಯಕ್ಷ ರಾದ ಯಂ ವಾಧವ ರಾವ್, ಬ

ನಂಬಿಗಸ್ಥ ಮಾತ್ರ!

ಗ್ಯಾರಂಟಿಯಾದ ಹೊಸ ಮೈಸೂರು ತರಕಾರಿ ಬೀಜಗಳು, ಕಾಲಕ್ಕೆ ಸರಿಯಾಗಿ ಗಿಡಗಳು ಮಾರಲ್ಪಡುತ್ತವೆ. ಬೆಂಗಳೂರಿನಲ್ಲಿರುವ ಇಂಗ್ಲೀಷ್ ನಮ್ಮ ನಾಟಿ ತರಕಾರಿಗಳು–ಹೂವ್ವುಗಳು–ಮಾರ್ಕೆಟ್ ತೆಗೆದ ಹಣ್ಣು! ಮಾಡಿ 1-0-0 ಬಂದಕ್ಕೆ 0-3-0 ಆಕ್ಕೆ ಕಮಿಷನ್ ಪಡೆಯುತ್ತೇವೆ. ರಸ ಪೂರ್ಣವಿನ ಹೂವ್ವುಗಳು 100ಕ್ಕೆ 2–8–0. ಕಿಡ್ವಾನ್ಸ್ ಇಲ್ಲದೆ ಆರ್ಡರ್ ವಿಯಲಾಗದು.

ವಿಳಾಸ —

The Royal Seed Co.,
Florists & Seedsmen, 27 Ilpay Thope
ULSOOR, BANGALORE

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ್ ಕಟ್ಟಿನ, ಸುಪರಿಯರ್ ಟೆಂಪ್ಟಿನ ಕಳೆ ಬಗೈರಿ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ತೇವಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಯಾಮುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸು ಪತ್ರಗಳನ್ನು ವಡೆದಿರುವ, ಎಕ್ಸ್‌ಪರ್ಟ್ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ್ ಫೆಶನ್ ನಗೆಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ತಾತ್ರಿಯಾಗುವುದು.

ಕೊಚ್ಚಿ ಕಾರ ವಾಸುದೇವ ಪೈ,
ಸರಾಫ್ ಮತ್ತು ಮೆಟಲ್ ಪರ್ಚಿಂಟ್,
ಬಡಗುಪೇಟೆ, ಉಡುಪಿ.

ಪ್ರಾಣಿಗಳಿಗಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ
ದಾನಿ ಆಕ್ಕೆ ...	3— 8	4— 0
ಮುಕ್ಕಡ ...	4— 6	4—18
ಗುಡ್ಡು ...	4—4	4—8
ಉದರ ಅರ್ಧಲ್ ಬೆಲ್ಲಕ್ಕೆ ..	4— 8	5—0
ರಂಗನಸು ಬೆ. ಸೋ ಆಕ್ಕೆ...	6 — 8	7— 4
ಎಲ್ಲಾರುಬೆ. ಮು. ಆಕ್ಕೆ...	3—14	4— 0
ಸೊಪ್ಪಿದ ಗೋಣಿ ಆಕ್ಕೆ .	12 — 8	15—8
ತೆಂಗಿನ ಗೋಣಿ ಆಕ್ಕೆ ...	11— 8	18— 8
